
ಗೌರಿ ಲಂಕೇಶರ


ಲಂಕೇಶ್

ಮೇ 9, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ಗೌಡ
ಕಾಂಗ್ರೈ
ನಂಟು

ಡೈವೋರ್ಸ್!



ಕಳೆದುಹೋಗಿದ್ದ ಅಪರೂಪದ ಸಂದರ್ಶನ



ವಣಗೆರೆ: ಆಯುಕ್ತ ಪ್ರಾಣಲಿಂಗನ ರಕ್ಷಣೆಗೆ ಕಸರತ್ತು

ಸ್ಕಾನ್ ಹಗಲು ದರೋಡೆ

ಂಪಯ್ಯನ ಅಳಿಯ
ೊಲೆ ಮಾಡಿದನೇ?

ಕಾವೇರಿ ವಿವಾದ: ಅದೇ ಕೋರ್ಟು, ಅದೇ ಮಾನದಂಡ
ತೀರ್ಪು ಮಾತ್ರ ಹೊಸದೇ?




ಕಾವೇರಿ ನ್ಯಾಯಮಂಡಲಿ ತೀರ್ಪಿನ ಬಗ್ಗೆ ಅಂತೂ ಇಂತೂ ನಮ್ಮ ರಾಜ್ಯ ಸರ್ಕಾರವೂ ಸಹ ಸುಪ್ರೀಮ್ ಕೋರ್ಟಿನಲ್ಲಿ ಮನವಿ ಸಲ್ಲಿಸುತ್ತಿದೆ. ಆ ಮನವಿಯಲ್ಲಿ ನ್ಯಾಯಮಂಡಲಿಯು ನೀರಿನ ಅವಶ್ಯಕತೆಯನ್ನು ಅಂದಾಜಿಸುವ ವೇಳೆಯಲ್ಲಿ ಕರ್ನಾಟಕಕ್ಕೊಂದು ಮಾನದಂಡ ಮತ್ತು ತಮಿಳುನಾಡಿಗೊಂದು ಮಾನದಂಡವನ್ನು ಅನುಸರಿಸಿರುವ ಬಗ್ಗೆ ಪ್ರಧಾನವಾಗಿ ಆಕ್ಷೇಪಣೆಯನ್ನು ಸಲ್ಲಿಸಲಾಗಿದೆ. ಎಲ್ಲಕಿಂತ ಮುಖ್ಯವಾಗಿ ಕಾವೇರಿ ನ್ಯಾಯಮಂಡಳಿಯು ವಸಾಹತು ಕಾಲದ ಏಕಪಕ್ಷೀಯ ಒಪ್ಪಂದಗಳಾದ 1924ರ ಮತ್ತು 1894ರ ಒಪ್ಪಂದಗಳನ್ನು ಮಾನ್ಯ ಮಾಡಿರುವ ಬಗ್ಗೆಯೂ ಆಕ್ಷೇಪಣೆ ಸಲ್ಲಿಸಿದೆ. ಇದು ಸ್ವಾಗತಾರ್ಹವೇ ಆದರೂ ಈ ಮುಂಚೆಯೇ ಕರ್ನಾಟಕ ಸರ್ಕಾರ ಏಕೆ ಈ ವಾದವನ್ನು ಮುಂದಿಡಲಿಲ್ಲ? ಮತ್ತು ಈಗಲಾದರೂ ಕೋರ್ಟುಗಳು ವಸಾಹತು ಮಾನದಂಡಗಳನ್ನು ತಿರಸ್ಕರಿಸುತ್ತದೆಯೇ? ಇದು ಅಷ್ಟು ಸುಲಭದ ಪ್ರಶ್ನೆಯಲ್ಲ ಏಕೆಂದರೆ ಆಗ ನಮ್ಮ ಪ್ರಭುತ್ವಗಳೂ ತಾತ್ವಿಕವಾಗಿ ನಮ್ಮ ವರ್ತಮಾನದಲ್ಲಿರುವ ಬಹುಪಾಲು ಕಾನೂನು ಮತ್ತು ನೀತಿಗಳನ್ನೇ ಬದಲಿಸಬೇಕಾಗುತ್ತದೆ. ಏಕೆಂದರೆ ನಮ್ಮ ಬಹುಪಾಲು ಕಾನೂನುಗಳು ವಸಾಹತು ಕಾಲದ್ದೇ ಮತ್ತು ವಸಾಹತು ನ್ಯಾಯ ಅಥವಾ ಅನ್ಯಾಯಗಳ ಮಾನದಂಡದ್ದೇ.

ಹೀಗಾಗಿ ವರ್ತಮಾನದಲ್ಲಿ ನ್ಯಾಯ ದೊರೆಯಬೇಕೆಂದರೆ ವಸಾಹತು ಕಾಲದ ಮಾನದಂಡಗಳಿಂದ ಸಂಪೂರ್ಣವಾಗಿ ಕಳಚಿಕೊಳ್ಳಬೇಕಾಗುತ್ತದೆ. ಸಂಪೂರ್ಣ ನಿರ್ವಸಾಹತೀಕರಣವಾಗದೇ ಪ್ರಜಾತಾಂತ್ರಿಕ ನ್ಯಾಯ ಸಿಗುವುದಿಲ್ಲ. ಹೀಗಾಗದಿರುವುದಕ್ಕೆ ಇನ್ನೊಂದು ಕಾರಣವೂ ಇದೆ. ಭಾರತದಂತೆ ವಸಾಹತು ಶೋಷಣೆಯಿಂದ ಮುಕ್ತವಾದ ಚೀನಾ ಮತ್ತು ವಿಯೆಟ್ನಾಂ ದೇಶಗಳು ವಸಾಹತುಶಾಹಿಯ ರಾಜಕೀಯ ಆಕ್ರಮಣದಿಂದ ಮಾತ್ರವಲ್ಲದೆ ಆರ್ಥಿಕ ಮತ್ತು ಸಾಂಸ್ಕೃತಿಕ ಹಿಡಿತದಿಂದಲೂ ವಿಮೋಚನೆ ಘೋಷಿಸಿಕೊಂಡು ಸಂಪೂರ್ಣ ನಿರ್ವಸಾಹತೀಕರಣಗೊಂಡವು. ಆದರೆ ಭಾರತ ಸ್ವಾತಂತ್ರ್ಯ ಘೋಷಿಸಿಕೊಳ್ಳಲಿಲ್ಲ. ಬದಲಿಗೆ ವಸಾಹತುಶಾಹಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಂದು ಕಾನೂನು ಮಾಡಿ ಭಾರತಕ್ಕೆ ಸ್ವಾತಂತ್ರ್ಯವನ್ನು ದಯಪಾಲಿಸಲಾಯಿತು. ಈ ಸ್ವಾತಂತ್ರ್ಯದ ರೂಪುರೇಷೆಯನ್ನು 1935ರಲ್ಲಿ ಬ್ರಿಟಿಷ ವಸಾಹತುಶಾಹಿಗಳೇ ರೂಪಿಸಿದ ಭಾರತ ಸರ್ಕಾರ ಕಾಯಿದೆಯಲ್ಲಿ ಸ್ಪಷ್ಟಪಡಿಸಲಾಗಿತ್ತು. 1947ರ ನಂತರವೂ ಅದೇ ಬಹುಮಟ್ಟಿಗೆ ಮುಂದುವರೆದಿದೆ. ಇಂದಿಗೂ ನಮ್ಮ ಪೊಲೀಸ್ ಇಲಾಖೆ ನಡೆಯುತ್ತಿರುವುದು ಪ್ರತಿಯೊಬ್ಬ ಭಾರತೀಯನೂ ಸಂಭವನೀಯ ಅಪರಾಧಿಯೆಂದು ಭಾವಿಸುತ್ತಿದ್ದ 1865ರ ವಸಾಹತುಶಾಹಿ ಕ್ರಿಮಿನಲ್ ಪ್ರೊಸಿಜರ್ ಕೋಡ್ ಅನ್ನು ಆಧರಿಸಿಯೇ. ಇಂದಿಗೂ ನಮ್ಮ ಅರಣ್ಯ ಕಾಯಿದೆಗಳು ಇಲ್ಲಿನ ಆದಿವಾಸಿಗಳನ್ನು ಕಳ್ಳರೆಂದು ಬಣ್ಣಿಸಿದ 1835ರ ಅರಣ್ಯ ಕಾಯಿದೆಯನ್ನು ಆಧರಿಸಿಯೇ ಅರಣ್ಯ ಕಾನೂನುಗಳು ರಚಿತವಾಗುತ್ತಿವೆ. 1894ರ ಭೂಸ್ವಾಧೀನ ಕಾಯಿದೆಯನ್ನು ಆಧರಿಸಿಯೇ ರೈತರ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿದೆ. ಇವೆಲ್ಲವೂ ಬ್ರಿಟಿಷರ ಮತ್ತು ಉಳ್ಳವರ ಹಿತಾಸಕ್ತಿಯನ್ನು ಕಾಯುವ ಮಾನದಂಡಗಳನ್ನೇ ಹೊಂದಿದ್ದವು. ಆದ್ದರಿಂದಲೇ ಯಾವ ಪ್ರಜಾತಾಂತ್ರಿಕ ಮಾನದಂಡಗಳಾಗಲೀ, ತರ್ಕವಾಗಲೀ ಇಲ್ಲದಂತೆ ಕಾನೂನುಗಳು ರಚಿತಗೊಂಡವು.

ಕಾವೇರಿ ಟ್ರಿಬ್ಯುನಲ್ ಅನುಸರಿಸಿರುವುದೂ 1924ರ ಮಾನದಂಡಗಳನ್ನೇ. ಏಕೆಂದರೆ ಈ ದೇಶ ನಡೆಯುತ್ತಿರುವುದೇ ಪರೋಕ್ಷ ವಸಾಹತುಶಾಹಿ ಮಾನದಂಡಗಳಿಂದ. ಹೀಗಾಗಿ ಪ್ರಜಾತಾಂತ್ರಿಕ ಮಾನದಂಡಗಳಿಲ್ಲದೆ ಅದೇ ಕೋರ್ಟು ಮತ್ತು ಅದೇ ಮಾನದಂಡಗಳು ನ್ಯಾಯ ಕೊಡಬಲ್ಲವೇ?

ಚಾರ್ವಾಕ
ಶಿವಸುಂದರ್



ಒಬಿಸಿ ಮೀಸಲಾತಿ: ಜಸ್ಟೀಸ್ ಡಿಲೇಯ್ಡ್ ಇಸ್ ಜಸ್ಟೀಸ್ ಡಿನಯ್ಡ್!!

ಇಂಗ್ಲಿಷಿನಲ್ಲಿ ಒಂದು ಮಾತಿದೆ. ಜಸ್ಟೀಸ್ ಡಿಲೇಯ್ಡ್ ಇಸ್ ಜಸ್ಟೀಸ್ ಡಿನಯ್ಡ್ ಎಂದು. ಅಂದರೆ ನ್ಯಾಯದಾನ ವಿಳಂಬವಾದರೆ ನ್ಯಾಯವನ್ನೇ ನಿರಾಕರಿಸಿದಂತೆ ಎಂದು. ಅಂದರೆ ಇಲ್ಲಿ ಮುಖ್ಯವಾಗುವುದು ನ್ಯಾಯ ಪಡೆಯಬೇಕೆಂಬ ಆತುರತೆಯದ್ದಲ್ಲ. ಬದಲಿಗೆ ಆಗುತ್ತಿರುವುದು ಅನ್ಯಾಯ ಎಂದು ಗೊತ್ತಾದ ಮೇಲೆಯೂ ಅನ್ಯಾಯವು ಒಂದು ಕ್ಷಣವೂ ಮುಂದುವರೆಯಬಾರದು ಎಂಬ ನ್ಯಾಯ ವಿವೇಚನೆ. ಈ ತತ್ವ ವಾಸ್ತವವಾಗಿ ನಮ್ಮ ನ್ಯಾಯಶಾಸ್ತ್ರದ ಆಡಿಪಾಯವೂ ಆಗಿದೆ ಎಂದು ಹೇಳಲಾಗುತ್ತದೆ. ಆದರೆ ಈ ತತ್ವ ಯಾವಾಗಲೂ ಎಲ್ಲರಿಗೂ ಸಮಾನವಾಗಿ ಈ ದೇಶದಲ್ಲಿ ಅನ್ವಯವಾಗುತ್ತಿದೆ ಎಂದೇನೂ ಹೇಳಲಾಗುವುದಿಲ್ಲ. ಉದಾಹರಣೆಗೆ ಇತ್ತೀಚಿನ ಒಬಿಸಿ ಮೀಸಲಾತಿ ವಿಷಯವನ್ನೇ ನೋಡಿ. ವಾಸ್ತವವಾಗಿ ಉನ್ನತ ಶಿಕ್ಷಣದಲ್ಲಿ ಒಬಿಸಿ ವರ್ಗಗಳಿಗೆ ಮೀಸಲಾತಿ ಕೊಡುವುದು ಸಂವಿಧಾನಬದ್ಧವೆಂದು ಸುಪ್ರೀಮ್‌ಕೋರ್ಟಿನ ಪೂರ್ಣ ಸದಸ್ಯರ ಪೀಠವೇ ಮಂಡಲ್ ಪ್ರಕರಣದಲ್ಲಿ ಸ್ಪಷ್ಟವಾಗಿ ತೀರ್ಮಾನ ನೀಡಿದೆ. ಆದರೂ 1931ರಷ್ಟು ಹಿಂದಿನ ಜಾತಿ ಗಣತಿಯನ್ನು ಆಧಾರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿತು.

ಆದರೆ ಪೂರ್ಣಪೀಠ ಕೂಡಾ ಗಣನೆಗೆ ತೆಗೆದುಕೊಂಡಿದ್ದು 1931ರ ಮಾನದಂಡವನ್ನೇ! ಏಕೆಂದರೆ ಈ ದೇಶದಲ್ಲಿ 1931ರ ನಂತರ ಜಾತಿ ಆಧಾರಿತ ಜನಗಣನೆ ನಡೆದೇ ಇಲ್ಲ. ಹೀಗಿರುವಾಗ ನ್ಯಾಯಮೂರ್ತಿ ಅರಿಜಿತ್ ಪಸಾಯತ್‌ರವರಿಗಾಗಿ ಮಾತ್ರ ಹೊಸ ಜಾತಿ ಆಧಾರಿತ ಜನಗಣನೆಯನ್ನು ಎಲ್ಲಿಂದ ತರಲು ಸಾಧ್ಯ? ಅದಕ್ಕೆಂದೇ ವಿಶೇಷವಾಗಿ ಜನಗಣತಿ ಮಾಡಲು ಸಾಧ್ಯವೇ? ಅದು ಸಾಧ್ಯವಿಲ್ಲವೆಂದು ಈಗಾಗಲೇ ಸಂಬಂಧಪಟ್ಟ ಇಲಾಖೆಗಳು ಹೇಳಿಬಿಟ್ಟಿವೆ. ಇನ್ನು ಹೊಸ ಜನಗಣತಿ ನಡೆಯುವುದು 2011ರಲ್ಲೇ. ಅಂದರೆ ಭರ್ತಿ ನಾಲ್ಕು ವರ್ಷಗಳ ನಂತರ. ಅಲ್ಲಿಯವರೆಗೆ ಇದೇ ಅನ್ಯಾಯ ಮುಂದುವರೆಯಬೇಕೆ?

ಅದರ ಬಗ್ಗೆ ಸನ್ಮಾನ್ಯ ನ್ಯಾಯಮೂರ್ತಿಗಳು ಹೇಳುವುದೇನು? "ನೀವು ಒಬಿಸಿ ಮೀಸಲಾತಿಗಾಗಿ 57 ವರ್ಷ ಕಾದಿದ್ದೀರಿ. ಇನ್ನೂ ಒಂದು ವರ್ಷ ಕಾಯಲಾರಿರಾ?" ಎಂದು! ಅಷ್ಟು ಮಾತ್ರವಲ್ಲದೆ "ನಾವು ಮಾರ್ಚ್ 29ರಂದು ಕೊಟ್ಟ ಆದೇಶ ಮಧ್ಯಂತರ ಆದೇಶವಲ್ಲ, ಬದಲಿಗೆ ಅದೇ ಅಂತಿಮ ಆದೇಶ.." ಎಂದು ಅಭಿಪ್ರಾಯಪಟ್ಟಿದೆ. ಇದು ನ್ಯಾಯದೇಶವೂ ಅಲ್ಲ, ವಿವೇಚನೆಯೂ ಅಲ್ಲ. ಹಸಿಹಸಿ ಮೇಲ್ಜಾತಿ ಪೂರ್ವಗ್ರಹವೇ ಹೊರತು ಬೇರೇನಲ್ಲ. ಏಕೆಂದರೆ ಮೇಲ್ಜಾತಿ ಮೇಲ್ವರ್ಗಗಳ ಹಿತಾಸಕ್ತಿಗೆ ಅಡ್ಡಿಯಾದ ಪ್ರಕರಣಗಳು ನಡೆದಿದ್ದರೆ ನ್ಯಾಯಾಲಯಗಳು ಇದೇ ರೀತಿ ಇಷ್ಟು ವರ್ಷ ಕಾದಿದ್ದೀರಿ ಇನ್ನು ಸ್ವಲ್ಪ ಕಾಯಿರಿ ಎಂಬ ಜೂರತ್ತನ್ನು ತೋರಿಸುತ್ತಿದ್ದವೆ?



SEZ ಆಯಿತು ಈಗ SAZ

ದೇಶದೆಲ್ಲೆಡೆ SEZ ಗಳು ರೈತರ ಭೂಮಿಯನ್ನು ಕಸಿದುಕೊಂಡು ಅವರನ್ನು ಬೀದಿ ಪಾಲು ಮಾಡುತ್ತಿರುವಾಗಲೇ ರೈತರ ಹಿತಾಸಕ್ತಿಯನ್ನೇ ಕಾಯಲೆಂದು ನೇಮಿಸಲಾಗಿದ್ದ ಕೇಂದ್ರ ಸರ್ಕಾರದ ಕೃಷಿ ಆಯೋಗವು SAZ ಎಂಬ ಹೊಸ ತೂಗುಕತ್ತಿಯನ್ನು ರೈತರ ಮೇಲೆ ಪ್ರಯೋಗ ಮಾಡಹೊರಟಿದೆ. SAZ- Special Agricultural Zone ಎಂದರೆ ವಿಶೇಷ ಕೃಷಿ ವಲಯವೆಂಬ ಈ ಹೊಸ ಮಾರಿಯನ್ನು ರೈತರ ಮೇಲೆ ಛೂ ಬಿಟ್ಟಿರುವವರು ಈಗಾಗಲೇ ಈ ದೇಶದ ಕೋಟ್ಯಂತರ ರೈತರ ಬದುಕನ್ನು ಕಸಿದುಕೊಂಡ ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್. ಸ್ವಾಮಿನಾಥನ್‌ರವರೇ.

ಅವರು ಈಗ ರೈತರನ್ನು ಎರಡನೇ ಹಸಿರುಕ್ರಾಂತಿಯೆಂಬ ಆತ್ಮಹತ್ಯೆಯ ಕೂಪದೊಳಗೆ ತಳ್ಳಲೂ ಎಲ್ಲಾ ನೀತಿಗಳನ್ನು ಸಿದ್ಧಗೊಳಿಸಿದ್ದಾರೆ. ಅದರ ಭಾಗವೇ Special Agricultural Zone -ವಿಶೇಷ ಕೃಷಿ ವಲಯ. ಸ್ವಾಮಿನಾಥನ್ ಅವರ ಪ್ರಕಾರ ಈ ವಿಶೇಷ ಕೃಷಿ ವಲಯವು ದೇಶಿ ಹಾಗೂ ವಿದೇಶಿ ಬೃಹತ್ ಕೈಗಾರಿಕೋದ್ಯಮಿಗಳಿಗಾಗಿಯೇ ಕಸಿದುಕೊಳ್ಳಲಾಗುತ್ತಿರುವ SEZ ವಿಶೇಷ ಆರ್ಥಿಕ ವಲಯಕ್ಕೆ ಪೂರಕವಾಗಿಯೇ ಇರುತ್ತದಂತೆ! ಇದು ಹೇಗೆ ಸಾಧ್ಯ?

ಬಡ ರೈತರ ಹಿತಾಸಕ್ತಿ ಮತ್ತು ದೊಡ್ಡ ಬಂಡವಾಳಿಗರ ಹಿತಾಸಕ್ತಿ ಒಂದೇ ಆಗಿರಲು ಹೇಗೆ ಸಾಧ್ಯ? ಸ್ವಾಮಿನಾಥನ್ ಅವರ ಪ್ರಕಾರ ಸಾಧ್ಯ. ಹೇಗೆಂದರೆ ಈಗ ಕೃಷಿ ಒಂದು ಲಾಭದಾಯಕ ಕಸುಬಾಗಿ ಉಳಿದಿಲ್ಲವಾದ್ದರಿಂದ ಬಡ ಹಾಗೂ ಮಧ್ಯಮ ರೈತರು ಕೃಷಿಯಿಂದ ಹೊರಬರಬೇಕು. ಆ ವಿಶಾಲ ಕೃಷಿ ವಲಯವನ್ನು ಕಾರ್ಪೊರೇಟ್ ಫಾರ್ಮಿಂಗ್‌ಗೆ ಬಿಟ್ಟು ಕೊಡಬೇಕು. ಅದಕ್ಕೆ ಸರ್ಕಾರ ಉತ್ತಮ ಪರಿಹಾರದೊಂದಿಗೆ ಅಲ್ಲಿ ಕೆಲಸವನ್ನೂ ಕೊಡಿಸಬೇಕು. ಅರ್ಥಾತ್ ಒಳ್ಳೆಯ ಮಾತಿನಿಂದ ರೈತರನ್ನು ಒಕ್ಕಲೆಬ್ಬಿಸಬೇಕು.

ಈಗ ದೊಡ್ಡ ಉದ್ಯಮಪತಿಗಳು ದೊಡ್ಡ ಕಾರ್ಪೊರೇಟ್ ಫಾರ್ಮಿಂಗ್‌ನಲ್ಲೂ ನಿರತರಾಗುವುದರಿಂದ SEZ, SAZ ಗಳು ಪರಸ್ಪರ ವಿರುದ್ಧ ಹಿತಾಸಕ್ತಿ ಉಳ್ಳವಲ್ಲ, ಬದಲಿಗೆ ಒಂದಕ್ಕೊಂದು ಪೂರಕವೆಂದು ಸ್ವಾಮಿನಾಥನ್ ಹೇಳುತ್ತಾರೆ. ಅದು ನಿಜವೇ. ಅವೆರಡೂ ದೊಡ್ಡ ಕಾರ್ಪೊರೇಟ್ ಉದ್ಯಮಪತಿಗಳ ಹಿತಾಸಕ್ತಿಯನ್ನೇ ರಕ್ಷಿಸುತ್ತವೆ. ಅಷ್ಟು ಮಾತ್ರವಲ್ಲ, ಅವೆರಡೂ ರೈತರನ್ನು ಒಕ್ಕಲೆಬ್ಬಿಸುತ್ತವೆ. ಆತ್ಮಹತ್ಯೆಗೆ ದೂಡುತ್ತವೆ. ಅದಲ್ಲದೆ ಮತ್ತೊಂದೂ ನಿಜ. ಅವು ಸಾಧ್ಯವಾದಷ್ಟು ತ್ವರಿತಗತಿಯಲ್ಲಿ ದೇಶಾದ್ಯಂತ ನಂದಿಗ್ರಾಮಗಳನ್ನು ಸೃಷ್ಟಿ ಮಾಡಿ ಕಾರ್ಪೊರೇಟ್ ಪ್ರಜಾತಂತ್ರದ ಸಮಾಧಿಯನ್ನೂ ಕಟ್ಟುತ್ತವೆ.

No Comments

"ದಂಡವನ್ನೂ ಕಟ್ಟುವುದಿಲ್ಲ- ಕನ್ನಡದಲ್ಲೂ ಬೋಧಿಸುವುದಿಲ್ಲ."
- ಇಂಗ್ಲಿಷ್ ಮಾಧ್ಯಮದ ಶಾಲೆಗಳ ನಿಲುವು



"ಒಬಿಸಿ ವಿಷಯದಲ್ಲಿ ಸುಪ್ರೀಮ್ ಕೋರ್ಟ್ ತೀರ್ಪನ್ನು ನಿಂದಿಸುವುದು ನ್ಯಾಯಸಮ್ಮತವಲ್ಲ."
- ರಾಮಾ ಜೋಯಿಸ್, ಬಾಬ್ರಿ ಮಸೀದಿ ವಿಷಯದಲ್ಲಿ ಸುಪ್ರೀಮ್ ಕೋರ್ಟನ್ನು ನಿಂದಿಸಿದ್ದ ನಿವೃತ್ತ ನ್ಯಾಯಾಧೀಶ



"ಒಂದು ವರ್ಗದ ಮಾಧ್ಯಮ ಚುಂಬನ ಪ್ರಕರಣವನ್ನು ಅತಿರಂಜಿತಗೊಳಿಸಿ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿದೆ."
- ಶಿಲ್ಪಾ ಶೆಟ್ಟಿ

"ಐದನೇ ಮದುವೆಗೆ ಯತ್ನ- ನಾಲ್ಕನೇ ಪತ್ನಿಯಿಂದ ಗೂಸಾ."
- ಬಿಜೆಪಿ ಬಗ್ಗೆ ದೇವೇಗೌಡರ ವಿಮರ್ಶೆಯ ಸುದ್ದಿಯ ಕೆಳಗೆ ಪ್ರಕಟವಾದ ಮತ್ತೊಂದು ಶೀರ್ಷಿಕೆ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಕನ್ನಡ ಬೋಧಿಸದ ಶಾಲೆಗಳು ದಂಡ ಕಟ್ಟದಿದ್ದರೆ ಮಾನ್ಯತೆ ರದ್ದು."
- ಬಸವರಾಜ ಹೊರಟ್ಟಿ

"ಯಾವುದೇ ಸಮಯದಲ್ಲಿ ಚುನಾವಣೆ ನಡೆದರೂ ಕಾಂಗ್ರೆಸ್‌ಗೆ ನಿಚ್ಚಳ ಬಹುಮತ."
- ಧರಂಸಿಂಗ್

"ಗುಣಧರಸ್ವಾಮಿಗಳು ಮುಖ್ಯಮಂತ್ರಿಯನ್ನು ನಿಂದಿಸಿದ್ದರಿಂದ ನನಗೂ ಬೇಸರವಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಸರಿ ತಾನೇ?"
- ಯಡಿಯೂರಪ್ಪ

"ವ್ಹೋಟಿನ ರಾಜಕಾರಣ ಮಾಡುವ ವ್ಯಕ್ತಿ ನಾನಲ್ಲ, ಹಾಗೆ ಮಾಡಿದರೆ ಜನರಿಂದ ಕ್ಯಾಕರಿಸಿ ಉಗುಳಿಸಿಕೊಳ್ಳಬೇಕಾಗುತ್ತದೆ."
- ಎಚ್. ಡಿ. ಕುಮಾರಸ್ವಾಮಿ

"ಹೆಚ್ಚುತ್ತಿರುವ ರಾಹುಲ್ ಗಾಂಧಿ ಜನಪ್ರಿಯತೆಗೆ ಹೆದರಿ ತೃತೀಯರಂಗ ಸ್ಥಾಪಿಸುತ್ತಿದ್ದಾರೆ."
- ಕಪಿಲ್ ಸಿಬಾಲ್

ವಾರದ ಅವಿವೇಕ



"ನೀವು ಒಬಿಸಿ ಮೀಸಲಾತಿಗಾಗಿ 57 ವರ್ಷ ಕಾದಿದ್ದೀರಿ. ಇನ್ನೂ ಒಂದು ವರ್ಷ ಕಾಯಲಾರಿರಾ? ಅಲ್ಲದೆ ನಾವು ಮಾರ್ಚ್ 29ರಂದು ಕೊಟ್ಟ ಆದೇಶ ಮಧ್ಯಂತರ ಆದೇಶವಲ್ಲ..ಬದಲಿಗೆ ಅದೇ ಅಂತಿಮ ಆದೇಶ."
- ನ್ಯಾಯಮೂರ್ತಿ ಅರಿಜಿತ್ ಪಸಾಯತ್, ಉನ್ನತ ಶಿಕ್ಷಣದಲ್ಲಿ ಒಬಿಸಿ ಮೀಸಲಾತಿ ಕುರಿತು

ವಾರದ ಅಸಂಬದ್ಧ




"ಕಾವೇರಿ ಹೋರಾಟಗಾರರ ದೆಹಲಿ ಚಲೋ ಬಗ್ಗೆ ಕರೆದ ಪೂರ್ವಭಾವಿ ಸಭೆಗೆ ಹಾಜರಾಗದ ನಟರ ಚಿತ್ರಗಳನ್ನು ಬಹಿಷ್ಕರಿಸಲಾಗುವುದು."
- ಟಿ.ಎ. ನಾರಾಯಣಗೌಡ, ಕರ್ನಾಟಕ ರಕ್ಷಣಾ ವೇದಿಕೆ

ವಾರದ ಪ್ರಹಸನ


"ದೇವೇಗೌಡರು ಮತ್ತು ಕುಮಾರಸ್ವಾಮಿಗಳ ಬಗ್ಗೆ ದೋಖೆಬಾಜ್‌ಗಳು ಎಂದು ನಾನಾಡಿದ ಹೀಯಾಳಿಕೆಯ ಮಾತಿನಿಂದ ಅವರ ಮನಸ್ಸಿಗೆ ಬೇಸರವಾಗಿದ್ದರೆ ನಾನು ಕ್ಷಮೆ ಕೋರುವೆ."
- ಗುಣಧರಾನಂದಸ್ವಾಮಿ

ವಾರದ ಅಪಾಯ



"ಯೆಲ್ಸಿನ್ ಅವರ ಚಿಂತನೆಗಳನ್ನು ಶಾಶ್ವತಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು."
-ಪುಟಿನ್, ರಷ್ಯಾದ ಅಧ್ಯಕ್ಷ

ವಾರದ ವಿವೇಕ



"ಬರ್ಬರ ಹಿಂಸೆಯಿಂದ ನನ್ನನ್ನು ರಕ್ಷಿಸಿಕೊಳ್ಳಲು ನಾನು ಸಂಘಟಿತ ಹಿಂಸೆಯನ್ನು ಅವಲಂಬಿಸಬೇಕಾದುದು ಏಕೈಕ ಮಾರ್ಗವಾದರೆ ಅದನ್ನು ಪ್ರಯೋಗಿಸಲು ನಾನು ಇಚ್ಛಿಸುತ್ತೇನೆ."
-ರಾಮಮನೋಹರ ಲೋಹಿಯಾ, ಕನ್ನಡದಲ್ಲಿ ಇತ್ತೀಚೆಗೆ ಮರುಮುದ್ರಣಗೊಂಡ ಅವರ ರೆಡ್‌ಬುಕ್‌ನಿಂದ ಉದ್ಧೃತ.

ಸಂಪುಟ:3 ಸಂಚಿಕೆ :9

ಮಾನವ ಬಾಂಬ್‌ಗಳ ಮನುಷ್ಯತ್ವ....



ಕಂಡಹಾಗೆ

ದಿನನಿತ್ಯ ಅನುಭವಿಸುವ ಅವಮಾನದಿಂದ ಉಂಟಾಗುವ ದುರ್ಬಲತೆಯೇ ಪ್ರತಿಹಿಂಸೆಗೆ ಕಾರಣವಾಗುತ್ತದೆಯೇ? ಈ ದೇಹವೆಂಬ ಅಸ್ತ್ರವನ್ನೇ ಉಪಯೋಗಿಸಿ ಹತ್ಯೆ ಮತ್ತು ಆತ್ಮಹತ್ಯೆಗೆ ದೂಡುವ ಅವಮಾನ, ಅಸಮಾನತೆ, ಅನ್ಯಾಯ ಇನ್ನೆಷ್ಟು ಕ್ರೂರವಾಗಿರಬಹುದು? ಅಂತಹ ಮಾನವ ಬಾಂಬ್‌ಗಳನ್ನು ಸೃಷ್ಟಿಸುವ ವ್ಯವಸ್ಥೆ ಜನರನ್ನು ಇನ್ನೆಷ್ಟು ಶೋಷಿಸುತ್ತಿರಬಹುದು?

ಇವತ್ತು ಕಾಶ್ಮೀರದಿಂದ ಹಿಡಿದು ಇರಾಕಿನ ತನಕ ಮಾನವ ಬಾಂಬುಗಳು ಸ್ಫೋಟಗೊಂಡು ಹಲವಾರು ಜನರನ್ನು ಕೊಂದಿದ್ದರ ಬಗ್ಗೆ ಓದುತ್ತಿರುತ್ತೇವೆ. ಹಾಗೆ ಓದುವಾಗ ಇಂತಹ ಆತ್ಮಹತ್ಯಾದಳಗಳಿಗೆ ಕಾರಣವಾಗಿರುವುದು ಒಂದು ಧರ್ಮದ ಮೌಢ್ಯ ಎಂದು ಸುಲಭವಾಗಿ ನಿರ್ಧರಿಸಿ ದಿನಪತ್ರಿಕೆಯ ಪುಟಗಳನ್ನು ತಿರುಗಿಸಿ ಸುಮ್ಮನಾಗುತ್ತೇವೆ. ನಾವು ಆ ಮಾನವ ಬಾಂಬನ್ನು ಸೃಷ್ಟಿಸಿರುವ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಯನ್ನು ಕೇವಲ ಮೇಲುಸ್ತರದಲ್ಲಿ ಅರ್ಥ ಮಾಡಿಕೊಂಡಿರುವುದೇ ಇದಕ್ಕೆ ಕಾರಣವಾಗುತ್ತದೆ. ಆದರೆ ಸೈಯದ್ ಮತ್ತು ಖಾಲೆದ್ ಎಂಬ ಇಬ್ಬರು ಯುವಕರ ಕತೆ ಕೇಳಿದ ನಂತರ ಧರ್ಮಾಂಧತೆಗಿಂತಲೂ ಮಾನವ ಬಾಂಬುಗಳ ಸೃಷ್ಟಿಗೆ ಕಾರಣವಾಗಿರುವುದು ಅವಮಾನ, ಅನಿಶ್ಚಿತತೆ, ಅಸಹಾಯಕತೆ ಮತ್ತು ಅನ್ಯಾಯ ಎಂಬುದು ಗೊತ್ತಾಗುತ್ತದೆ.

ಸೈಯದ್ ಮತ್ತು ಖಾಲೆದ್ ಬಾಲ್ಯದಿಂದಲೂ ಸ್ನೇಹಿತರಾಗಿದ್ದು, ಈಗ ಬೆಳೆದ ಯುವಕರಾಗಿದ್ದಾರೆ. ಅವರಿಬ್ಬರೂ ಇಸ್ರೇಲಿನ ಸೈನ್ಯದ ದಾಳಿಗಳಿಗೆ ಗುರಿಯಾಗಿರುವ ಪ್ಯಾಲೆಸ್ತೇನಿನ ನಬ್ಲೂಸ್ ನಗರದ ನಿವಾಸಿಗಳು. ಎಲ್ಲೆಡೆ ಬಡತನ, ನಿರುದ್ಯೋಗ, ಇಸ್ರೇಲಿ ಸೈನ್ಯದ ಕಾವಲು ಪಡೆಗಳು. ಕುಡಿಯುವ ನೀರಿಗೂ ಹಾಹಾಕಾರ. ಒಂದೆಡೆ ಪ್ರಜಾತಂತ್ರ ವ್ಯವಸ್ಥೆಯಲ್ಲೇ ತಮಗೆ ಸಮಾನ ಸ್ಥಾನ-ಮಾನವನ್ನು ನಿರಾಕರಿಸುವ, ಇನ್ನೊಂದೆಡೆ ಪ್ಯಾಲೆಸ್ತೇನಿಯರು ಅಸ್ತಿತ್ವದಲ್ಲೇ ಇರಬಾರದೆಂದು ತಮ್ಮ ಸೈನ್ಯದ ಬಲವನ್ನು ಉಪಯೋಗಿಸುವ- ಇವೆರಡರ ನಡುವೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತನಗೇ ಅನ್ಯಾಯ ವಾಗಿದೆ ಎಂದು ಬಿಂಬಿಸುವ ಇಸ್ರೇಲ್ ಬಗ್ಗೆ ನಬ್ಲೂಸ್‌ನ ಯುವಕರಲ್ಲಿ ಸಹಜ ವಾಗಿಯೇ ಅಸಮಾಧಾನ, ಆಕ್ರೋಶ. ಇಸ್ರೇಲಿನ ದೈತ್ಯ ಸೈನ್ಯದ ವಿರುದ್ಧ ಹೋರಾಡಬೇಕು ಎಂಬ ಇಚ್ಛಾಶಕ್ತಿ, ಆ ಹೋರಾಟಕ್ಕೆ ತಮ್ಮದೇ ಒಂದು ಸೈನ್ಯವಿಲ್ಲದ ಕಾರಣ ಕೊನೆಗೆ ಮಾನವ ಬಾಂಬುಗಳಾಗಿಯಾದರೂ ತಮ್ಮ ವಿರೋಧವನ್ನು ಸಾಬೀತುಪಡಿಸಬೇಕೆಂಬ ನಿಶ್ಚಲ ಮನೋಭಾವ.

ಪುಡಿಗಾಸಿಗೆ ಯಾವುದೋ ಒಂದು ಗುಜರಿ ಕಾರ್ ರಿಪೇರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಸೈಯದ್ ಮತ್ತು ಖಾಲೆದ್ ಹುಕ್ಕಾ ಸೇದುತ್ತಾ ಭವಿಷ್ಯವಿಲ್ಲದ ಜೀವನವನ್ನು ಸಾಗಿಸುತ್ತಿದ್ದಾರೆ. ಒಂದು ರಾತ್ರಿ ಭೂಗತವಾಗಿರುವ ಪ್ಯಾಲೆಸ್ತೇನ್ ಹೋರಾಟದ ಸಂಘಟನೆಯೊಂದರ ನಾಯಕರು ಬಂದು ಮರುದಿನ ಅವರಿಬ್ಬರೂ ಮಾನವ ಬಾಂಬ್‌ಗಳಾಗಿ ಇಸ್ರೇಲ್ ರಾಜಧಾನಿ ಟೆಲ್ ಅವಿವ್‌ಗೆ ಹೋಗಿ ಅಲ್ಲಿ ಹಲವು ಇಸ್ರೇಲಿ ಸೈನಿಕರನ್ನು ಕೊಂದು ತಾವು 'ಶಹೀದ್'ಗಳಾಗಿ ಮರಣಹೊಂದಬೇಕೆಂದೂ, ಹಾಗೆ ಮಾಡುವ ಮೂಲಕ ಇಸ್ರೇಲ್ ಮೇಲೆ ಸೇಡು ತೀರಿಸಿಕೊಂಡಂತಾಗುತ್ತದೆ ಮಾತ್ರವಲ್ಲ ಅವರಿಬ್ಬರೂ ಸ್ವರ್ಗಕ್ಕೆ ಹೋಗುತ್ತಾರೆಂದೂ ಹೇಳುತ್ತಾರೆ. ಹಿಂದೊಮ್ಮೆ ಇಂತಹ ಕಾರ್ಯಾಚರಣೆಗೆ ತಾವು ಸಿದ್ಧರೆಂದೂ, ತಮ್ಮಿಬ್ಬರನ್ನು ಜೊತೆಗೇ ಕಳುಹಿಸಬೇಕೆಂದೂ ಅವರಿಬ್ಬರೂ ಹೇಳಿದ್ದರಿಂದ ಅವರಿಗೆ ಈಗ ಈ ಕರೆ ಬಂದಿದೆ.

ಗೆಳೆಯರಿಬ್ಬರಲ್ಲಿ ಸೈಯದ್ ಸ್ವಲ್ಪ ಗಂಭೀರ ಸ್ವಭಾವದವನು. "ಈ ತ್ಯಾಗಕ್ಕೆ ಸಿದ್ಧನಾಗಿದ್ದೀಯಾ?" ಎಂದು ಭೂಗತ ಹೋರಾಟಗಾರರ ನಾಯಕ ಕೇಳಿದಾಗ ಆತ ಮರುಯೋಚಿಸದೇ "ಇದು ದೇವರ ಇಚ್ಛೆ ಆಗಿರುವುದರಿಂದ ಸಿದ್ಧನಾಗಿದ್ದೇನೆ" ಎನ್ನುತ್ತಾನೆ. ಆದರೆ ಅಂದಿನ ರಾತ್ರಿ ಅವನಿಗೆ ನಿದ್ದೆಯೇ ಬರುವುದಿಲ್ಲ.

ತನ್ನ ಬಗ್ಗೆ ಒಂದಿಷ್ಟು ಆಸಕ್ತಿ ತೋರಿರುವ, ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿ ನಬ್ಲೂಸ್‌ಗೆ ಹಿಂದಿರುಗಿರುವ, ಪ್ಯಾಲೆಸ್ತೇನಿಯರ ಹೋರಾಟದಲ್ಲಿ ಹುತಾತ್ಮನಾಗಿರುವ ನಾಯಕನ ಮಗಳಾದ ಸುಹಾಳನ್ನು ಮಧ್ಯರಾತ್ರಿ ನೋಡಲು ಸೈಯದ್ ಹೋಗುತ್ತಾನೆ.


ಹಲವಾರು ದೇಶಗಳಲ್ಲಿ ಬೆಳೆದಿರುವ ಸುಹಾ ಪ್ಯಾಲೆಸ್ತೇನಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಶಸ್ತ್ರ ಹೋರಾಟವೇ ಮುಖ್ಯವಲ್ಲ, ಬದಲಾಗಿ ಅಹಿಂಸಾತ್ಮಕ ಮತ್ತು ನೈತಿಕತೆಯ ಹೋರಾಟವೇ ಫಲ ನೀಡುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿರುವವಳು. "ನಮ್ಮ ಪರವಾಗಿನ ಹೋರಾಟದಲ್ಲಿ ನಿನ್ನ ತಂದೆ ಹುತಾತ್ಮನಾಗಿದ್ದರ ಬಗ್ಗೆ ನಿನಗೆ ಹೆಮ್ಮೆ ಇರಬೇಕಲ್ಲವೆ?" ಎಂದು ಸೈಯದ್ ಕೇಳುತ್ತಾನೆ.

"ಆತ ಹುತಾತ್ಮನಾಗಿದ್ದರ ಬಗ್ಗೆ ಹೆಮ್ಮೆ ಪಡುವುದಕ್ಕಿಂತ ಆತ ನನ್ನೊಂದಿಗೆ ಜೀವಂತವಾಗಿದ್ದರೆ ಇನ್ನೂ ಹೆಚ್ಚು ಸಂತೋಷ ಆಗುತ್ತಿತ್ತು" ಎಂದು ಸುಹಾ ಉತ್ತರಿಸುತ್ತಾಳೆ. ಆದರೆ ಇವರಿಬ್ಬರ ನಡುವಿನ ವ್ಯತ್ಯಾಸ ಇಷ್ಟು ಸರಳವಲ್ಲ, ಸೈಯದ್ ತಂದೆ ಕೂಡ ಈಗಾಗಲೇ ಸಾವನ್ನಪ್ಪಿದ್ದಾನೆ.

ಆದರೆ ಆತ ಇಸ್ರೇಲಿ ಗೂಢಚರ್ಯರೊಂದಿಗೆ ಕೈ ಜೋಡಿಸಿ ಪ್ಯಾಲೆಸ್ತೇನಿನ ಹೋರಾಟಗಾರರ ಬಗ್ಗೆ ಮಾಹಿತಿ ನೀಡಿದ್ದಕ್ಕೆ ಆತನನ್ನು ಕೊಲ್ಲಲಾಗಿದೆ. ಅಂದರೆ ಸುಹಾ ಹುತಾತ್ಮನೊಬ್ಬನ ಮಗಳಾಗಿದ್ದರೆ, ಸೈಯದ್ ದ್ರೋಹಿಯೊಬ್ಬನ ಮಗನಾಗಿದ್ದಾನೆ. ಆಕೆ ಶಾಂತಿಯುತ ಸಂಗ್ರಾಮಕ್ಕೆ ಬಯಸುತ್ತಿದ್ದರೆ, ಆತ ಮಾನವ ಬಾಂಬ್ ಆಗಿ ಹತ್ಯೆ ಮತ್ತು ಆತ್ಮಹತ್ಯೆಯಲ್ಲಿ ತೊಡಗಿ ತನ್ನ ತಂದೆಯ ದ್ರೋಹದಿಂದಾಗಿರುವ ಕಳಂಕವನ್ನು ಹೋಗಲಾಡಿಸಲು ಬಯಸುತ್ತಿದ್ದಾನೆ.

ಸೈಯದ್‌ಗೆ ಹೋಲಿಸಿದರೆ ಖಾಲೆದ್ ಸ್ವಲ್ಪ ತಲೆಹರಟೆ ಸ್ವಭಾವದವನು. ಯಾವುದನ್ನೂ ಗಂಭೀರವಾಗಿ ತೆಗೆದುಕೊಳ್ಳದ ಆತ ಸಾವನ್ನೂ ಗಂಭೀರವಾಗಿ ಪರಿಗಣಿಸಲಾರದವನು. ಮರುದಿನ ತಾವು ಮಾನವ ಬಾಂಬ್‌ಗಳಾಗಿ ಸ್ಫೋಟಗೊಳ್ಳಲಿದ್ದೇವೆ ಎಂದು ಗೊತ್ತಾದಾಗಲೂ ಆತ ತನ್ನ ತಂಗಿಯ ಜೊತೆ ನಗುತ್ತಾ, ಆಟವಾಡುತ್ತಾ ಕಾಲ ಕಳೆಯುತ್ತಾನೆ. ತನ್ನ ಆಪ್ತಮಿತ್ರ ಸೈಯದ್ ಏನು ಮಾಡುತ್ತಾನೋ ಅದನ್ನೇ ಆತ ಮಾಡಲು ಸಿದ್ಧ ಅಷ್ಟೇ.

ಮೂರನೆ ಮುಂಜಾನೆ ಅವರಿಬ್ಬರನ್ನೂ ಭೂಗತ ಹೋರಾಟಗಾರರ ಕೇಂದ್ರ ಸ್ಥಾನಕ್ಕೆ ಕರೆದೊಯ್ಯಲಾಗುತ್ತದೆ. ಅಲ್ಲಿ ಅವರಿಗೆ ಕಾರ್ಯಾಚರಣೆಗಳ ವಿವರಗಳನ್ನು ನೀಡಿ, ಎಂದಿನ ವಾಡಿಕೆಯಂತೆ ಹುತಾತ್ಮರಾಗಲಿರುವ ಅವರ ಕೊನೆಯ ಸಂದೇಶಗಳನ್ನು ವಿಡಿಯೋ ಟೇಪ್ ಮಾಡಿಕೊಳ್ಳಲಾಗುತ್ತದೆ. ಈ ಪ್ರಸಂಗವಂತೂ ರೋಚಕವಾಗಿದೆ.



ಮೊದಲು ಮಾತನಾಡುವ ಖಾಲೆದ್ ತಾನು ಯಾಕೆ ತನ್ನ ಜನರ ಸ್ವಾತಂತ್ರ್ಯಕ್ಕಾಗಿ ಮಾನವ ಬಾಂಬ್ ಆಗಿ ಹುತಾತ್ಮನಾಗಲಿದ್ದೇನೆ, ತನ್ನ ಜನರಿಗೆ ಹೇಗೆ ಅನ್ಯಾಯವಾಗುತ್ತಿದೆ... ಎಂದೆಲ್ಲಾ ವಿವರಿಸುತ್ತಾನೆ. ಆದರೆ ಅದೇನೋ ತೊಂದರೆಯಿಂದಾಗಿ ಅದು ಸರಿಯಾಗಿ ರೆಕಾರ್ಡ್ ಆಗುವುದಿಲ್ಲ. ಎರಡನೆ ಬಾರಿ ಆತ ತನ್ನ ಪುಟ್ಟ ಭಾಷಣವನ್ನು ಮಾಡುತ್ತಿರುವಾಗ ಅದನ್ನು ವೀಕ್ಷಿಸುತ್ತಿರುವವರು ರೊಟ್ಟಿ ತಿನ್ನುತ್ತಿರುವುದನ್ನು ನೋಡುತ್ತಾನೆ. ಆದರೆ ಅದರಿಂದ ಅವನಿಗೆ ಬೇಸರವಾಗುವ ಬದಲಾಗಿ ತನ್ನ ತಾಯಿಗೆ ಹೇಳಬೇಕೆಂದಿದ್ದದ್ದು ನೆನಪಾಗುತ್ತದೆ. ತನ್ನ 'ಹುತಾತ್ಮ ಭಾಷಣ'ವನ್ನು ಅರ್ಧಕ್ಕೆ ನಿಲ್ಲಿಸಿ, "ಅಮ್ಮಾ, ಕುಡಿಯುವ ನೀರನ್ನು ಸೋಸುವ ಹೊಸ ಯಂತ್ರ ಅಂಗಡಿಯಲ್ಲಿ ಸಿಗುತ್ತದೆ. ತಕ್ಷಣ ಅದನ್ನು ಖರೀದಿಸು" ಎಂದು ಹೇಳುತ್ತಾನೆ. ಅಂದರೆ ಸಾವಿನ ದವಡೆಯಲ್ಲೂ ಆತನಿಗೆ ನೆನಪಾಗುವುದು ತಾಯಿ ಕುಡಿಯುತ್ತಿರುವ ಕಲುಷಿತ ನೀರು.

ಸೈಯದ್ ಮತ್ತು ಖಾಲೆದ್‌ಗೆ ಶುದ್ಧೀಕರಣದ ಶಾಸ್ತ್ರಗಳನ್ನೆಲ್ಲ ಮಾಡಿ, ಅವರಿಬ್ಬರ ದೇಹಕ್ಕೆ ಬಾಂಬ್‌ಗಳನ್ನು ಅಂಟಿಸಿ, ಇಸ್ರೇಲ್ ಗಡಿಗೆ ದಾಟಿಸುತ್ತಾರೆ. ದಾರಿ ಮಧ್ಯದಲ್ಲಿ "ನಾವು ಸತ್ತ ನಂತರ ಏನಾಗುತ್ತದೆ?" ಎಂದು ಖಾಲೆದ್ ಕೇಳುತ್ತಾನೆ. ಆಗ ಭೂಗತರ ನಾಯಕ "ಇಬ್ಬರು ದೇವದೂತರು ಬಂದು ನಿಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾರೆ" ಎಂದು ಉತ್ತರಿಸುತ್ತಾನೆ. ಆದರೆ ಅವರಿಬ್ಬರಲ್ಲಿ ಅದನ್ನು ಕೇಳಿ ನಂಬಿಕೆಯೂ ಉದ್ಭವಿಸುವುದಿಲ್ಲ, ಸಂತೋಷವೂ ಆಗುವುದಿಲ್ಲ, ಅವರಿಗೆ ಗೊತ್ತಿರುವುದು ನಬ್ಲೂಸ್ ಎಂಬ ನರಕ ಮತ್ತು ಅದರಿಂದ ತಾವು ಶಹೀದ್‌ಗಳಾಗಿ ಪಾರಾಗುತ್ತಿದ್ದೇವೆ ಎಂಬ ಸತ್ಯ ಮಾತ್ರ.

ಗಡಿ ದಾಟುವಾಗ ಇಸ್ರೇಲಿ ಏರೋಪ್ಲೇನ್‌ಗಳು ಪ್ರತ್ಯಕ್ಷವಾಗಿ ಗೊಂದಲ ಸೃಷ್ಟಿಯಾಗುತ್ತದೆ. ಆ ಗೊಂದಲದಲ್ಲಿ ಖಾಲೆದ್ ವಾಪಸ್ ಬಂದರೆ ಸೈಯದ್ ಇಸ್ರೇಲಿಗೆ ಹೋಗುತ್ತಾನೆ. ಮಾನವ ಬಾಂಬ್‌ಗಳ ಗುರಿಯೇ ಹತ್ಯೆ- ಅದು ಅಮಾಯಕ ಜನಸಾಮಾನ್ಯರದ್ದಾಗಿದ್ದರೂ - ಮತ್ತು ಆತ್ಮಹತ್ಯೆಯಲ್ಲವೇ? ತಾವು ಯಾಕೆ ಮತ್ತು ಯಾರನ್ನು ಕೊಲ್ಲುತ್ತಿದ್ದೇವೆ ಎಂದು ಅವರು ಯೋಚಿಸುತ್ತಾರೆಯೇ? ಈ ಪ್ರಶ್ನೆಗಳಿಗೆ ನಮ್ಮಲ್ಲಿ ತಕ್ಷಣ ಉದ್ಭವಿಸುವ ಉತ್ತರ "ಅಂಥವರಲ್ಲಿ ಆ ಸೂಕ್ಷ್ಮತೆ ಇರುವುದಿಲ್ಲ" ಎಂಬುದು.

ಆದರೆ ತನ್ನ ತಾಯಿ ಕುಡಿಯುವ ನೀರಿನ ಬಗ್ಗೆ ಹೇಗೆ ಖಾಲೆದ್ ಗೊಂದಲಗೊಳ್ಳುತ್ತಾನೋ, ಹಾಗೆ ತಾನು ಯಾರನ್ನು ಕೊಲ್ಲಲಿದ್ದೇನೆ ಎಂಬುದರ ಬಗ್ಗೆ ಸೈಯದ್ ಗೊಂದಲಕ್ಕೊಳಗಾಗುತ್ತಾನೆ. ಆತ ಇನ್ನೇನು ಒಂದು ಬಸ್ ಹತ್ತಬೇಕು, ಅದರಲ್ಲಿರುವ ಹಲವಾರು ಜನರನ್ನು ಕೊಲ್ಲಬೇಕು..... ಆಗ ಚಿಕ್ಕ ಹುಡುಗಿಯೊಬ್ಬಳು ಕಾಣಿಸಿಕೊಳ್ಳುತ್ತಾಳೆ. ಅವಳನ್ನು ನೋಡಿ ಸೈಯದ್ ಬಸ್ ಹತ್ತಲು ನಿರಾಕರಿಸಿ ನಬ್ಲೂಸ್‌ಗೆ ಹಿಂತಿರುಗುತ್ತಾನೆ.

ಅಷ್ಟೊತ್ತಿಗಾಗಲೇ ಸೈಯದ್ ಕೂಡ ತನ್ನ ತಂದೆಯಂತೆ ದ್ರೋಹ ಬಗೆದಿರಬಹುದು ಎಂದು ನಿರ್ಧರಿಸಿ ಭೂಗತ ಹೋರಾಟಗಾರರು ತಮ್ಮ ಕಾರ್ಯಕೇಂದ್ರದಿಂದ ನಾಪತ್ತೆಯಾಗಿದ್ದಾರೆ.

ಆದರೆ ಸೈಯದ್‌ನಲ್ಲಿ ಅಪಾರ ನಂಬಿಕೆ ಹೊಂದಿರುವ ಖಾಲೆದ್ ಮಾತ್ರ ಆತನಿಗಾಗಿ ಎಲ್ಲೆಡೆ ಹುಡುಕಾಡುತ್ತಿದ್ದಾನೆ. ಹೋರಾಟಗಾರರು ಇಲ್ಲದಿರುವುದನ್ನು ಕಂಡು ಸೈಯದ್ ಕೂಡ ಖಾಲೆದ್‌ಗಾಗಿ ಹುಡುಕಾಟ ಶುರು ಮಾಡಿದ್ದಾನೆ.

ಈ ಹುಡುಕಾಟದಲ್ಲಿ ಇವರಿಬ್ಬರೂ ಮಾನವ ಬಾಂಬ್‌ಗಳಾಗಿ ಹುತಾತ್ಮರಾಗಲು ಹೊರಟಿದ್ದು ಸುಹಾಳಿಗೆ ಗೊತ್ತಾಗುತ್ತದೆ. ಆಕೆ ಖಾಲೆದ್‌ನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. "ನೀವು ಎಷ್ಟೇ ಜನ ಹುತಾತ್ಮರಾದರೂ ಇಸ್ರೇಲಿನ ಬಲಿಷ್ಠ ಸೈನ್ಯವನ್ನು ಸೋಲಿಸಲಾಗುವುದಿಲ್ಲ" ಎಂದು ಸುಹಾ ಹೇಳುತ್ತಾಳೆ.

"ಅಂದಮಾತ್ರಕ್ಕೆ ನಾವು ಸುಮ್ಮನೆ ಇರಲಾಗುವುದಿಲ್ಲ. ಸುಮ್ಮನಿದ್ದರೆ ಈ ಅನ್ಯಾಯ ಮತ್ತು ಅಸಮಾನತೆಯನ್ನು ತೊಡೆದು ಹಾಕಲಾಗುವುದಿಲ್ಲ" ಎಂದು ಖಾಲೆದ್ ಉತ್ತರಿಸುತ್ತಾನೆ.

"ನೀವು ಹಿಂಸಾತ್ಮಕವಾಗಿ ಎಷ್ಟೇ ಪ್ರತಿಭಟಿಸಿದರೂ ನಮ್ಮ ವೈರಿಗಳು ಇನ್ನಷ್ಟು ಹಿಂಸೆಗೆ ಇಳಿಯುತ್ತಾರೆ."

"ನಿನ್ನ ಪ್ರಕಾರ ಹಿಂಸೆಯನ್ನು ತೊರೆದು ಅಹಿಂಸಾತ್ಮಕ ಹೋರಾಟ ಮಾಡಬೇಕು. ನಿನ್ನ ಮಾನವಹಕ್ಕುಗಳ ಸಂಘಟನೆಯಿಂದ ನಮಗೆ ನ್ಯಾಯ ಸಿಗುತ್ತೆ?"

"ಕನಿಷ್ಠ ನಮ್ಮದು ನೈತಿಕ ಹೋರಾಟವಾದರೂ ಆಗುತ್ತೆ. ಅವರ ಅನೈತಿಕತೆಯನ್ನು ಬಯಲುಗೊಳಿಸುತ್ತೆ."

"ಆದರೆ ವೈರಿಗೆ ನೈತಿಕತೆಯೇ ಇಲ್ಲವೆಂದಾದರೆ? ಆದ್ದರಿಂದಲೇ ನಾನು ಹೋರಾಡುತ್ತಾ ಹುತಾತ್ಮನಾಗಿ ಸ್ವರ್ಗಕ್ಕೆ ಹೋಗುತ್ತೇನೆ."

"ಪೆದ್ದ. ಸ್ವರ್ಗ ಅನ್ನೋದು ಇರುವುದು ನಿನ್ನ ತಲೆಯಲ್ಲಿ ಮಾತ್ರ."

"ಆದರೆ ಬದುಕೆಂಬ ಈ ನರಕಕ್ಕಿಂತ ನನ್ನ ತಲೆಯಲ್ಲಿರುವ ಸ್ವರ್ಗವೇ ಲೇಸು" ಎಂದು ಖಾಲೆದ್ ಉತ್ತರಿಸುತ್ತಾನೆ. ಕೊನೆಗೆ ಖಾಲೆದ್ ಮತ್ತು ಸುಹಾಳಿಗೆ ಸೈಯದ್ ತನ್ನ ತಂದೆಯ ಸಮಾಧಿಯ ಹತ್ತಿರ ಸಿಗುತ್ತಾನೆ. ಸೈಯದ್‌ನನ್ನು ಹೋರಾಟಗಾರರು ವಿಚಾರಣೆಗೆ ಒಳಪಡಿಸುತ್ತಾರೆ. ಆತನಿಂದಾಗಿಯೇ ಅವರ ಯೋಜನೆ ವಿಫಲಗೊಂಡಿತು ಎಂದು ಹೇಳುತ್ತಾರೆ.

ಸೈಯದ್ ಉತ್ತರಿಸುತ್ತಾನೆ:

"ನಾನು ಬೆಳೆದದ್ದು ನಿರಾಶ್ರಿತರ ಶಿಬಿರದಲ್ಲಿ. ನನ್ನ ಜನರಿಗೆ ಆಗಿರುವ ಅನ್ಯಾಯವನ್ನು ನಾನು ಕಂಡಿದ್ದೇನೆ, ಅನುಭವಿಸಿದ್ದೇನೆ. ನಮ್ಮನ್ನು ಈ ಸ್ಥಿತಿಗೆ ದೂಡಿದ ವೈರಿಗಳ ಬಗ್ಗೆ ನನ್ನಲ್ಲಿ ಕೋಪವಿದೆ ಮಾತ್ರವಲ್ಲ, ಇಂತಹ ದೈನೇಸಿ ಸ್ಥಿತಿಯಿಂದಾಗಿ ವಿಚಲಿತರಾಗುವವರನ್ನೂ ತನ್ನ ಪರವಾಗಿ ದುಡಿಸಿಕೊಳ್ಳುವ ವೈರಿಯ ಷಡ್ಯಂತ್ರದ ಬಗ್ಗೆಯೂ ನನಗೆ ಕೋಪವಿದೆ. ನನ್ನ ಅಪ್ಪ ಒಳ್ಳೆಯವನಾಗಿದ್ದ. ಆದರೆ ಸಂಕಷ್ಟದಲ್ಲಿದ್ದ. ಅದನ್ನೇ ಅವರು ಲಾಭ ಮಾಡಿಕೊಂಡರು. ಆದರಿಂದಾಗಿ ನನ್ನ ತಂದೆಯನ್ನು ಕೊಲ್ಲಲಾಯಿತು.

ಬೇರೆಯವರದ್ದೆಲ್ಲ ದಿನನಿತ್ಯ ಒಂದು ರೀತಿಯ ವೇದನೆಯಾದರೆ ನನ್ನದು ಇನ್ನೂ ದೊಡ್ಡದು. ಸಾಮಾಜಿಕ ತಿರಸ್ಕಾರಕ್ಕೆ ಗುರಿಯಾಗಿರುವವನ ಯಾತನೆ ನನ್ನದು. ನನ್ನಿಂದ ಗೌರವ, ಮನ್ನಣೆ ಎಲ್ಲವನ್ನೂ ಕಿತ್ತುಕೊಂಡಿರುವ ವೈರಿಗೆ ನಾನು ಉತ್ತರ ನೀಡಲೇಬೇಕು. ನನ್ನ ಜನರಿಗಾಗಿರುವ ಅವಮಾನ, ಅಸಮಾನತೆಯನ್ನು ಪ್ರತಿಭಟಿಸಲೇಬೇಕು. ನನ್ನ ಬಗ್ಗೆ ನೀವು ಏನೇ ನಿರ್ಧಾರ ತೆಗೆದುಕೊಂಡರೂ ನಾನಂತೂ ಮತ್ತೆ ನಿರಾಶ್ರಿತರ ಶಿಬಿರಕ್ಕೆ ವಾಪಸ್ಸು ಹೋಗುವುದಿಲ್ಲ."

ಹೋರಾಟಗಾರರು ಮತ್ತೆ ತಮ್ಮ ಯೋಜನೆಗೆ ಚಾಲನೆ ನೀಡಿ ಸೈಯದ್ ಮತ್ತು ಖಾಲೆದ್‌ರನ್ನು ಟೆಲ್ ಅವಿವ್‌ಗೆ ಸಾಗಿಸುತ್ತಾರೆ. ಆದರೆ ಅಷ್ಟರ ಹೊತ್ತಿಗೆ ಖಾಲೆದ್‌ನಲ್ಲಿ ತಮ್ಮ ಕಾರ್ಯಾಚರಣೆ ಬಗ್ಗೆ ಅನುಮಾನಗಳು ಮೊಳಕೆ ಹೊಡೆದಿವೆ. ತಾವು ಮಾಡುತ್ತಿರುವುದು ಸರಿಯೇ? ಅದರಿಂದ ಏನಾದರೂ ಪ್ರಯೋಜನವಾಗುತ್ತದೆಯೇ? ತಾವು ಹೀಗೆ ಹಿಂಸೆಗೈದು ಸಾಯುವುದಕ್ಕಿಂತಲೂ ಪರ್ಯಾಯ ಮಾರ್ಗಗಳಿಲ್ಲವೇ? ಎಂದೆಲ್ಲಾ ಆತ ಚಿಂತಿಸುತ್ತಾನೆ.

ಅವರಿಬ್ಬರೂ ತಮ್ಮ ಜೀವನದ ನಿರ್ಣಾಯಕ ಘಟ್ಟದಲ್ಲಿ ನಿಂತಿದ್ದಾರೆ. "ಹೀಗೆ ಮಾಡುವುದು ಬೇಡ ಸೈಯದ್, ಹಿಂದಿರುಗೋಣ" ಎಂದು ಖಾಲೆದ್ ಹೇಳುತ್ತಾನೆ. ಆದರೆ ಸೈಯದ್ ಹುತಾತ್ಮನಾಗದೆ ತನಗೆ ಇನ್ನೊಂದು ಮಾರ್ಗವಿಲ್ಲ ಎಂದು ನಿರ್ಧರಿಸಿದ್ದಾನೆ. ಖಾಲೆದ್‌ಗೆ ಅನುಮಾನಗಳಿರುವುದರಿಂದ ಆತ ಸ್ನೇಹಕ್ಕಾಗಿ ತನ್ನೊಂದಿಗೆ ಬರುವುದು ಅವನಿಗೆ ಇಷ್ಟವಿಲ್ಲ. "ಇಬ್ಬರೂ ಹಿಂದಿರುಗೋಣ" ಎನ್ನುತ್ತಾನೆ. ಅವರನ್ನು ವಾಪಸ್ಸು ಕರೆದುಕೊಂಡು ಹೋಗಲು ಕಾರ್ ಬಂದಾಗ ಅದರೊಳಗೆ ಖಾಲೆದ್‌ನನ್ನು ದೂಡಿ ಸೈಯದ್ ಹೊರಡುತ್ತಾನೆ. ಇಸ್ರೇಲಿ ಸೈನಿಕರಿರುವ ಬಸ್ ಒಂದನ್ನು ಹತ್ತಿ ಸೈಯದ್ ಕೂರುತ್ತಾನೆ. ನಿಧಾನವಾಗಿ ಕ್ಯಾಮೆರಾ ಅವನ ಕಣ್ಣುಗಳ ಮೇಲೆಯೇ ದೃಷ್ಟಿ ಹರಿಸುತ್ತದೆ....

ಇದು ಎರಡು ವರ್ಷಗಳ ಹಿಂದೆ ಬಿಡುಗಡೆಯಾದ, ಹಲವಾರು ಪ್ರಶಸ್ತಿಗಳನ್ನು ಪಡೆದ ಪ್ಯಾಲೆಸ್ತೇನಿ ಸಿನಿಮಾ 'ಪ್ಯಾರಡೈಸ್ ನವ್' ಎಂಬ ಚಿತ್ರದ ಸಾರಾಂಶ. ಪ್ರತಿನಿತ್ಯ ಬಾಂಬ್ ದಾಳಿಗಳಿಗೆ ಗುರಿಯಾಗುವ ನಬ್ಲೂಸ್‌ನಲ್ಲೇ ಇದರ ಬಹುತೇಕ ಚಿತ್ರೀಕರಣ ನಡೆದಿದ್ದು ಅಲ್ಲಿನ ವಾಸ್ತವ ಚಿತ್ರಣಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಹಾಗೆಯೇ ಸಾಮಾನ್ಯ ಜನರ ಬದುಕನ್ನು ತೋರಿಸುತ್ತಾ ಹೇಗೆ ಅವರಿರುವ ಪರಿಸರ ಮತ್ತು ಅಸಹಾಯಕತೆಯೇ ಅವರನ್ನು ಕಠೋರವಾದ ಹಿಂಸಾಕೃತ್ಯಗಳಿಗೆ ದೂಡುತ್ತದೆ ಎಂಬುದನ್ನೂ ಚಿತ್ರಿಸುತ್ತದೆ. ಆದರೆ ಹಿಂಸೆ ಮತ್ತು ಪ್ರತಿಹಿಂಸೆಯ ಬಗ್ಗೆಯೇ ಮಾತನಾಡುವ ಈ ಚಿತ್ರದಲ್ಲಿ ಒಂದೇ ಒಂದು ಹಿಂಸಾಕೃತ್ಯದ ದೃಶ್ಯವೂ ಇಲ್ಲ. ಬದಲಾಗಿ ಹಿಂಸೆಯ ಬಗ್ಗೆ ಚರ್ಚಿಸುವಂತೆ, ಯೋಚಿಸುವಂತೆ ಎಲ್ಲರನ್ನು ಪ್ರೇರೇಪಿಸುತ್ತದೆ.

ಅಷ್ಟೇ ಅಲ್ಲ, ಮಾನವ ಬಾಂಬ್‌ಗಳಾಗುವವರು ರಾಕ್ಷಸರೂ ಅಲ್ಲ, ಕೋರೆ ಹಲ್ಲುಗಳಿರುವ ಪಿಶಾಚಿಗಳೂ ಅಲ್ಲ, ಬದಲಾಗಿ ಅವರೂ ಮನುಷ್ಯರೇ ಎಂಬುದನ್ನೂ ಈ ಚಿತ್ರ ಮನದಟ್ಟು ಮಾಡಿಕೊಡುತ್ತದೆ.

ಇದೆಲ್ಲಕ್ಕಿಂತ ಪ್ರಮುಖವಾಗಿ ಸಮರ್ಥನೀಯವಲ್ಲದ ಶೋಷಣೆ ಹೇಗೆ ಪ್ರತಿಹಿಂಸಾ ಕೃತ್ಯಗಳನ್ನು ಸಮರ್ಥಿಸುತ್ತದೆ ಎಂಬುದಕ್ಕೆ ಒತ್ತು ನೀಡುತ್ತದೆ. ಹಾಗೆಯೇ ಧಾರ್ಮಿಕ ಕಾರಣಗಳಿಗಿಂತಲೂ ಹೇಗೆ ವೈಯಕ್ತಿಕ ಸಂದರ್ಭ ಮತ್ತು ದೈನಂದಿನ ಬದುಕಿನಲ್ಲಿನ ಅವಮಾನಗಳು ಇಂತಹ ಕೃತ್ಯಗಳಿಗೆ ಪ್ರಚೋದನೆ ನೀಡುತ್ತದೆ ಎಂಬುದನ್ನು ಕೂಡ.

ಈ ಹಿನ್ನೆಲೆಯಲ್ಲಿ ನೋಡಿದಾಗ ಮೂಲಭೂತವಾದ ಮತ್ತು ಮೌಢ್ಯದತ್ತ ಜನ ಆಕರ್ಷಿತರಾಗುವುದು ಮತ್ತು ಅದರಿಂದ ಯಾವುದೋ ತರಹದ ಫಲ ಸಿಗುತ್ತದೆಂದು ನಂಬಿಕೆ ಹುಟ್ಟುವುದೂ ಅರ್ಥವಾಗುತ್ತದೆ.


ಇವತ್ತು ಜಗತ್ತಿನೆಲ್ಲೆಡೆ ಸಂಘಟಿತ ವ್ಯವಸ್ಥೆ ನಡೆಸುತ್ತಿರುವ ದಬ್ಬಾಳಿಕೆ ಮತ್ತು ಅದರ ವಿರುದ್ಧ ಪ್ರತಿಭಟಿಸುತ್ತಿರುವ ಅಸಂಘಟಿತ ಜನರ ಪ್ರತಿಹಿಂಸೆಗಳ ಹಿಂದಿನ ತರ್ಕಗಳನ್ನು 'ಪ್ಯಾರಡೈಸ್ ನವ್' ವಿಮರ್ಶಿಸಲು, ವಿವರಿಸಲು ಯತ್ನಿಸುತ್ತದೆ. ಆ ಮೂಲಕ ವ್ಯವಸ್ಥೆಯನ್ನೂ, ಪ್ರತಿಭಟನಾಕಾರರನ್ನೂ ಎಚ್ಚರಿಸಲು ಪ್ರಯತ್ನಿಸುತ್ತದೆ.

ಈ ಚಿತ್ರವನ್ನು ನೋಡಿದಾಗ ನನಗೆ ನೆನಪಾಗಿದ್ದು ಇತ್ತೀಚೆಗೆ ಇರಾಕಿನಲ್ಲಿ ಮಹಿಳೆಯೊಬ್ಬಳು ಮಾನವ ಬಾಂಬ್ ಆಗಿ ಸ್ಫೋಟಗೊಂಡು ಹತ್ಯೆ ಮತ್ತು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದು. ಒಬ್ಬ ಮುಸಲ್ಮಾನ ಮಹಿಳೆ ಹೀಗೆ ಮಾನವ ಬಾಂಬ್ ಆಗಿ ಹಲವಾರು ಜನರ ಕೊಲೆಗೆ ಕಾರಣಳಾಗುತ್ತಾಳೆಂದರೆ ಆಕೆಯ ಬದುಕು ಇನ್ನೆಷ್ಟು ಅಸಹಾಯಕತೆ, ಅವಮಾನ, ಆತಂಕದಿಂದ ಕೂಡಿದ್ದಿರಬಹುದು......

ಸುಮ್ಮನೆ ಚಿಂತಿಸಿ ನೋಡಿ.....

-ಗೌರಿ ಲಂಕೇಶ್

ನನ್ನ ಬರವಣಿಗೆಗೆ ಹಣೆಪಟ್ಟಿ ಅನವಶ್ಯಕ



ಪ್ರಶ್ನೆ : ನಿಮ್ಮ ಓದು ಮುಗಿದಾಗ ನಮ್ಮ [illegible] ಯೂನಿವರ್ಸಿಟಿಯಲ್ಲಿ ಅಧ್ಯಾಪಕರಾಗ ಬಹುದಿತ್ತು. ಅಂದರೆ ನಿಮಗೆ ಅಂಥ ಒಂದು ಬದುಕು ನಿಗದಿಯಾಗಿತ್ತು. ಅದನ್ನೆಲ್ಲಾ ತಿರಸ್ಕರಿಸಿ ಹೀಗೆ [illegible] ನುಗ್ಗಿ ಬಂದವರಲ್ಲಾ.. ಇದಕ್ಕೆ ಕಾರಣ ಹೇಳಿ ಸಾರ್..

ಉತ್ತರ: ನಾನು ಕಾಲೇಜಿನ ಅಧ್ಯಾಪಕ ವೃತ್ತಿಯನ್ನು ತಿರಸ್ಕರಿಸಿದೆ ಎನ್ನುವುದು ಸರಿಯಲ್ಲ. ನಾವು ಓದು ಮುಗಿಸುವ ಕಾಲಕ್ಕೆ ಆಗಲೇ ಕೆಲಸ ಸಿಕ್ಕುವುದು ಕಷ್ಟವಾಗಿತ್ತು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವಂತೂ ಅತ್ಯಂತ ನಿರುತ್ತೇಜಕ ವ್ಯಕ್ತಿಗಳಿಂದ ತುಂಬಿತ್ತು. ಡಿ.ಎಲ್.ಎನ್. ತೀನಂಶ್ರೀ ಮುಂತಾದ ಕನ್ನಡದ ಅಗ್ರಮಾನ್ಯ ವಿದ್ವಾಂಸರೆಲ್ಲಾ ನಿವೃತ್ತರಾಗಿ ನಿರ್ಗಮಿಸಿದ್ದರು. ಜಿಎಸ್‌ಎಸ್‌ರಂತಹ ಸೃಷ್ಟಿಶೀಲ ಬರಹಗಾರರು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಲು ಹೊರಟುಹೋಗಿದ್ದರು. ಹಾಗಾಗಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಅವನತಿಯ ಹಾದಿಯಲ್ಲಿತ್ತು. ಕೆಲಸ ಸಿಕ್ಕಬೇಕಾದರೆ ನನಗಿದ್ದದ್ದು ಎರಡೇ ಮಾರ್ಗಗಳು. ಇಲಾಖೆಯ ಮುಖ್ಯಸ್ಥರಿಗೆ ಮಸ್ಕಾ ಹೊಡೆಯುವುದು ಇಲ್ಲವೇ ನಮ್ಮ ತಂದೆಯವರ ಪ್ರಭಾವವನ್ನು ಪರೋಕ್ಷವಾಗಿಯಾದರೂ ಉಪಯೋಗಿಸಿಕೊಂಡು ಕೆಲಸ ಗಿಟ್ಟಿಸುವುದು. ನಾನು ಓದುತ್ತಿದ್ದಾಗ ಮೈಸೂರಿನಲ್ಲಿ ನಮ್ಮ ಗೆಳೆಯರ ಗುಂಪು, ನಮ್ಮ ವ್ಯಕ್ತಿತ್ವ, ನಡವಳಿಕೆ ಎಲ್ಲ ಹೇಗಿತ್ತೆಂದರೆ ನನ್ನಿಂದ ಕೆಲಸಕ್ಕಾಗಿ ಯೂನಿವರ್ಸಿಟಿಯ ಅಧಿಕಾರವರ್ಗಕ್ಕೆ ಪೂಸಿ ಹೊಡೆಯುವುದು ಸಾಧ್ಯವೇ ಇರಲಿಲ್ಲ. ಈ ಕಾರಣದ ಜೊತೆಗೆ ನನ್ನ ವ್ಯಕ್ತಿತ್ವದಲ್ಲೇ ಇದ್ದ ಉಡಾಫೆ, ತಲೆಹರಟೆ, ಬೇಜವಾಬ್ದಾರಿತನ ಇತ್ಯಾದಿಗಳೂ ಸೇರಿ ನನಗೆ ಕೆಲಸ ದೊರಕಲಿಲ್ಲ ಅಥವಾ ಅದಕ್ಕಾಗಿ ನಾನು ಹೆಚ್ಚು ಪ್ರಯತ್ನಿಸಲಿಲ್ಲ. ನನಗಾಗಿ ಒಂದು ಬದುಕಿನ ಬಗೆ ಸಿದ್ಧವಾಗಿತ್ತು. ಯೂನಿವರ್ಸಿಟಿಯಲ್ಲಿ ನನಗೆ ಉಜ್ವಲ ಭವಿಷ್ಯವಿತ್ತು ಎಂದೆಲ್ಲಾ ನೀನು ಈಗ ಊಹಿಸುವುದಕ್ಕೆ ಕಾರಣ ನಾನು ಬರಹಗಾರನಾಗಿ ಹೆಸರು ಮಾಡಿರುವುದರಿಂದ. ಆದರೆ ಓದು ಮುಗಿಸಿದಾಗ ನಾನು ಕೇವಲ ಸೆಕೆಂಡ್ ಕ್ಲಾಸಿನಲ್ಲಿ ಎಂಎ ಪಾಸು ಮಾಡಿದ ಒಬ್ಬ ವಿದ್ಯಾರ್ಥಿ ಮಾತ್ರ ಅಲ್ಲವೆ?

ನಿಮ್ಮ ಬರವಣಿಗೆ ಆರಂಭ ನೋಡಿದ್ರೆ ನೀವು ನಿಮ್ಮ ವಾರಿಗೆಯ ನವ್ಯ ಲೇಖಕರಲ್ಲೊಬ್ಬರು. ಆಗ ಇದ್ದಕ್ಕಿದ್ದ ಹಾಗೆ ಆ ಮಾರ್ಗದ ವಿರುದ್ಧ ತಿರುಗಿಬಿದ್ದಿರಿ. ಅದಕ್ಕೆ ಕಾರಣವೇನು?

ನಾನು ಬರೆಯಲು ಪ್ರಾರಂಭಿಸಿದಾಗ ನವ್ಯ ಕಾವ್ಯದ ಚಳವಳಿ ತುಂಬ ಜೋರಾಗಿತ್ತು. ಅನಂತಮೂರ್ತಿ ನನಗೆ ಕೆಲವು ಕಾಲ ಮೇಷ್ಟರಾಗಿದ್ದರು. ಈಗಲೂ ನಾನು ಅವರನ್ನು ಕರೆಯುವುದು 'ಮೇಷ್ಟರೆ' ಎಂದೇ. ನಮ್ಮ ಮನಸ್ಸಿನ ಅಭ್ಯಾಸಗಳು ಹೇಗಿರುತ್ತವೆ ಎಂದರೆ ಬೇರೆ ತರ ಕರೆಯುವುದಕ್ಕೆ ನಾಲಗೆಯೇ ಹೊರಳುವುದಿಲ್ಲ. ಅವರನ್ನು ಹಾಗೆ ಕರೆದಮೇಲೆ ನನಗೆ ಯಾವಾಗಲೂ ಅದು ತಮಾಷೆಯಾಗಿ ಕಾಣುತ್ತದೆ. ಮೈಸೂರಿನಲ್ಲಿ ಅನಂತಮೂರ್ತಿ, ರಾಜೀವ ತಾರಾನಾಥ್, ವಿಜಯದೇವರಾಜೇ ಅರಸು, ಗೋಪಾಲಕೃಷ್ಣ ಅಡಿಗ, ಸದಾಶಿವ, ಗಿರಿ ಇತ್ಯಾದಿಗಳ ದೊಡ್ಡ ಗ್ಯಾಂಗೇ ಇತ್ತು. ಸಾಹಿತ್ಯ, ತತ್ವಶಾಸ್ತ್ರ, ರಾಜಕೀಯ ಸಿದ್ಧಾಂತಗಳು ಕಾವ್ಯ ಮೀಮಾಂಸೆ ಇವೆಲ್ಲದರ ಭಾರೀ ಚರ್ಚೆ, ವಾಗ್ಯುದ್ಧ ಪ್ರತಿದಿನ ಕಾಫಿ ಹೌಸಿನಲ್ಲಿ ನಡೆಯುತ್ತಿತ್ತು. ಸಾಹಿತ್ಯದ ಬಗ್ಗೆ ನನ್ನ ನಿಲುವುಗಳಿಗೆ ಈ ಗ್ಯಾಂಗಿನ ಒಡನಾಟದಿಂದ ದೊರಕಿದ ಸಂಸ್ಕಾರ ತುಂಬಾ ಉಪಯುಕ್ತವಾಯ್ತೆಂದು ಅನ್ನಿಸುತ್ತದೆ. ಈ ಪ್ರಭಾವದಲ್ಲಿ ಬರೆದ ನನ್ನ ಹಲವು ಕೃತಿಗಳಲ್ಲಿ ನವ್ಯ ಸಂಪ್ರದಾಯದ ಶೈಲಿ ಕಾಣಬಹುದು. ಆದರೆ ನವ್ಯ ಸಂಪ್ರದಾಯದಿಂದ ನಾನು ಹೆಚ್ಚಾಗಿ ಕಲಿತದ್ದು ಭಾಷೆಯನ್ನು ಕುಶಲಕಲೆಯಾಗಿ ಉಪಯೋಗಿಸುವ ತಂತ್ರದ ಬಗ್ಗೆ.

ನಾವೆಲ್ಲಾ ಓದು ಮುಗಿಸಿ ಒಬ್ಬೊಬ್ಬರು ಒಂದೊಂದು ದಿಕ್ಕು ಹಿಡಿದಮೇಲೆ ನಾನು ಓದುತ್ತಿದ್ದಾಗ ಕಲ್ಪಿಸಿಕೊಂಡಿದ್ದ ಕನಸಿನ ವಿಶ್ವ ಮಂಜಿನಂತೆ ಕರಗಿಹೋಯ್ತು. ನಾನು ಅಧ್ಯಾಪಕ ವೃತ್ತಿ ಸೇರಿದ್ದರೆ ಬಹುಶಃ ನನ್ನ ಅನೇಕ ಮಿತ್ರರಂತೆ ನಾನೂ ಅದೇ ಗುಂಗಿನಲ್ಲೇ ಚರ್ಚೆ ಸೆಮಿನಾರುಗಳಲ್ಲೆ ಲೀನನಾಗಿ ಜೀವನ ಕಳೆಯುತ್ತಿದ್ದೇನೇನೋ! ನಾನು ಓದಿದ್ದಕ್ಕೆ ಯಾವ ರೀತಿಯಲ್ಲೂ ಸಂಬಂಧವಿಲ್ಲದ ಯಾವ್ಯಾವುದೋ ಕ್ಷೇತ್ರಗಳಲ್ಲಿ ತೊಡಗಿಕೊಂಡೊಡನೆ ಇಡೀ ನವ್ಯ ಮಾರ್ಗದ ದೃಷ್ಟಿ, ಧೋರಣೆ ಮತ್ತು ಅದರ ಬೌದ್ಧಿಕ ಸಿದ್ಧತೆಗಳು ಕ್ಷುಲ್ಲಕವಾಗಿಯೂ ಹಾಸ್ಯಾಸ್ಪದವಾಗಿಯೂ ಕಾಣತೊಡಗಿದವು. ಅಷ್ಟೇ ಅಲ್ಲ ನವ್ಯ, ಪ್ರಗತಿಶೀಲ, ನವೋದಯ, ಬಂಡಾಯ ಮುಂತಾದ ವರ್ಗೀಕರಣವೇ ಅಸಂಬದ್ಧವಾಗಿ ಕಾಣಿಸಿತು. ಇಂಗ್ಲಿಷ್ ಸಾಹಿತ್ಯದ ಅನುಕರಣೆಗಳಾಗಿ ಕನ್ನಡ ಸಾಹಿತ್ಯದ ಈ ಎಲ್ಲಾ ಚಳವಳಿಗಳೂ ಇರುವುದನ್ನು ನೀವು ಕಾಣಬಹುದು. ನವೋದಯ ಮತ್ತು ಪ್ರಗತಿಶೀಲ ಚಳವಳಿಯಲ್ಲಿ ಅವು ಅನುಕರಣೆಗಳಾದರೂ ಅದಕ್ಕೆ ಸಂವಾದಿಯಾದ ಸಾಮಾಜಿಕ ಸ್ಥಿತ್ಯಂತರಗಳು ಭಾರತೀಯ ಪರಿಸರದಲ್ಲಿದ್ದವು. ಆದರೆ ನವ್ಯ ಚಳವಳಿಯಂತೂ ಅದರ ತಾತ್ವಿಕತೆಯಲ್ಲಿ ಇಂಗ್ಲಿಷ್ ಸಾಹಿತ್ಯದ ಕೆಟ್ಟ ನಕಲಿಯಂತೆ ನನಗೆ ಕಂಡಿತು.

ನಾವೆಲ್ಲ, ಎಂದರೆ ನಾನು, ರಾಮದಾಸ್, ಶ್ರೀರಾಮ್, ಸುಂದರೇಶ್, ಶಾಮಣ್ಣ, ನಂಜುಂಡಸ್ವಾಮಿ ಮುಂತಾದವರೆಲ್ಲ ಆಗ ಲೋಹಿಯಾ ಮತ್ತು ಗೋಪಾಲಗೌಡರ ಪ್ರಭಾವದಲ್ಲಿ ಸಮಾಜವಾದಿ ಚಳವಳಿಯಲ್ಲಿ ಧುಮುಕಿದ್ದೆವು. ನವ್ಯಕಾವ್ಯ ಅಡಿಗರ ನೇತೃತ್ವದಲ್ಲಿ ಭಾರತೀಯ ಸನಾತನ ಧರ್ಮದ ವಕ್ತಾರನಾಗಿ ಇಡೀ ನವ್ಯ ಸಾಹಿತ್ಯ ಅರ್ಥವಿಲ್ಲದ ಅಪ್ರಸ್ತುತ ಗೊಣಗಾಟದಂತೆ ರೂಪುಗೊಳ್ಳತೊಡಗಿತು. ಹೀಗಾಗುವುದಕ್ಕೆ ಮುಖ್ಯ ಕಾರಣ ಆಗ ನವ್ಯಕಾವ್ಯದ ಮುಂಚೂಣಿಯಲ್ಲಿದ್ದ ಬ್ರಾಹ್ಮಣರು. ನಾವು ಏನನ್ನು ಕ್ರಿಯಾಶೀಲರಾಗಿ ವಿರೋಧಿಸಬೇಕೋ ಅವೆಲ್ಲ ಅವರ ಸಾಹಿತ್ಯದಲ್ಲಿ ಆರಾಧನೀಯವಾಗಿ ಆವಿರ್ಭವಿಸಿದ್ದವು. ಇದನ್ನು ಹೇಳಿದ ಕೂಡಲೇ ಎಲ್ಲರೂ ನಮ್ಮನ್ನು ಬ್ರಾಹ್ಮಣದ್ವೇಷಿಗಳೆಂದು ಜರೆಯುತ್ತಾರೆ. ಅಲ್ಲವೆಂದು ಚೆನ್ನಾಗಿ ಗೊತ್ತಿರುವ ಶರ್ಮರು ಅನಂತಮೂರ್ತಿಯಂಥವರೂ ಹೀಗೆ ಮಾತಾಡುವುದನ್ನು ನೋಡಿದಾಗ ಮಾತ್ರ ಇವರಲ್ಲಿ ಇನ್ನೂ ಉಳಿದುಕೊಂಡಿರುವ ಬ್ರಾಹ್ಮಣಿಕೆ ನೋಡಿ ಸಿಟ್ಟುಬರುತ್ತದೆ.

ಇವರ ಮೂರು ಕಾಸಿನ ಬ್ರಾಹ್ಮಣಿಕೆ ಉಳಿಸಿಕೊಳ್ಳಲು ಪಡುವ ಪಾಡು, ಕೊಡುವ ಕಾಟ ಸಹಿಸಲಾರದೆ ನಾವೆಲ್ಲ ಬರಹಗಾರರ ಒಕ್ಕೂಟದ ಸಮ್ಮೇಳನ ಮಾಡಿ, ನವ್ಯಕಾವ್ಯ ಮತಕ್ಕೆ ವಿದಾಯ ಹೇಳಿ ಹೊರಬಿದ್ದಿದ್ದು. ಆಮೇಲಿಂದ ನಾನು ಈ ಸಾಹಿತ್ಯ ಸಂಪ್ರದಾಯಗಳು, ಗುಂಪುಗಳು, ಮತಗಳು ಇವುಗಳ ಹತ್ತಿರ ಸುಳಿಯುವುದನ್ನೇ ಬಿಟ್ಟುಬಿಟ್ಟೆ.

ಇದಾದಮೇಲೆ ಅಡಿಗರು ಒಂದು ದಿನ ಬೆಂಗಳೂರಿನ ಸಂಗೀತಾ ಹೋಟೆಲಿನಲ್ಲಿ ಸಿಕ್ಕು ನವ್ಯ ಕಾವ್ಯದ ಮೇಲೆ ನಾವು ಮಾಡಿದ ಆರೋಪಗಳಿಗಾಗಿ ಯದ್ವಾತದ್ವಾ ಬೈದರು. ನಾನು, ಪಾಟೀಲ್, ಲಂಕೇಶ್ ಮೂರು ಜನರೂ ಕನ್ನಡ ಸಾಹಿತ್ಯದ ಕಂಟಕಗಳೆಂದು ಹೇಳಿದರು. ನಮ್ಮ ದೇಶದಲ್ಲಿ ಜಾತಿ ವಿಷಯ ಎತ್ತಿದ ಕೂಡಲೆ ಜನ ವಿದ್ಯುತಂತಿ ಮುಟ್ಟಿದಹಾಗೆ ಹಾರಿ ಬೀಳುವುದನ್ನು ನೋಡಿದರೆ ನನಗೆ ಪರಮಾಶ್ಚರ್ಯವಾಗುತ್ತೆ. ಅಡಿಗರು ರೇಗಾಡಿದ್ದನ್ನು ನೋಡಿ ನನಗೇನೂ ಸಿಟ್ಟು ಬರಲಿಲ್ಲ. ಆದರೆ ಜಾತಿ ವಿಷಯವನ್ನೂ ಸಾಹಿತ್ಯ ವಿಮರ್ಶೆಯ ವಲಯದಲ್ಲಿ ಚರ್ಚಿಸಿ ಹೊಸ ಸಾಮಾಜಿಕ ಆಯಾಮಗಳನ್ನೂ ಸಾಹಿತ್ಯವಿಮರ್ಶೆಗೆ ತರುತ್ತಿದ್ದೇವೆಂದು ಹೇಳಲು ಪ್ರಯತ್ನಿಸಿದ ನನ್ನ ಮಾತನ್ನು ಕೇಳುವ ವ್ಯವಧಾನವೇ ಅವರಿಗಿಲ್ಲದ್ದು ಬೇಸರ ತರಿಸಿತು. ಭಿನ್ನಾಭಿಪ್ರಾಯಗಳೇನಿದ್ದರೂ ಎದುರೆದುರೇ ಕೂಗಾಡಿ ಚುಕ್ತಾ ಮಾಡುತ್ತಿದ್ದ ಅಡಿಗರ ಬಗ್ಗೆ ನನಗೆ ಗೌರವವೇ ಇದೆ.

ಕಾರಂತರ ಜೀವನ 'ಕುವೆಂಪು ಕಲಾಸೃಷ್ಟಿ' ಲೋಹಿಯಾರ ತತ್ವ ಚಿಂತನೆ- ಈ ಮೂರು ನಿಮ್ಮ ಬರವಣಿಗೆಗೆ ಸಹಾಯಕವಾಗುವ ದಿಕ್ಸೂಚಿಗಳು ಅಂದಿದ್ದೀರಿ. ಇವತ್ತಿಗೂ ಈ ಅಂಶಗಳನ್ನು ಸಮರ್ಥಿಸುತ್ತೀರ?

ಕಾರಂತರ ಜೀವನದ ಪ್ರಯೋಗಶೀಲತೆ, ಕುವೆಂಪುರವರ ಕಲಾಸೃಷ್ಟಿ, ಲೋಹಿಯಾ ತತ್ವಚಿಂತನೆ, ಇವು ಮೂರೂ ನನ್ನ ಮುಂದಿನ ಬರವಣಿಗೆಯ ದಿಕ್ಸೂಚಿಗಳೆಂದು ಅವತ್ತು ನಾನು ಹೇಳಿದ್ದು. ಈ ಮೂರು ಅಂಶಗಳ ಪ್ರಭಾವವನ್ನೂ ನನ್ನ ಬರವಣಿಗೆಯಲ್ಲೂ, ಬದುಕಿನಲ್ಲೂ ಇವತ್ತಿಗೂ ನೀವು ಕಾಣಬಹುದಲ್ಲವೆ? ಭಾರತದ ತತ್ವಶಾಸ್ತ್ರ ಪರಂಪರೆ ಆಯಾ ಜಾತಿ ಮತ್ತು ಮತಗಳ ದೆಸೆಯಿಂದ ಬಹು ಹಿಂದೆಯೇ ಕೊನೆಯುಸಿರೆಳೆಯಿತು. ರಾಧಾಕೃಷ್ಣನ್, ಹಿರಿಯಣ್ಣಯ್ಯ ಇವರನ್ನೆಲ್ಲಾ ತತ್ವಜ್ಞಾನಿಗಳೆಂದು ಹೊಗಳುತ್ತಾರೆ. ಇವರನ್ನೆಲ್ಲಾ ಭಾಷ್ಯಕಾರರೆಂದು ಕರೆಯಬಹುದೇ ಹೊರತು ತತ್ವ ಮೀಮಾಂಸಕರೆಂದು ಕರೆಯಲು ಸಾಧ್ಯವಿಲ್ಲ. ಭಾರತದ ಈಚಿನ ವರ್ಷಗಳಲ್ಲಿ ಸೃಷ್ಟಿಸಿದ ಒರಿಜಿನಲ್ ಎನ್ನುವಂಥ ತತ್ವಮೀಮಾಂಸಕ ಎಂದರೆ ಲೋಹಿಯಾ ಎಂದೇ ನನ್ನ ಭಾವನೆ. ಗಾಂಧೀಜಿಯ ಧ್ಯೇಯ ಧೋರಣೆಗಳನ್ನು ತಾತ್ವಿಕ ದೃಷ್ಟಿಕೋನದಿಂದ ಚರ್ಚಿಸಿ ಅದಕ್ಕೊಂದು ಸೈದ್ಧಾಂತಿಕ ಸ್ವರೂಪ ನೀಡಿದ್ದೇ ಲೋಹಿಯಾ. ನಮ್ಮ ದೇಶದ ಕಳ್ಳ ಗಾಂಧಿವಾದಿಗಳನ್ನೇ ಗಾಂಧೀ ವಕ್ತಾರರೆಂದು ತಿಳಿದಿದ್ದ ನನಗೆ ಲೋಹಿಯಾ ಓದುವವರೆಗೂ ಗಾಂಧಿ ಬಗ್ಗೆ ಅಪಾರ ತಿರಸ್ಕಾರವೇ ಇತ್ತು. ಹಾಗಾಗಿ ಗಾಂಧಿ ಬಗ್ಗೆ ಇವತ್ತು ಮಾಯಾವತಿಯಾಗಲಿ ಕಾನ್ಶಿರಾಮ್ ಆಗಲೀ ತಿರಸ್ಕಾರದ ಮಾತಾಡಿದರೆ ಅದು ಸಹಜವೇ ಅನ್ನಿಸುತ್ತದೆ.

ವಿಜ್ಞಾನದ ವಿದ್ಯಾರ್ಥಿಯಲ್ಲದ ನೀವು ವಿಜ್ಞಾನದ ವಿಸ್ಮಯಗಳಿಗೆ ಗಂಟುಬಿದ್ದಿದ್ದು ಹೇಗೆ?

ವಿಜ್ಞಾನದ ವಿಸ್ಮಯಗಳಿಗೆ ನಾನು ಗಂಟು ಬಿದ್ದಿದ್ದೇನೆನ್ನುವುದು ಸಂಪೂರ್ಣ ತಪ್ಪು, ಅಲ್ಲಯ್ಯ! ತನ್ನ ಪಾಡಿಗೆ ತಾನಿರುವ, ಇದ್ದುದನ್ನು ಇದ್ದಹಾಗೆ, ಕಂಡುದನ್ನು ಕಂಡಹಾಗೆ, ನೋಡುವ ಮತ್ತು ಹೇಳುವ ಮನುಷ್ಯ ಇರಬೇಕಾದುದೇ ಹೀಗಲ್ಲವೆ? ಬೋಗಸ್ ಜನಿವಾರ ಉಡುದಾರ, ಶಿವದಾರಗಳನ್ನೆಲ್ಲಾ ಮಹಾಮಹಾ ಸಂಕೇತಗಳೆಂದು ಕತೆ ಬರೆಯುವವರಿಗೆ ಗಂಟು ಬಿದ್ದವರೆಂದು ಬೇಕಾದರೆ ಹೇಳು. ನಾನು ನಿನ್ನ ಹಾಗೇ ಅನ್ನ ತಿನ್ನುವ ನರಮನುಷ್ಯ. ನನ್ನ ಅನುಭವಗಳನ್ನೂ, ನನ್ನ ಅನುಭವಕ್ಕೆ ನಿಲುಕಿದ ಸತ್ಯಗಳನ್ನೂ ನಿನಗೆ ಹೇಳುತ್ತಿದ್ದೇನಷ್ಟೇ ಹೊರತು ನನ್ನ ಬರವಣಿಗೆಗೆ ಒಂದು ಹಣೆಪಟ್ಟಿ ಖಂಡಿತ ಅನವಶ್ಯಕ. ನಾನು ವೈಜ್ಞಾನಿಕ ಬರಹಗಾರನಂತೂ ಅಲ್ಲ, ನನ್ನಂಥ ಕಥೆಗಾರನೊಬ್ಬ ಮಿಸ್ಸಿಂಗ್ ಲಿಂಕ್‌ನಂಥ ಮಾನವಶಾಸ್ತ್ರದ ಪುಸ್ತಕವನ್ನಾಗಲೀ ವಿಸ್ಮಯದಂಥ ಇಕಾಲಜಿ ಮೇಲಿನ ಪುಸ್ತಕವನ್ನಾಗಲೀ ಬರೆಯಬೇಕಾಗಿ ಬಂದದ್ದು ಕನ್ನಡ ಸಾಹಿತ್ಯದ ದುರಂತ ಪರಿಸ್ಥಿತಿಯನ್ನು ತೋರಿಸುತ್ತದೆ. ಆಯಾ ಕ್ಷೇತ್ರಗಳಲ್ಲಿರುವ ಪ್ರತಿಭಾವಂತರಿಗೆ ತಮ್ಮ ಕ್ಷೇತ್ರದ ಜ್ಞಾನವನ್ನು ಇತರರೊಡನೆ ಹಂಚಿಕೊಳ್ಳಬೇಕೆಂಬ ದೊಡ್ಡತನ ಇಲ್ಲ. ಅವರ ತಲೆಯೆಲ್ಲಾ ಹೇಗಾದರೂ ಮಾಡಿ ವೀಸಾ ಗಿಟ್ಟಿಸಿ ವಿದೇಶಕ್ಕೆ ಹೋಗಿ ನೆಲೆಸುವುದರ ಕಡೆಗೇ ಇರುತ್ತದೆ. ಹೀಗಾಗಿ ಅವರಂತೂ ಪುಸ್ತಕ ಬರೆಯುವುದಿಲ್ಲ. ಮಿಕ್ಕ ಎರಡನೇ ಮೂರನೇ ದರ್ಜೆಯವರಿಗೆ ಅವರಿಗೇ ಅವರ ವಿಷಯಗಳಲ್ಲಿ ಆಸಕ್ತಿ ಇರುವುದಿಲ್ಲ. ಇನ್ನು ಇತರರಿಗೆ ಆಸಕ್ತಿ ಹುಟ್ಟುವಂತೆ ಹೇಗೆತಾನೆ ಅವರು ಬರೆಯುತ್ತಾರೆ. ಇದರಿಂದಾಗಿಯೇ ಕೆಟ್ಟ ವೈಜ್ಞಾನಿಕ ಪುಸ್ತಕಗಳ ಗೊಬ್ಬರದ ಗುಂಡಿಯೇ ನಮ್ಮಲ್ಲಿ ನಿರ್ಮಾಣವಾಗಿದೆ. ಸರ್ಕಾರಿ ಸ್ಕೀಮುಗಳು, ಬಲ್ಕ್ ಪರ್ಚೇಸ್‌ಗಳು ಇಲ್ಲಿಗೆ ಇವನ್ನೆ... ಸುರಿದು ಅಧಿಕಾರಿಗಳೂ ಪ್ರಕಾಶಕರೂ ಕೊಳ್ಳೆ ಹೊ... ಕೊಳ್ಳುತ್ತಾ ಕಾಲಾಯಾಪನೆ ಮಾಡುತ್ತಿದ್ದಾರೆ. ಈ ಲೋಫ... ಗಳ ಬಳಗಕ್ಕೆ ಸೇರುವುದರ ಬದಲು ಹಸ್ತ ಸಾಮುದ್ರಿ... ಪಂಚಾಂಗ ಬರೆದು ಬದುಕುವುದು ಒಳಿತು.

ನಿಮ್ಮ ಕಾದಂಬರಿ, ಕಥೆಗಳಲ್ಲಿ ಸಹಜವಾಗಿ ಮುಸ್ಲಿಮ... ಬರ್ತಾರೆ. ಈಚಿನ ನಿಮ್ಮ ಮೂಲಭೂತವಾದಿಗಳ ಬಗೆಗಿ... ಲೇಖನವನ್ನು ಹಲವು ಮುಸ್ಲಿಂ ಓದುಗರು ಸಮರ್ಥಿಸಿ... ಅಭದ್ರತೆಯನ್ನು ಘೋಷಿಸಿಕೊಂಡು ಕೆಲವು ಮತಾಂಧ... ಉಗ್ರಗಾಮಿಗಳಾಗುವ ಸೂಚನೆ ಕೊಡುತ್ತಿರುವ ... ಮುಸ್ಲಿಮರ ಕತೆಯೇನು?

ಮೂಲಭೂತವಾದಿಗಳಿಗೆ ನಾಯಕತ್ವ ವಹಿಸುವುದ... ಮೂಲಕ ಮುಸ್ಲಿಮರು ಅತ್ಯಂತ ಅಪಾಯಕಾರಿ ಪರಿಸ್ಥಿ... ಯನ್ನು ಸೃಷ್ಟಿಸುತ್ತಿದ್ದಾರೆ. ಇಲ್ಲಾ ಅವರ ವಿರುದ್ಧ ದ್ವೇಷವನ್ನು ಕೆರಳಿಸಿ ಹಿಂದೂಗಳ ಓಟು ಗಳಿಸಲೆತ್ನಿಸುತ್ತಿರುವವರು ಇಲ್ಲಾ ಅವರನ್ನು ಸದಾ ಅಭದ್ರ ಸ್ಥಿತಿಯಲ್ಲಿಟ್ಟು ಅವರನ್ನು ಪುಸಲಾಯಿಸುತ್ತ ಇಲ್ಲವೇ ಬ್ಲ್ಯಾಕ್‌ಮೇಲ್ ಮಾಡುತ್ತ ಅವರ ಓಟು ಗಿಟ್ಟಿಸಲು ಯತ್ನಿಸುತ್ತಿರುವವರು, ... ಇಬ್ಬರ ನಡುವೆ ಸಿಕ್ಕು ಮುಸ್ಲಿಮರು ನರಕದಲ್ಲಿ ಬದುಕುತ್ತಿದ್ದಾ... ಅವರನ್ನು ಕೇವಲ ನಮ್ಮಂಥ ನರಮನುಷ್ಯರೆಂದ... ನೋಡುವವರನ್ನು ಅವರು ನಂಬುವುದೇ ಅವರಿ... ಉಳಿದಿರುವ ಮಾರ್ಗ. ಆದರೆ ನಮ್ಮೊಡನೆ ಇರಬೇಕೆಂದಾದ... ಅವರು ಯಾವ ಮುಲಾಜನ್ನೂ ನಿರೀಕ್ಷಿಸಬಾರದು. ನಾ... ಭಗವದ್ಗೀತೆ, ಖುರಾನು, ಬೈಬಲ್ಲು, ಎಲ್ಲವನ್ನೂ ಯಾ... ರೀತಿಯ ದಾಕ್ಷಿಣ್ಯವಿಲ್ಲದೆ ವಿಮರ್ಶಿಸುವವರು. ಮುಸ್ಲಿಮ... ನಿಜವಾಗಿಯೂ ಅವರಿರುವ ನರಕದಿಂದ ಪಾರಾಗಬೇಕಾದ... ಗಟ್ಟಿ ಮನಸ್ಸು ಮಾಡಿ ತಮ್ಮ ಪೂರ್ವಾಗ್ರಹಗಳಿಂ... ಹೊರಬರಬೇಕಾಗುತ್ತದೆ.


ಹಿಂದೂಗಳು ಅವರ ಧರ್ಮವನ್ನೂ, ಮುಸ್ಲಿಮ... ಅವರ ಧರ್ಮವನ್ನೂ ಸರಿಯಾಗಿ ಪಾಲಿಸಿದರೆ ಯಾ... ಜಗಳವೂ ಇರುವುದಿಲ್ಲ ಎಂದು ಮೂಲಭೂತವಾದಿಗ... ಹೇಳುತ್ತಾರೆ. ಆದರೆ ಚರಿತ್ರೆಯನ್ನು ನೋಡಿದರೆ ಯಾವಾ... ಜನಗಳು ಧರ್ಮವನ್ನು ಅಲಕ್ಷಿಸಿ ಮಾನವೀಯತೆ ಮು... ಎಂದು ಬಗೆದಿದ್ದಾರೋ ಆಗೆಲ್ಲಾ ಶಾಂತಿ ಸಮಾಧಾನಗ... ನೆಲೆಸಿದ್ದು ಗೊತ್ತಾಗುತ್ತದೆ. ಜಗತ್ತಿನ ಎಲ್ಲ ಧರ್ಮಗಳ... ಆಧುನಿಕ ಸಮಾಜದಲ್ಲಿ ಅವನತಿಯತ್ತ ಸಾಗುತ್ತಿವೆ. ಸಾಂ... ಧರ್ಮಗಳ ಬಗ್ಗೆಯೇ ಮನುಷ್ಯನಿಗೆ ಅಲಕ್ಷ್ಯ ಹೆಚ್ಚು... ಇದೆ. ಸಾಂಸ್ಥಿಕ ಸಂಘಟನೆಗಳನ್ನು ಮೀರಿದ ವೈಯ... ಧಾರ್ಮಿಕತೆಯತ್ತ ಆಧುನಿಕ ನಾಗರಿಕತೆ ನಿಧಾನವಾ... ಸಾಗುತ್ತದೆ.

ಮೂಲಭೂತವಾದ ಎಲ್ಲ ಧರ್ಮಗಳಲ್ಲೂ ತ... ಎತ್ತುತ್ತಿರುವುದಕ್ಕೆ ಇದೇ ಬಹುಮುಖ್ಯ ಕಾರಣ. ತ... ಧಾರ್ಮಿಕತೆಯನ್ನು ಹೆಂಗುಸರನ್ನು ತುಳಿಯುವುದರ ಮೂ... ಇತರ ಧರ್ಮಗಳನ್ನು ದ್ವೇಷಿಸುವುದರ ಮೂಲಕ ಉ... ಕೊಳ್ಳಲು ಎಲ್ಲರೂ ಯತ್ನಿಸುತ್ತಿದ್ದಾರೆ. ಎಲ್ಲ ಮೂಲಭೂ...

ಇತ್ತೀಚೆಗೆ ಬಿ. ಚಂದ್ರೇಗೌಡರು 1996ರಲ್ಲಿ ಪೂರ್ಣಚಂದ್ರ ತೇಜಸ್ವಿಯವರನ್ನು ಸಂದರ್ಶಿಸಿದ್ದರ ಬಗ್ಗೆ ಬರೆದಿದ್ದರು. ಆದರೆ ಅಂದು ಟೇಪ್‌ರೆಕಾರ್ಡರ್ ಸರಿ ಇಲ್ಲದಿದ್ದುದರಿಂದ ಪ್ರಶ್ನೆಗಳಿಗೆ ತೇಜಸ್ವಿಯವರೇ ಬರಹದ ರೂಪದ... ಉತ್ತರಗಳನ್ನು ನೀಡಿದ್ದರು. ಆ ಉತ್ತರಗಳನ್ನು ಚಂದ್ರೇಗೌಡರು ತಮ... ಗ್ರಾಮೀಣ ಭಾಷೆಗೆ 'ಅನುವಾದಿಸಿ' ಪ್ರಕಟಿಸಿದ್ದನ್ನು ನೋಡಿ "ನಿಮಗೆ ಬುದ್ಧಿ, ಭಾಷೆ ಇದೆಯಾ? ದರಿದ್ರ" ಎಂದು ತೇಜಸ್ವಿಯವರು ಕೋಪಗೊಂಡಿದ್ದರು ಎಂದೂ ಬರೆದಿದ್ದರು.

ಅದೃಷ್ಟವಶಾತ್ ತೇಜಸ್ವಿಯವರು ಅಂದು ಬರೆದು ಕಳುಹಿಸಿದ್ದ-ಇಲ್ಲಿಯವರೆಗೂ ಪ್ರಕಟವಾಗದಿರುವದು-ಅವರ ಉತ್ತರಗಳ ಪ್ರತಿ ದೊರಕಿದೆ. ಅದ... ಇಲ್ಲಿ ಯಾವ ಬದಲಾವಣೆಯೂ ಇಲ್ಲದೆ ಪ್ರಕಟಿಸುತ್ತಿದ್ದೇವೆ.

-...



ನನ್ನ ಬರವಣಿಗೆಗೆ ಹಣಪಟ್ಟಿ ಅನವಶ್ಯಕ

ಸಂದರ್ಶನ

ಬಿ. ಚಂದ್ರೇಗೌಡ

ಪಾದಿಗಳು. ಇರುವುದು ಆಯಾ ಧರ್ಮೀಯರನ್ನು ತೋಷಿಸುವುದಕ್ಕೆ. ಆದರೆ ಅವರು ಮೇಲೆ ಹಾಕುವ ಸೋಗು ರಕ್ಷಿಸಲು ಎಂದು.

ಚಿದಂಬರ ರಹಸ್ಯದ ಕೊನೆಯಲ್ಲಿ ಎಲ್ಲರೂ ಲಂಟಾದ ಹೊಗೆಯಿಂದ ಸಾಯುತ್ತಾರೆ. ಆಗ ರಫಿ ಮತ್ತು ಜಯಂತಿಯನ್ನು ಎತ್ತರದ ಗುಡ್ಡದಲ್ಲಿ ನಿಲ್ಲಿಸಿ ರಕ್ಷಿಸಿಬಿಟ್ಟಿದ್ದೀರಿ. ಈ ಇಂಡಿಯಾದ ಭವಿಷ್ಯದ ಬಗ್ಗೆ ಇದು ನಿಮ್ಮ ಅಂತಿಮ ಆಶಯವೇ?

ಚಿದಂಬರ ರಹಸ್ಯ ಸಾಂಕೇತಿಕವಾಗಿ ಬರೆದಿರುವ ನನ್ನ ಕಥೆ ಅಲ್ಲ. ಜನಕ್ಕೆ ಏನಾದರೂ ಹೇಳಬೇಕೆಂದಿದ್ದರೆ, ಸಂದೇಶ ಕೊಡಬೇಕೆಂದಿದ್ದರೆ ನಾನು ಕಥೆ ಮುಖಾಂತರ ಹೇಳುವುದಕ್ಕೆ ಹೋಗುವುದಿಲ್ಲ. ನೇರವಾಗೇ ಹೇಳಲು ಪ್ರಯತ್ನಿಸುತ್ತೇನೆ. ಆದ್ದರಿಂದ ನನ್ನ ಯಾವ ಕಥೆಯನ್ನೂ ಯಾವುದೋ ಒಂದು ಒಳಾರ್ಥಗಳನ್ನಿಟ್ಟು ಬರೆದಿರುವ ಒಗಟು ಎನ್ನುವಂತೆ ನೋಡುವ ಅಗತ್ಯವಿಲ್ಲ. ಈ ರೀತಿಯ ಕೃತಕ ಸಾಂಕೇತಿಕತೆ ನವ್ಯಮಾರ್ಗದ ಅಮಾನ ಸಂದರ್ಭದಲ್ಲಿ ಇತ್ತು. ಓದಲಸಾಧ್ಯವಾದ ಅಧ್ವಾನಗಳನ್ನೆಲ್ಲಾ ಬರಕೊಂಡು ಅದರೊಳಗಿನ ಅದ್ಭುತ ವ್ಯಂಗ್ಯಾರ್ಥಗಳಿಗೆ ಅದನ್ನು ಹೊಗಳುತ್ತಾ ಓಡಾಡುತ್ತಿದ್ದರು. ಆದರೆ ಅವೆಲ್ಲಾ ಮಠ ಸೆಮಿನಾರುಗಳಿಂದಾಚೆಗೆ ಬದುಕಲೇ ಇಲ್ಲ. ವಾಚ್ಯದ ಮಟ್ಟದಲ್ಲಿ ಕಲಾತ್ಮಕವಲ್ಲದ್ದು ವ್ಯಂಗ್ಯದ ಮಟ್ಟದಲ್ಲಿ ಅಮೋಘವಾಗುವುದು ಸುಳ್ಳು. ಆದ್ದರಿಂದ ಕರ್ವಾಲೋ ಕಥೆಯ ಕೊನೆಯಲ್ಲಿ ಆಕಾಶದ ನೀಲಿಯಲ್ಲಿ ಲೀನವಾಗುವ ಓತಿಯಾಗಲೀ, ಚಿದಂಬರ ರಹಸ್ಯದಲ್ಲಿ ಕೊನೆಗೆ ಬೆಟ್ಟ ಹತ್ತಿ ಸಾವಿನಿಂದ ಪಾರಾಗುವ ರಫಿ ಜಯಂತಿಯಾಗಲಿ ಕಥೆಯ ವಾಸ್ತವದ ವಿಸ್ತರಣೆಯೇ ಹೊರತು ಸಂದೇಶಗಳನ್ನು ಹೊಟ್ಟೆಯಲ್ಲಿಟ್ಟುಕೊಂಡ ಒಗಟುಗಳಲ್ಲ. ತಮ್ಮ ವಾಚ್ಯದ ಪರಿಧಿಯನ್ನೂ ಮೀರಿ ಏನೇನೋ ಅರ್ಥಗಳನ್ನು ನಿನ್ನ ಮನಸ್ಸಿನಲ್ಲಿ ಸ್ಫುರಿಸುವಂತೆ ಮಾಡುವುದು ಎಲ್ಲ ಕಲಾಕೃತಿಗಳ ಅನುಷಂಗಿಕ ಲಕ್ಷಣ. ಅದನ್ನು ನಿರ್ದಿಷ್ಟಗೊಳಿಸಲು ಪ್ರಯತ್ನಿಸಿದರೆ ಆಗ ಅವೆಲ್ಲಾ ಕೃತಕ ಸಂಕೇತಗಳಾಗುತ್ತವೆ. ಕಥೆ ಒಂದು ಚಕ್ರಬಂಧ ಸ್ಪರ್ಧೆಯಾಗುತ್ತದೆ.

ಚಿದಂಬರ ರಹಸ್ಯ ಓದಿದಾಗ ಕೊನೆಯಲ್ಲಿ ನಿನಗೆ ಹಾಗೆನ್ನಿಸಿದರೆ ಅದು ನಿನ್ನ ವ್ಯಕ್ತಿತ್ವದ ಮತ್ತು ಸಂಸ್ಕಾರದ ಕೊಡುಗೆಯೇ ಹೊರತು ನಿನಗೆ ಹಾಗೆನ್ನಿಸಲಿ ಎಂದು ನಾನು ಅವರನ್ನು ಬೆಟ್ಟ ಹತ್ತಿಸಿಲ್ಲ.

ನಿಮ್ಮ ಆಸಕ್ತಿ ಸಂಚಾರಿಭಾವದ್ದು ಅಂದರೆ ಮೊದಲು ಸಂಗೀತ, ನಾಯಿ ಕಿವಿ ಜೊತೆ ತಿರುಗಿದ್ದು ಕೃಷಿ, ಕ್ಯಾಮರಾ, ಈಗ ಪ್ರಿಂಟಿಂಗ್ ಟೆಕ್ನಾಲಜಿ, ಮುಂದೆ?

ನಾನು ಕಣ್ಣಿಗೆ ಕಂಡಿದ್ದನ್ನೆಲ್ಲಾ ಆಸಕ್ತಿಯಿಂದ ಕುತೂಹಲದಿಂದ ನೋಡುತ್ತಾ ತಿಳಿಯುತ್ತಾ ಹೋಗುತ್ತೇನೆ. ಜ್ಞಾನಾರ್ಜನೆಯ ಪ್ರಚಂಡ ಸಂತೋಷ ಇರುವುದು ಇಲ್ಲೇ. ಕಾಲೇಜಿನಲ್ಲಿ ಏನು ಮಾಡಿದರೂ ಕಲಿಯಲಸಾಧ್ಯವಾಗಿದ್ದ ಅತಿ ಜಟಿಲ ವಿಷಯಗಳೆಲ್ಲಾ ನೀರು ಕುಡಿದಷ್ಟು ಸುಲಭವಾಗಿ ಜೀವನದಲ್ಲಿ ಕಲಿಯುತ್ತಾ ಹೋಗಬಹುದು. ನಮ್ಮ ವಿದ್ಯಾಭ್ಯಾಸ ಕ್ರಮವೇ ಸಂಪೂರ್ಣ ತಪ್ಪಾಗಿದ್ದೆಂದು ನನಗನ್ನಿಸುತ್ತದೆ. ಬದುಕುತ್ತಾ ಬದುಕಿಗೆ ಅಗತ್ಯವಾದ್ದನ್ನೆಲ್ಲಾ ತಿಳಿದುಕೊಳ್ಳುತ್ತಾ ಹೋಗುವ ಹೊಸಬಗೆಯ ವಿದ್ಯಾರ್ಜನೆಯ ಮಾರ್ಗಗಳನ್ನು ನಾವು ಅನ್ವೇಷಿಸಬೇಕು. ಬದುಕಿನ ಅಗತ್ಯಗಳಿಗೆ ತಕ್ಕಂತೆ ಗಳಿಸಿಕೊಳ್ಳುತ್ತಾ ಹೋಗುವ ವಿದ್ಯೆ ನಿಜಕ್ಕೂ ಚೇತೋಹಾರಿಯಾದದ್ದು. ಕಾಲೇಜಿನಲ್ಲಿ ನನಗೆ ಜ್ಞಾನಾರ್ಜನೆ ಎಂದರೆ ಯಮಯಾತನೆಯಾಗುತ್ತಿತ್ತು. ಈಗಲೂ ನನಗೆ ಒಮ್ಮೊಮ್ಮೆ ಪರೀಕ್ಷೆಯ ಕನಸುಗಳು ಬಿದ್ದು ನಿದ್ದೆಗೆಡುತ್ತೇನೆ. ಈಗ ಸಹ ನಾನು ಕಲಿತಿರುವುದಕ್ಕೆಲ್ಲಾ ಒಂದೊಂದು ಪರೀಕ್ಷೆ ಇದೆ ಎಂದು ನೀನು ಹೇಳಿದರೆ ಸಾಕು, ನನ್ನ ತಲೆ ಕ್ಷಣಾರ್ಧದಲ್ಲಿ ಖಾಲಿಯಾಗುತ್ತದೆ.

ನನ್ನದು ಸಂಚಾರಿ ಆಸಕ್ತಿ ಎಂದು ನೀನು ಹೇಳುವುದಕ್ಕಿಂತ ವಿಸ್ತಾರವಾದದ್ದು ಎಂದು ಹೇಳಿದರೆ ಸರಿ. ಫೋಟೋಗ್ರಫಿ, ಕೃಷಿ, ಸಂಗೀತ, ಬರವಣಿಗೆ ಇವೆಲ್ಲಾ ಬೇರೆಬೇರೆ ನಾಮಕರಣ ಮಾಡಿ ನಾವು ವರ್ಗೀಕರಿಸಿದ್ದೇವೆಯೆ ಹೊರತು ಇವೆಲ್ಲದರ ಒಳಹೊಕ್ಕು ನೋಡಿದರೆ ಒಂದರೊಳಗೊಂದು ಸಂಯೋಜನೆಗೊಂಡಿರುವುದು ಕಾಣುತ್ತದೆ. ಉದಾಹರಣೆಗೆ ಫೋಟೋಗ್ರಫಿಯ ಅನೇಕ ಶಿಸ್ತುಗಳು, ಕಾಂಪೋಜಿಷನ್, ನೆರಳುಬೆಳಕಿನ ವಿನ್ಯಾಸ ಇವೆಲ್ಲಾ ಬೇರೆಬೇರೆ ರೀತಿಯಿಂದ ಸಾಹಿತ್ಯದಲ್ಲೂ ಸಂಗೀತದಲ್ಲೂ ಇರುವುದನ್ನು ಕಾಣಬಹುದು. ಕೆಲವು ಸಾರಿ ಹೀಗೆ ಬೆರಳು ಮಾಡಿ ತೋರಿಸುವುದಕ್ಕೂ ಅಸಾಧ್ಯವಾದಷ್ಟು ಸೂಕ್ಷ್ಮವಾಗಿ ಪರಸ್ಪರ ಸಂಬಂಧಿಸಿರುತ್ತವೆ.

ಈ ಅಂಶವನ್ನೇ ನಾನು ಕಾರಂತರ ಅಂತಃಸ್ಸತ್ವ ಎಂದು ಕರೆಯುವುದು. ಅವರು ತಮ್ಮನ್ನು ಯಾವುದಕ್ಕೂ ಸೀಮಿತಗೊಳಿಸಿಕೊಳ್ಳದೆ ಕುತೂಹಲ ಕಂಡ ಕ್ಷೇತ್ರದಲ್ಲೆಲ್ಲಾ ಕ್ರಿಯಾಶೀಲಿಸಿದ್ದಾರೆ.

1988 ರ ಅಕ್ಟೋಬರ್‌ನಲ್ಲಿ ಶೃಂಗೇರಿಯಲ್ಲಿ ಅಂತರ್ಜಾತಿ ವಿವಾಹಿತರ ಸಮ್ಮೇಳನ ನಿಮ್ಮ ಅಧ್ಯಕ್ಷತೆಯಲ್ಲಿ ನಡೆದು ಕೆಲವು ನಿರ್ಣಯ ತಗೊಂಡೋ. ಆ ಬಗ್ಗೆ ಡಾ. ಸಿದ್ಧಲಿಂಗಯ್ಯ ಬಿಟ್ರೆ ಇನ್ನಾರೂ ಗಮನ ಕೊಡಲಿಲ್ಲ. ಈಚೆಗೆ ಈ ಮದುವೆಗಳಿಂದ ಸೃಷ್ಟಿಯಾಗೊ ಜನಗಳ ಬಗ್ಗೆ ಏನು ಮಾಡೋದು ಸಾರ್?

ಜಾತ್ಯತೀತರು ಎಂದು ಒಂದು ಪಂಗಡ ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಸಲುವಾಗಿ ಶೇಕಡಾ ಒಂದರಷ್ಟು ಮೀಸಲಾತಿಯನ್ನು ಕೊಡಬೇಕೆಂದು ಸಿದ್ಧಲಿಂಗಯ್ಯ ಒಬ್ಬರೇ ದನಿಯೆತ್ತಿದ್ದು. ಎಲ್ಲಾ ತಮ್ಮತಮ್ಮ ಜಾತಿ ಯೋಗಕ್ಷೇಮ ನೋಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಸಿದ್ಧಲಿಂಗಯ್ಯನಂಥವರು ಒಬ್ಬರಾದರೂ ಅದನ್ನು ಮೀರಿದರಲ್ಲ ಎಂದು ಸಂತೋಷವಾಗುತ್ತೆ. ಆದರೆ ಇದು ಅಂತರ್ಜಾತೀಯ ವಿವಾಹ ಆದವರೆಲ್ಲಾ ಸಂಘಟಿತರಾಗಿ ಪ್ರಯತ್ನಿಸದಿದ್ದರೆ ಆಗುವುದಿಲ್ಲ. ರಾಜಕಾರಣಿಗಳು ಎಂದೆಂದೂ ಭಾರತವನ್ನು ಜಾತ್ಯತೀತ ಸಮಾಜ ಆಗದಹಾಗೆ ನೋಡಿಕೊಳ್ಳುತ್ತಾರೆ. ಏಕೆಂದರೆ ಇನ್ನಾವ ಅರ್ಹತೆಗಳೂ ಇಲ್ಲದ ಅವರಿಗೆ ಜಾತಿ ಬಿಟ್ಟರೆ ಓಟಿಗೆ ಬೇರೆ ಗತಿಯೇ ಇಲ್ಲ.

ನಮ್ಮ ರಾಜಕಾರಣದ ಮಹಾ ದುರಂತ ನೋಡು! ಯಾವ ಸಂಘಟನೆಯನ್ನು ಸಮಸ್ಯೆ ಪರಿಹರಿಸಲಿಕ್ಕೆ ಎಂದು ನಾವು ಸೃಷ್ಟಿ ಮಾಡುತ್ತೇವೋ ಅವೇ ತಮ್ಮ ಅಸ್ತಿತ್ವಕ್ಕಾಗಿ ಸಮಸ್ಯೆ ಸೃಷ್ಟಿ ಮಾಡುತ್ತಾ ಅವನ್ನು ಉಲ್ಬಣಗೊಳಿಸುತ್ತಾ ನಾವು ರಾಜಕಾರಣ ಮಾಡುತ್ತಿದ್ದೇವೆ. ಜಾತಿ ಸಮಸ್ಯೆಯನ್ನು ಆಖೈರಾಗಿ ರಾಜಕಾರಣಿಗಳು ಬಗೆಹರಿಸುತ್ತಾರೆನ್ನುವುದು ಸುಳ್ಳು. ಮೀಸಲಾತಿ ದೆಸೆಯಿಂದ ಎಷ್ಟೆಷ್ಟೋ ಹೊಸಹೊಸ ಜಾತಿಗಳು ಹುಟ್ಟಿಕೊಂಡು ಈಗಾಗಲೇ ನಾವು ಹಿಂದುಳಿದವರು ಎಂದು ಪೈಪೋಟಿ ನಡೆಸುತ್ತಿಲ್ಲವೆ! ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗಿದ್ದು ನಮ್ಮ ಒಳಗೋ ಅಥವಾ ಹೊರಗೋ ಎನ್ನುವ ಅನುಮಾನ ಈಗ ನನಗೆ ಶುರುವಾಗಿದೆ. ಎಲ್ಲೋ ನಾವು ತಪ್ಪಿದ್ದೇವೆಯೆ ಎಂದು ಹುಡುಕಬೇಕಾಗಿದೆ.

ಇದು ಮೊದ್ಲೆ ಕೇಳಬೇಕಿದ್ದ ಪ್ರಶ್ನೆ ಸಾರ್. ನೀವು ಹಿಂದೆ ಹೇಳಿದಂಗೆ ಸಾಹಿತ್ಯ ಪಾಠ ಹೇಳೋರ ಉಪಕಸುಬಾಗ್ತಾಯಿದೆ. ಅಂದ್ರೆ ವಿಮರ್ಶೆನೂ ಅಂಗೆ ಆಗ್ತಾಯಿದೆಯಾ ಸಾರ್?

ಕನ್ನಡ ಸಾಹಿತ್ಯದ ವಿಮರ್ಶೆ ಬಹಳ ಚಿಂತಾಜನಕ ಸ್ಥಿತಿಯಲ್ಲಿದೆ. ಇದಕ್ಕೆ ಕಾರಣ ಬರೇ ಸಾಹಿತ್ಯ ಓದಿದ ಕೂಚಂಭಟ್ಟರು ತಮಗೆ ಗೊತ್ತಿರುವ ನಾಲ್ಕಾರು ಪಾರಿಭಾಷಿಕ ಪದಗಳನ್ನೇ ತಿರುವಿ ಹಾಕುತ್ತಾ ಕುಳಿತಿದ್ದಾರೆ. ಸಾಹಿತಿಗಳು ಅವರನ್ನು ಕಡೆಗಣಿಸಿದ್ದಾರೆ. ಜನಗಳಂತೂ ಅವರು ಇದ್ದಾರೋ, ಸತ್ತಿದ್ದಾರೋ ಎಂದು ಸಹ ನೋಡಬರುತ್ತಿಲ್ಲ. ಮೊನ್ನೆ ಲಂಕೇಶ್ ತಾವೇ ಏಕೆ ಪುಸ್ತಕ ಅವಲೋಕನ ಮಾಡುತ್ತಿದ್ದೇನೆಂದು ಹೇಳುತ್ತಾ ನಮ್ಮ ವಿಮರ್ಶಕರ ಗೋಳನ್ನು ನಾಲ್ಕು ಮಾತಿನಲ್ಲಿ ವಿವರಿಸಿದ್ದಾರೆ. ತಮ್ಮ ಕಾಮನ್‌ಸೆನ್ಸ್ ಮತ್ತು ಜನರಲ್ ನಾಲೆಡ್ಜ್ ಇಷ್ಟನ್ನು ಉಪಯೋಗಿಸಿ ಒಂದು ಪುಸ್ತಕ ಚೆನ್ನಾಗಿದೆಯೋ ಇಲ್ಲವೋ, ಅದಕ್ಕೆ ಕೊಡುವ ಹಣದ ಎಷ್ಟು ಭಾಗ ಸಾರ್ಥಕ, ಎಷ್ಟು ವ್ಯರ್ಥ, ಇಷ್ಟನ್ನು ಸಹ ಸ್ಪಷ್ಟವಾಗಿ ಹೇಳಲಾಗದಷ್ಟು ನಮ್ಮ ವಿಮರ್ಶನ ಕ್ಷೇತ್ರ ದುಃಸ್ಥಿತಿಗೆ ಇಳಿದಿರುವುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಕೆಲವರು ತಾವು ಓದಿದ್ದನ್ನೆಲ್ಲಾ ಮೆರೆಯಲು ಪುಸ್ತಕವನ್ನು ನಿಮಿತ್ತ ಮಾಡಿಕೊಂಡರೆ ಇನ್ನು ಕೆಲವರು ಸಾಹಿತ್ಯದ ಪುಢಾರಿಗಿರಿಗೆ ವಿಮರ್ಶೆಯನ್ನು ವಾಹಕವನ್ನಾಗಿ ಮಾಡಿಕೊಳ್ಳುತ್ತಾರೆ. ಯಾವುದೇ ವಸ್ತುನಿಷ್ಠ ಮಾನದಂಡಗಳಿಲ್ಲದ ಟೊಳ್ಳು ವಿಮರ್ಶೆ ಎಂದು ಅರಿವಾಗುತ್ತಿದ್ದಂತೆಯೇ ಜನ ವಿಮರ್ಶಕರನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಇವನು ಯಾವುದನ್ನು ಹೇಗೆ ಬೇಕಾದರೂ ತಿರುಚಿ ಹೇಳಬಲ್ಲವನು ಎಂದು ಸಾಬೀತಾದ ಮೇಲೆ ಓದುಗರಿರಲಿ, ಪುಸ್ತಕ ಬರೆದವನು ಸಹ ಅವನನ್ನು ವಿಮರ್ಶಕ ಹೊಗಳಿದ್ದರೂ ನಂಬುವುದಿಲ್ಲ. ಮದುವೆಗೆ ಪುರೋಹಿತನಿರಬೇಕು ಎನ್ನುವಂತೆ ಕನ್ನಡ ಸಾಹಿತ್ಯದ ಔಪಚಾರಿಕ ಅಗತ್ಯಗಳಿಗಾಗಿ ಸಾಹಿತ್ಯ ವಿಮರ್ಶೆ ಕುಟುಕು ಜೀವ ಉಳಿಸಿಕೊಂಡಿದೆ. ಈ ಕ್ಷೇತ್ರಕ್ಕೆ ನವ ಚೈತನ್ಯ ನೀಡುವಂಥ ಪೀಳಿಗೆಯೊಂದು ಇನ್ನೂ ಬರಬೇಕಾಗಿದೆ.

ಇನ್ನೊಂದು ಪ್ರಶ್ನೆ ಸಾರ್. ಸದ್ಯದ ರಾಜಕಾರಣದ ಬಗ್ಗೆ ಏನಾದ್ರೂ ಭರವಸೆ ಇದೆಯಾ?

ಸದ್ಯದ ರಾಜಕಾರಣದ ಬಗ್ಗೆ ನಾನು ಯಾಕಯ್ಯ ನಿನಗೆ ಭರವಸೆ ಕೊಡಲಿ? ನಿನಗಾದರೂ ಏನು ಬಂದಿದೆ ಹೇಳು ಈಗ ತೊಂದರೆ? ಮೊಯ್ಲಿ ಕರ್ನಾಟಕಕ್ಕೆ ಅನುರೂಪವಾದ ಮುಖ್ಯಮಂತ್ರಿ, ನರಸಿಂಹರಾಯನಂತೂ ಭಾರತಕ್ಕೆ ಹೇಳಿ ಮಾಡಿಸಿದಂಥ ಪ್ರಧಾನಿ. ಯಾರು ಅಧಿಕಾರಕ್ಕೆ ಬಂದರೂ ನಡಕೊಂಡು ಹೋಗುವ ದೇಶ ಇದು. ಎಲ್ಲ ಸಮಸ್ಯೆಗಳನ್ನೂ ಕಾಲಪುರುಷನೇ ನಿಧಾನವಾಗಿ ಬಗೆಹರಿಸುವಾಗ ತಲೆಹರಟೆ ಮಾಡದೆ ಸುಮ್ಮನೆ ಸಿಂಹಾಸನದ ಮೇಲೆ ಕುಳಿತಿದ್ದರೆ ಸಾಕು ರಾಜ್ಯಭಾರ ಸಲೀಸಾಗಿ ಸಾಗುತ್ತದೆ. ಈ ದೇಶದಲ್ಲಿ ಏನಾದರೂ ಉದ್ದೇಶಪೂರ್ವಕವಾದದ್ದು ಪ್ರಜ್ಞಾಪೂರ್ವಕವಾದದ್ದು ಸರ್ಕಾರದಲ್ಲಿ ಸಾಧ್ಯ ಎಂದು ನಾನು ನಂಬಿಲ್ಲ. ಕಾಫಿ ಉದ್ಯಮದಲ್ಲೇ ನಾನು ನೋಡಿದ್ದೇನಲ್ಲ! ಎಲ್ಲಾ ಒಪ್ಪಿ ಎಲ್ಲಾ ಸಮ್ಮತಿಸಿದ ಮೇಲೂ ಯಾವ ಕಾನೂನೂ ಬದಲಾಗುತ್ತಿರಲಿಲ್ಲ. ನಿನಗೆ ಗೊತ್ತಿಲ್ಲ, ನಮ್ಮ ದೇಶವನ್ನು ಆಳಿದ ಗುಲಾಮೀ ಸಂತತಿಯವರು ಬಾಗಿಲು ಕಾಯುವ ಗುಲಾಮರಾಗಿದ್ದವರು ನಮ್ಮ ದೇಶವನ್ನು ಹಲವಾರು ಶತಮಾನಗಳು ಆಳೀ ಆಳೀ ಸುಸ್ತಾದರು. ಬಾಗಿಲು ಕಾಯುತ್ತಿದ್ದವ ಸಿಂಹಾಸನ ಖಾಲಿ ಇದ್ದುದನ್ನು ನೋಡಿ ಹತ್ತಿ ಕುಳಿತುಬಿಟ್ಟಿದ್ದಾನೆ! ಇಳಿಸಲು ಯಾರೂ ಬರಲೇ ಇಲ್ಲ. ನಮ್ಮ ದೇಶದ ಪರಿಸ್ಥಿತಿ ಅಲ್ಲಿಗೆ ತಂದಿಟ್ಟಿದ್ದಾರೆ. ಕಾಂಗ್ರೆಸ್ಸಿಗರನ್ನೂ ನೋಡಿಯಾಯ್ತು. ಎಡಪಂಥೀಗಳನ್ನೂ ನೋಡಿಯಾಯ್ತು. ಬಲಪಂಥಿಗಳನ್ನೂ ನೋಡಿಯಾಯ್ತು. ಜನ ಈಗ "ಹ್ಯಾಗೋ ಅತ್ಲಾಗಿ ನಡೆಸಿಕೊಂಡು ಹೋಗ್ರಪ್ಪ" ಎಂದು ಹೇಳುವ ಪರಿಸ್ಥಿತಿಗೆ ಬಂದಿದ್ದಾರೆ. ಇಲ್ಲದಿದ್ದರೆ ಮಟ್ಕಾ ತರ ಮುಖ್ಯಮಂತ್ರಿ ಮಾಡೋದಕ್ಕೆ ಡೆಲ್ಲಿಯಿಂದ ಲಕೋಟೆ ಬರುವುದನ್ನು ಕಾಯುತ್ತಿದ್ದರೇನಯ್ಯ.

ಉತ್ತರ ಭಾರತದ ಬಹುಜನ ಸಮಾಜವಾದಿ ಪಾರ್ಟಿ ಇಲ್ಲಿ ಯಾವ ರೂಪದಲ್ಲಿ ತಯಾರಾಗ ಬಹುದು?

ಕಾನ್ಸೀರಾಮ್ ಉತ್ತರ ಭಾರತದಲ್ಲಿ ದಲಿತರು, ಹಿಂದುಳಿದವರು, ಶೂದ್ರರು ಇವರನ್ನೆಲ್ಲಾ ಇಷ್ಟರಮಟ್ಟಿಗೆ ಸಂಘಟಿಸಿರುವುದು ನನಗೆ ಪವಾಡದಂತೆ ಕಾಣುತ್ತದೆ. ಅಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆಯೋ ನನಗೆ ಗೊತ್ತಿಲ್ಲ. ನಾನು ನಮ್ಮಲ್ಲಿನ ಅನೇಕ ಶೂದ್ರರ, ಹಿಂದುಳಿದವರ, ದಲಿತರ ಸಂಘಟನೆಗಳನ್ನು ಹತ್ತಿರದಿಂದ ನೋಡಿದ್ದೇನೆ. ಅವರಲ್ಲಿ ಯಾವ ರೀತಿ ಆಶಿಸ್ತು, ಅಧಿಕಾರ ಲಂಪಟತೆ, ಪರಸ್ಪರ ದ್ವೇಷ, ಒಳಜಗಳಗಳಿವೆಯೆಂದರೆ ರಾಜಕೀಯ ಅಧಿಕಾರ ನೂರಾರು ಮೈಲಿ ದೂರ ಇದೆ ಎನ್ನಬೇಕಾದರೆ ಇಲ್ಲಿ ಕಚ್ಚಾಡಿಕೊಳ್ಳಲು ಶುರುಮಾಡುತ್ತಾರೆ. ಇನ್ನು ಅಧಿಕಾರ ಕೈಯ್ಯಳತೆಯೊಳಗೆ ಬಂದಾಗ ಏನಾಗಬಹುದು ಊಹಿಸು. ಕಾನ್ಸಿರಾಮ್ ಮಹಾತ್ಮ ಗಾಂಧಿಯಷ್ಟು ಅಸಾಧಾರಣ ವ್ಯಕ್ತಿತ್ವದ ಮನುಷ್ಯನಾಗಿದ್ದರೆ ಮಾತ್ರ ಈ ಶೂದ್ರರನ್ನು ರಾಜಕೀಯ ಶಕ್ತಿಯನ್ನಾಗಿ ಒಟ್ಟುಮಾಡಲು ಸಾಧ್ಯ.

ನಮ್ಮ ಬ್ರಾಹ್ಮಣ ಟೀಕೆಯನ್ನು ನೋಡಿ ಶೂದ್ರರೆಲ್ಲಾ ಒಳ್ಳೆಯವರು ಮುಗ್ಧರು ಎಂದು ನಮ್ಮ ಅಭಿಪ್ರಾಯ ಎಂದು ಎಲ್ಲಾದರೂ ತಿಳಿದೀಯ! ಅವಕಾಶ ಸಿಕ್ಕರೆ ಇವರೆಲ್ಲಾ ಹಾರುವರಿಗಿಂತ ನೀಚತನ ತೋರಿಸುತ್ತಾರೆ. ಕರ್ನಾಟಕದಲ್ಲೇ ಒಕ್ಕಲಿಗರು ಲಿಂಗಾಯ್ತರಿಗೆ ಅಧಿಕಾರ ಸಿಕ್ಕಾಗ ತಮಗಿಂತ ಕೆಳಗಿರುವ ಇತರ ಶೂದ್ರರನ್ನೂ ಕೊಂಚ ಮೇಲೆತ್ತೋಣ ಎನ್ನುವ ದೊಡ್ಡತನ ತೋರಿಸಿದರ? ಇದರಿಂದಾಗಿ ಎಲ್ಲ ವರ್ಗಗಳೂ ಎಷ್ಟು ಪರಸ್ಪರ ಅಪನಂಬುಗೆಯಿಂದ ಇವೆ ಎಂದರೆ ತಮಗೆ ಅಧಿಕಾರ ಸಿಕ್ಕುವುದಿಲ್ಲವೆಂದಾದರೆ ಬ್ರಾಹ್ಮಣನೇ ಇರಲಿ ಎನ್ನುತ್ತಾರೆ.

ಅಯೋಗ್ಯರ, ನೀಚರ ಸರಾಸರಿ ಪ್ರಮಾಣ ಎಲ್ಲ ಜಾತಿಗಳಲ್ಲೂ ಸಮಾನವಾಗಿದೆ. ಆದರೆ ಹಾರುವರಿಗೆ ದೇಶವ್ಯಾಪಿ ಇರುವ ಅಧಿಕಾರಿಗಳ, ಸುದ್ದಿ ಮಾಧ್ಯಮಗಳ ಜಾಲದಿಂದ ಅವನು ಇತರರಿಗಿಂತ ಹೆಚ್ಚು ಅಪಾಯಕಾರಿಯಾಗಲು ಸಾಧ್ಯ ಎಂದಷ್ಟೇ ನಾವು ಅವರ ಬಗ್ಗೆ ವಿಶೇಷ ಕಾಳಜಿ ವಹಿಸಿರುವುದು. ■

ಶಕೆ-1

ಬೇತಾಳ ವಿಕ್ರಮನ ಬೆನ್ನು
ಬಿದ್ದಿರುವನೆಂಬ ಆರೋಪ
ಬೇತಾಳನಿಗೋ ಸುಳ್ಳೇ
ಮೋಜು ಮಾಡಿ
ಕಾಲಹರಣ ಮಾಡುವ ಶಾಪ.

ಪುಂಖಾನು ಪುಂಖ ಕಥೆ ಹೇಳಲೇ
ಬೇಕಾದ ಕರ್ಮಬೇತಾಳನಿಗೆ
ಸಾಕಾಗಿ ನಿಂತರೆ ರಕ್ತಕಾರಿ
ಸಾಯುವ ಭೀತಿ ಅವನಿಗೆ.

ಪ್ರಶ್ನೆಯೇ ಅಲ್ಲದ ಒಣತರ್ಕಕ್ಕೆ
ವಿಕ್ರಮದ ಉತ್ತರದ ಬೇಡಿಕೆ
ತಿಳಿದೂ ಹೇಳದಿದ್ದರೆ ತಲೆಸಾವಿರ
ಹೋಳಾಗಿ ಸಿಡಿಯುವುದೆಂಬೆಚ್ಚರಿಕೆ.

ವಿಕ್ರಮನ ಕೊಲ್ಲುವ ಹಠದಲ್ಲಿ
ಬೇತಾಳನ ಕಥೆ ನಿರಂತರ
ಬೇತಾಳನ ಗೆಲ್ಲುವ ಛಲದಲಿ
ಎಲ್ಲ ಪ್ರಶ್ನೆಗೂ ಸಮರ್ಪಕ ಉತ್ತರ.

ಶಕೆ-2


ಬೇತಾಳನೀಗ ಕಥೆಗಳ ಬರ
ವಿಕ್ರಮ ಸೋಲುವುದಿಲ್ಲೆಂಬ ಬೇಸರ
ಹೇಳಿಯೇ ತೀರುವೆನು ಉತ್ತರ
ಸಾಯುವುದಿಲ್ಲೆಂದು ಇವನ ನಿರ್ಧಾರ.

ನಾನೇ ರಕ್ತಕಾರಿ ಸತ್ತುಬಿಡುವೆನೇ?
ಬೇತಾಳನಿಗೀಗ ತಳಮಳದಾತಂಕ
ಎಂಥ ಕಥೆಗೂ ಎದೆಯೊಡೆಯಲು ಸಿದ್ಧ
ಯಾವ ಉತ್ತರಕ್ಕೂ ಬದ್ಧ.
ವಿಕ್ರಮ ನಿರಾತಂಕ.

ದಾರಿಗೇನು ಸಾಗುತ್ತದೆ.
ಸುಳ್ಳಿನ ಕಥೆಗಳ ಎಷ್ಟೆಂದು ಹೆಣೆವುದು?
ಸತ್ಯಕ್ಕೆ ಸಾವಿಲ್ಲ ಬೇತಾಳ ಬರೀ ಬೆಂತರ
ವಿಕ್ರಮ ಜೀವಂತ. ಸತ್ಯದಪರಾವತಾರ.

ಸತ್ಯದ ಬೆನ್ನೇರಿ
ಮಿಥ್ಯದ ಸವಾರಿ
ಕಥೆ ಸಾಗುವುದೆಂತೋ?
ಶಕೆ ಮುಗಿಯುವುದೆಂತೋ?

□ ರೂಪ ಹಾಸನ



ದ್ವಾಪರದ ಶ್ರೀಕೃಷ್ಣ ಪರಮಾತ್ಮನಿಗೂ ಐಟಿ ಕಂಪೆನಿಗೂ ಏನು ಸಂಬಂಧ?

ಪುರಾಣದ ಗೋಪಿಕಾ ಸ್ತ್ರೀಯರಿಗೂ ಫೈವ್‌ಸ್ಟಾರ್ ಹೋಟೆಲಿಗೂ ಯಾವ ಜನ್ಮದ ಬಂಧ? ತನಗೆ ಫ್ಲೈಓವರ್, ಹೆಲಿಪ್ಯಾಡ್, ಐಷಾರಾಮಿ ಅಪಾರ್ಟ್‌ಮೆಂಟ್, ವಿದೇಶಿ ಕಾರುಗಳು, ಅಮ್ಯೂಸ್‌ಮೆಂಟ್ ಪಾರ್ಕ್, ಪಿಜ್ಜಾ-ಬರ್ಗರ್‌ಗಳ ನೈವೇದ್ಯವೇ ಬೇಕೆಂದು ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯ ಯಾವ ಅಧ್ಯಾಯದ ಯಾವ ಶ್ಲೋಕದಲ್ಲಿ ಹೇಳಿರಬಹುದು?

ಕನ್‌ಫ್ಯೂಸಾಯಿತೆ? ವಿಚಿತ್ರವಾದರೂ ಇದು ಸತ್ಯ. ಕನ್ನಡಿಗರ ಮುಠ್ಠಾಳ ಬುದ್ಧಿ, ಕರ್ನಾಟಕ ಸರ್ಕಾರದ ತಲೆಯಲ್ಲಿ ಲದ್ದಿ ಮತ್ತು ಇಸ್ಕಾನ್ ಮಾಲೀಕ ಮಧು ಪಂಡಿತ ದಾಸನ ಕೇದಿಬುದ್ಧಿಗಳಿಗೆ ಯಾರೂ ಒದೆ ಕೊಡದೇ ಹೋದರೆ ಬಡಶಾಲಾ ಮಕ್ಕಳಿಗೆ ಊಟ ಕೊಡುವ ಸರ್ಕಾರದ ಅಕ್ಷರ ದಾಸೋಹ ಪೂರ್ತಿ ಇಷ್ಟರಲ್ಲೇ ಇಸ್ಕಾನ್ ವಂಚಕರ ಪಾಲಾಗಲಿದೆ!

ಜೊತೆಗೆ ಅಕ್ಷರ ದಾಸೋಹದ ನೆಪದಲ್ಲಿ ವಸಂತಪುರದ ಅಮೂಲ್ಯ ನಲವತ್ತೆಂಟೆಕರೆ ಸರ್ಕಾರಿ ಭೂಮಿ ಇಸ್ಕಾನ್ ಖದೀಮರ ಪಾಲಾಗುತ್ತದೆ!

ಮತ್ತು ಅಕ್ಷರ ದಾಸೋಹದ ನೆಪದಲ್ಲಿ ಇಸ್ಕಾನ್ ಧಣಿ ಮಧು ಪಂಡಿತದಾಸನ ಫಾರಿನ್ ಫಂಡ್ ಲೂಟಿಯೂ ನಿರಾತಂಕವಾಗುತ್ತದೆ!



ಇಸ್ಕಾನ್ ಹಗಲು ದರೋಡೆ

ರಾಜಾಜಿನಗರದ ಸೋಪ್ ಫ್ಯಾಕ್ಟರಿ ಎದುರಿನ ಹೈಟೆಕ್ ಇಸ್ಕಾನ್ ದೇವಾಲಯವನ್ನು ನಿರ್ಮಿಸಲು ಕರ್ನಾಟಕದ ಬಹುತೇಕ ಆಸ್ತಿಕರು ದುಡ್ಡು ಕೊಟ್ಟಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಆವತ್ತು ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಸರ್ಕಾರದ ಅಮೂಲ್ಯ ಏಳೆಕರೆ ಭೂಮಿಯನ್ನು ದಾನ ಕೊಟ್ಟಿದ್ದಾರೆ.

ಕೃಷ್ಣನ ಭಕ್ತಿ ಯಾರ ಸೊತ್ತು? ಇಸ್ಕಾನ್ ಅಂದರೆ ಅಂತರ ರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘದ ಹೆಸರೇ ಅದೊಂದು ಭಕ್ತಿ ಚಳವಳಿಯೆಂಬುದನ್ನು ಸಾರಿಸಾರಿ ಹೇಳುತ್ತದೆ.

1985 ರ ಸುಮಾರಿಗೆ ಕಾಲೇಜು ತೊರೆದು, ಓದುಬಿಟ್ಟು, ಮನೆ ಮಠಗಳನ್ನೆಲ್ಲ ತ್ಯಜಿಸಿ ಶ್ರೀಕೃಷ್ಣನ ಭಕ್ತಿಯೊಂದನ್ನೇ ನಂಬಿದ ಅನೇಕ ಯುವಕರು ತಲೆ ಬೋಳಿಸಿಕೊಂಡು ಬೀದಿಬೀದಿ ಸುತ್ತಿ ಭಿಕ್ಷೆ ಬೇಡಿದ ಫಲವೇ ಇವತ್ತಿನ ಇಸ್ಕಾನ್ ದೇವಾಲಯ ತಲೆ ಎತ್ತಿದೆ. ಮುಂದೆ ಅನೇಕ ತಂದೆತಾಯಿಗಳು ತಮ್ಮ ಮಕ್ಕಳನ್ನು ಇಸ್ಕಾನ್ ಬ್ರೇನ್‌ವಾಶ್ ಮಾಡಿ ಕಿಡ್ನಾಪ್ ಮಾಡಿದೆ ಎಂದು ದೂರು ಕೊಟ್ಟಾಗಲೂ ಜನ ಸುಮ್ಮನಿದ್ದರು. ಅದು ದೈವಭಕ್ತಿ, ತದನಂತರ ಶ್ರೀರಂಗಪಟ್ಟಣದ



ಚಂಚಲಪತಿದಾಸ್

ಮಹದೇವಪುರದಲ್ಲಿ 125 ಎಕರೆಯಲ್ಲಿ ಸಂಸ್ಕೃತ ಪಾಠಶಾಲೆ, ಗುರುಕುಲ, ವೃದ್ಧಾಶ್ರಮ (ವಾನಪ್ರಸ್ಥಾಶ್ರಮ) ಸ್ಥಾಪಿಸುತ್ತೇನೆಂದು ರೈತರ ಭೂಮಿ, ಊರಕೆರೆಯನ್ನೆಲ್ಲ ಇಸ್ಕಾನ್ ಕಬಳಿಸಿದಾಗಲೂ ರೈತರು ತೆಪ್ಪಗಿದ್ದರು. ಕನಕಪುರ ರಸ್ತೆಯ ವಸಂತಪುರದಲ್ಲಿದ್ದ ಪುರಾತನ ದೇವಾಲಯವನ್ನು ಇಸ್ಕಾನ್ ಅಭಿವೃದ್ಧಿ ಪಡಿಸುತ್ತದೆ ಎಂದು ಮಧು ಪಂಡಿತದಾಸ ಘೋಷಿಸಿದ. ಜನ ನಂಬಿದರು. ಪಕ್ಕದಲ್ಲೇ ಕೈಗಾರಿಕಾ ಜಮೀನಿನಲ್ಲಿ ಮತ್ತೊಂದು ಕೃಷ್ಣ ದೇವಾಲಯ ನಿರ್ಮಿಸುತ್ತೇನೆಂದು ಇಸ್ಕಾನ್ ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿತು. ದೇವನಹಳ್ಳಿ ಏರ್‌ಪೋರ್ಟ್ ಪಕ್ಕದಲ್ಲೇ ಗೋಶಾಲೆ ಮಾಡುತ್ತೇನೆಂದದ್ದು, ಮೈಸೂರಿನಲ್ಲಿ ಒಂಬತ್ತೆಕರೆ ಭೂಮಿ ಕೊಂಡು ಇನ್ನೊಂದು ಕೃಷ್ಣ ದೇವಾಲಯ ಕಟ್ಟಿಸುತ್ತೇನೆಂದದ್ದು; ಹೀಗೆ ಕೃಷ್ಣನ ಹೆಸರಲ್ಲಿ ಏನೆಲ್ಲಾ ಸಾಧಿಸುತ್ತೇನೆಂದು ಮಧು ಪಂಡಿತದಾಸ ಹೇಳಿಕೊಂಡು ಬಂದನೋ ಎಲ್ಲವನ್ನೂ ಜನ ನಂಬಿದರು. ಫಂಡು ಕೊಟ್ಟರು. ಸರ್ಕಾರ ಭೂಮಿ ಕೊಡುತ್ತಲೇ ಹೋಯಿತು.

ಇವತ್ತೇನಾಗಿದೆ? ಮಧು ಪಂಡಿತದಾಸ ಏನಾಗಿದ್ದಾನೆ! ಇಸ್ಕಾನ್‌ನಲ್ಲಿ ಕೃಷ್ಣ ಭಕ್ತಿಗೆ ಸ್ಥಾನವುಂಟಾ? ಅಲ್ಲಿ ಕೃಷ್ಣ ನೆಲೆಸುವ ಮಾತಿರಲಿ ಅದರ ಗಂಧವಾದರೂ ಉಂಟಾ?

ಇತ್ಯಾದಿ ಪ್ರಶ್ನೆಗಳಿಗೆ ಸಿಗುವ ಉತ್ತರವೇನು ಗೊತ್ತೆ?

ಹಗಲು ದರೋಡೆ ಮತ್ತು ಪಕ್ಕಾ ವಂಚನೆ!



ಮಧುಪಂಡಿತ್ ದಾಸ್ ಜೊತೆ ಸುಧಾಮೂರ್ತಿ

ಇಸ್ಕಾನ್ ಸದ್ಯ ಪಕ್ಕಾ ಬಿಜಿನೆಸ್ ಕಂಪೆನಿಯಾಗಿ ಮಾರ್ಪಟ್ಟಿದೆ ಮಾತ್ರವಲ್ಲ, ಅದು ಮಲೆಯಾಳಿ ವಂಚಕ ಮಧು ಪಂಡಿತದಾಸನ ಖಾಸಗಿ ಸೊತ್ತಾಗಿ ಹೋಗಿದೆ. ಶಾಲಾ ಮಕ್ಕಳಿಗೆ ಸರ್ಕಾರದ ದುಡ್ಡಲ್ಲಿ ಊಟ ಕೊಟ್ಟು ಅದರ ಫೋಟೋಗಳನ್ನು ವಿದೇಶದಲ್ಲಿ ತೋರಿಸಿ 'ತಾನು ಭಾರತದ ಭಿಕ್ಷುಕರನ್ನು ಸಾಕುತ್ತಿದ್ದೇನೆಂದು' ಸರಿಸುಮಾರು ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಫಾರಿನ್ ಫಂಡ್ ದೋಚಿದ್ದಾನೆ ಮಧು ಪಂಡಿತದಾಸ!

ಇಂಥಾ ವಂಚನೆ ಒಂದೆಡೆಯಾದರೆ ಇನ್ನೊಂದೆಡೆ ದೋಚಿದ ಫಾರಿನ್ ಫಂಡಿನಲ್ಲೇ ವಸಂತಪುರದ ನಲವತ್ತೆಂಟೆಕರೆ ಸರ್ಕಾರಿ ಭೂಮಿಯನ್ನು ನುಂಗಿದ್ದಾನೆ. ಕೃಷ್ಣ ದೇವಾಲಯದ ಬದಲು ಅಲ್ಲೀಗ ಫೈವ್‌ಸ್ಟಾರ್ ಹೋಟೆಲ್, ಹೆಲಿಪ್ಯಾಡ್, ಆರುನೂರು ಫ್ಲಾಟುಗಳ ಟೌನ್‌ಶಿಪ್, ಅಮ್ಯೂಸ್‌ಮೆಂಟ್ ಪಾರ್ಕ್, ರೆಸ್ಟೋರೆಂಟ್, ಪಿಜ್ಜಾ ಬರ್ಗರ್ ಕೆಫೆ, ಐಟಿ ಕಂಪೆನಿ ಎಲ್ಲವೂ ತಲೆ ಎತ್ತುತ್ತಿದೆಯೆಂದರೆ ಅದರ ವಿರುದ್ಧ ಬೀದಿಗೆ ಬಿದ್ದ ದಲಿತರು ಪ್ರತಿಭಟಿಸುತ್ತಿದ್ದಾರೆಂದರೆ; ಈ ಬಗ್ಗೆ ಯಾವೊಂದು ಪತ್ರಿಕೆ/ ಟೀವಿಗಳೂ ಸುದ್ದಿ ಮಾಡದಂತೆ ತಡೆಯುವಷ್ಟು ಇಸ್ಕಾನ್ ಶಕ್ತಿಶಾಲಿಯಾಗಿದೆಯೆಂದರೆ ಅದನ್ನು ಇನ್ನೂ ದೇವಸ್ಥಾನ ವೆನ್ನಬೇಕೆ? ಅದೊಂದು ಧಾರ್ಮಿಕ ಸಂಸ್ಥೆಯಾಗಿ ಉಳಿದಿದೆಯೇ? ಎಂಬುದೇ ಅಸಲೀ ಪ್ರಶ್ನೆ.

ಸದ್ಯ 'ಅಕ್ಷಯ ಪಾತ್ರ ಫೌಂಡೇಷನ್' ಎಂಬ ಶಿಕ್ಷಣ ಟ್ರಸ್ಟಿಗೆ ಇಸ್ಕಾನ್ ಮಾಲೀಕ ಮಧುಪಂಡಿತ ದಾಸನೇ ಅಧ್ಯಕ್ಷ. ಮೂಲತಃ ಕೇರಳದ ಈತನ ಹುಟ್ಟು ಹೆಸರು ಮಧುಸೂದನ್ ಶಿವಶಂಕರನ್ ಪಿಳ್ಳೈ. ತಲೆ ಬೋಳಿಸಿಕೊಂಡು ಖಾವಿ ತೊಟ್ಟು ಇಸ್ಕಾನ್ ಪ್ರಚಾರಕ್ಕೆ ನಿಂತವನು ಕ್ರಮೇಣ ಬೆಂಗಳೂರಿಗೆ ಬಂದ. ದೇಶದ ಬೇರೆಬೇರೆ ಇಸ್ಕಾನ್ ಕೇಂದ್ರಗಳಿಂದಲೂ ಒಂದಷ್ಟು ಮಂದಿ ಪ್ರಚಾರಕರನ್ನು ಕರೆಸಿಕೊಂಡು ಮುಖ್ಯಮಂತ್ರಿ

ರಾ. ಸೋಮನಾಥ್

ಹೆಗಡೆಗೆ ಮಂಕುಬೂದಿ ಎರಚಿ ರಾಜಾಜಿನಗರದ ಡೋಭಿಘಾಟ್ ಪಕ್ಕದ ಏಳಕರೆಯ ಬೆಟ್ಟವನ್ನು ಆಕ್ರಮಿಸಿಕೊಂಡ. ಕ್ರಮೇಣ ಅದೇ ಇಸ್ಕಾನ್ ದೇವಾಲಯವಾಯಿತು. ಅಲ್ಲೇ ಗೋಶಾಲೆ, ರೆಸ್ಟೋರೆಂಟ್, ಆರ್ಗ್ಯಾನಿಕ್ ಫಾರ್ಮಿಂಗ್ ತರಕಾರಿ ಮಾರಾಟ ಮಳಿಗೆ ಎಲ್ಲವೂ ಶುರುವಾಯಿತು. ಕ್ರಮೇಣ ಶ್ರೀರಂಗಪಟ್ಟಣದ ಮಹದೇವಪುರದ 125 ಎಕರೆ ಭೂಮಿಗೆ ವಕ್ಕರಿಸಿದ ಮಧುಪಂಡಿತ ರೈತರಿಗೆ ಚೂರುಪಾರು ಕಾಸು ಕೊಟ್ಟು ಕೃಷ್ಣನ ಪ್ರಸಾದ ತಿನ್ನಿಸಿದ. ಮಿಕ್ಕಂತೆ ಕೆರೆ, ಗೋಮಾಳಕ್ಕೂ ಕಾಂಪೌಂಡ್ ಒತ್ತರಿಸಿದ.

ಅಲ್ಲಿಯತನಕ ಇಸ್ಕಾನ್‌ನಲ್ಲಿ ಅಷ್ಟಿಷ್ಟು ದೈವಭಕ್ತಿ ಯಿತ್ತು. ಆದರೆ ವಾನಪ್ರಸ್ಥಾಶ್ರಮ, ಸಂಸ್ಕೃತ ಪಾಠಶಾಲೆ ಗುರುಕುಲಗಳ ಬದಲಿಗೆ ದುಬಾರಿಯ ವೆನಿಲ್ಲಾ ಬೆಳೆದು ಫಾರಿನ್ನಿಗೆ ಎಕ್ಸ್‌ಪೋರ್ಟ್ ಮಾಡಲಾರಂಭಿಸಿದ. ಹಕಿ ಕತ್ತೇನೆಂದರೆ ಮುಂಬಯಿ ಇಸ್ಕಾನ್‌ನ ಅಧೀನ ಸಂಸ್ಥೆ ಯಾಗಿದ್ದ ಬೆಂಗಳೂರು ಇಸ್ಕಾನ್ ಕೇಂದ್ರವನ್ನೇ ಪ್ರತ್ಯೇಕ ಟ್ರಸ್ಟ್ ಮಾಡಿ, ಅದಕ್ಕೆ ತಾನೇ ಅಧ್ಯಕ್ಷನಾಗಿ ಒಂದೇ ಏಟಿಗ ನೂರು ಕೋಟಿಗೂ ಅಧಿಕ ಮೌಲ್ಯದ ಸೊತ್ತನ್ನು ಮಧುಪಂಡಿತದಾಸ ದೋಚಿದ್ದ!

ಇದನ್ನು ಪ್ರತಿಭಟಿಸಿದ ನಿಷ್ಠಾವಂತ ಇಸ್ಕಾನಿಗಳಾದ ವರದಕೃಷ್ಣದಾಸ, ಸತ್ಯ ಗೋಪಿನಾಥ ದಾಸ, ಗೌರಂಗದಾಸ ಆನಂದ ಭಕ್ತಿ ದಾಸ, ಗೋಪಿಕೃಷ್ಣದಾಸ ಮುಂತಾದವರು ಸಿಡಿದೆದ್ದು ನ್ಯಾಯಾಲಯದ ಮೊರೆ ಹೊಕ್ಕಿದ್ದಾರೆ. ತಮ್ಮದೇ ಪ್ರತ್ಯೇಕ Iscon Bangalore Devotee Association ಕಟ್ಟಿಕೊಂಡು ಮಧುಪಂಡಿತನ ವಿರುದ್ಧ ಹೋರಾಟಕ್ಕಿಳಿದಿದ್ದಾರೆ.

ಇದೆಲ್ಲ ಧೂರ್ತ ಮಧು ಪಂಡಿತನ ಒಂದು ಮುಖವಾದರೆ, ಇಸ್ಕಾನ್ ಬೆಂಗಳೂರು ಕೇಂದ್ರಕ್ಕೆ ಆತ ನೇಮಿಸಿಕೊಂಡ ಟ್ರಸ್ಟಿಗಳಾದರೂ ಯಾರು? ಉಪಾಧ್ಯಕ್ಷ ಚಂಚಲಪತಿದಾಸ ಈತನ ಪಡ್ಡಕ. ಮಧುಪಂಡಿತನ ಪತ್ನಿ ಭಕ್ತಿಲತಾ ದೇವಿದಾಸಿ ಮತ್ತು ಚಂಚಲ ಪತಿ ಭಕ್ತಿಲತಾ ದೇವಿದಾಸಿ ಮತ್ತು ಚಂಚಲ ಪತ್ನಿ ದಾಸನ ಹೆಂಡತಿ ಚಂಬೇಲಿ ದೇವಿ ಇಬ್ಬರೂ ಒಡಹುಟ್ಟಿದ ಅಕ್ಕತಂಗಿಯರು ಮತ್ತು ಮೂಲತಃ ಮಲೆಯಾಳಿಗಳು ಮಿಕ್ಕಂತೆ ಸೆಕ್ರೆಟರಿ ಜೈ ಚೈತನ್ಯದಾಸ ಮಧು ಪಂಡಿತನ ದತ್ತುಪುತ್ರನಾದರೆ, ಮತ್ತೊಬ್ಬ ಟ್ರಸ್ಟಿ ಚತ್ರಾಂಗ ಚೈತನ್ಯ

ಎಲ್ಲೆಲ್ಲಿ ಆಸ್ತಿ? ಎಷ್ಟೆಷ್ಟು ಲೂಟಿ?

ಒಂದು ಮೂಲದ ಪ್ರಕಾರ ಕರ್ನಾಟಕದ ನಿರ್ಗತಿಕ ಮಕ್ಕಳಿಗೆ ಊಟ ಹಾಕಿಸುತ್ತೇನೆಂದು ಅಕ್ಷಯ ಪಾತ್ರ ಫೌಂಡೇಷನ್ನಿನ ಹೆಸರಲ್ಲಿ ಮಧು ಪಂಡಿತ ದುಡ್ಡು ದೋಚಲು ಪ್ರೇರಣೆಯಾದವನು ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿ. ಹೀಗೆ ನಾಮಕಾವಸ್ಥೆಗೆ ಶಾಲಾ ಮಕ್ಕಳಿಗೆ ಊಟ ಹಾಕಿ ಅದಕ್ಕೆ ಸರ್ಕಾರಿ ಬೊಕ್ಕಸದಿಂದ ದುಡ್ಡು ಪಡೆದೂ ಅದರ ಫೋಟೋಗಳನ್ನು ವಿದೇಶದಲ್ಲಿ ತೋರಿಸಿ ಡಾಲರ್ ದೋಚುವುದನ್ನು ಕಲಿಸಿಕೊಟ್ಟದ್ದೇ ಡಾಲರ್ ಬೆಗ್ಗರ್ ರವಿಶಂಕರ್.

ಇವರ ದೃಷ್ಟಿಯಲ್ಲಿ ಸೇವೆಯೂ ಲಾಭದಾಯಕ ದಂಧೆ. ಸದ್ಯ ಮಧುಪಂಡಿತ ತನ್ನ ಧಕಾಯಿತಿಗೆ ಅನುವಾಗಲೆಂದೇ ಇಂಥ ಮೂರ್‍ನಾಲ್ಕು ಟ್ರಸ್ಟುಗಳನ್ನು ಮಾಡಿಕೊಂಡಿದ್ದಾನೆ. ಇಂಡಿಯಾ ಹೆರಿಟೇಜ್ ಟ್ರಸ್ಟ್, ಇಸ್ಕಾನ್ ಚಾರಿಟೀಸ್, ಅಕ್ಷಯ ಪಾತ್ರ ಫೌಂಡೇಷನ್ ಮತ್ತು ಇಸ್ಕಾನ್ ಕರ್ನಾಟಕ ಟ್ರಸ್ಟ್ ಎಲ್ಲವೂ ಮಧುಪಂಡಿತನ ಫ್ಯಾಮಿಲಿ ಟ್ರಸ್ಟುಗಳೆ.

ಇವತ್ತು ರಾಜಾಜಿನಗರದ ಸೋಪ್ ಫ್ಯಾಕ್ಟರಿ ಎದುರಿನ ಇಸ್ಕಾನ್ ದೇವಾಲಯದ ಆಸ್ತಿಯು ಒಟ್ಟು ಮೊತ್ತವೇ 120 ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಸಾಲದ್ದಕ್ಕೆ ಉತ್ತರಹಳ್ಳಿ ಸಮೀಪದ ವಸಂತಪುರದ ಸರ್ವೆ ನಂಬರ್ 50 ರಲ್ಲಿನ 48 ಎಕರೆ ಜಮೀನನ್ನು ಕಬಳಿಸಿ ಅಲ್ಲಿ ದೇವಸ್ಥಾನ ಕಟ್ಟಿಸುತ್ತೇನೆಂದ ಮಧುಪಂಡಿತ ಅಮ್ಯೂಸ್‌ಮೆಂಟ್ ಪಾರ್ಕ್, 600 ಫ್ಲಾಟುಗಳು, ಬೃಹತ್ ಅಪಾರ್ಟ್‌ಮೆಂಟ್, ಫ್ಲೈಓವರ್, ಪಂಚತಾರಾ ಹೋಟೆಲ್, ಪಿಜ್ಜಾಬರ್ಗರ್ ಕೆಫೆ ಇತ್ಯಾದಿ ನಿರ್ಮಿಸುತ್ತಿದ್ದಾನೆ. ದೇವಸ್ಥಾನಕ್ಕೆಂದು ಮಂಜೂರಾದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿದರೂ ಸರ್ಕಾರ ಏಕೆ ತೆಪ್ಪಗಿದೆ. ಮಧುಪಂಡಿತನ ಲ್ಯಾಂಡ್ ಗ್ರ್ಯಾಬಿಂಗ್ ಯಾವ ಮಟ್ಟಕ್ಕಿದೆಯೆಂದರೆ ವಸಂತಪುರದ ಬಡ ದಲಿತರ ಸ್ಮಶಾನವನ್ನೂ ಬಿಡದೇ ನುಂಗಿದ್ದಾನೆ. ಈ ಬಗ್ಗೆ ಸಮತಾ ಸೈನಿಕ ದಳದ ನಾಯಕ ವೆಂಕಟಸ್ವಾಮಿ ಪ್ರತಿನಿತ್ಯ ಬೀದಿಗಿಳಿಯುತ್ತಿದ್ದಾರೆ. ಪ್ರತಿಭಟಿಸುತ್ತಲೇ ಇದ್ದಾರೆ.



ಭೂ ಕಳ್ಳತನದ ವಿರುದ್ಧ ಸಮತಾ ಸೈನಿಕ ದಳದಿಂದ ಪ್ರತಿಭಟನೆ

ತಿರುಪತಿಯಲ್ಲಿ 25 ಕೋಟಿ ರೂಪಾಯಿ ಬೆಲೆ ಬಾಳುವ ಭೂಮಿ, ಚೆನ್ನೈನಲ್ಲಿ ಬೀಚ್ ರೆಸಾರ್ಟ್, ಶ್ರೀರಂಗಪಟ್ಟಣ ಸಮೀಪದ ವೆನಿಲ್ಲಾ ಫಾರ್ಮಿಂಗ್, ದೇವನಹಳ್ಳಿ ವಿಮಾನ ನಿಲ್ದಾಣದ ಪಕ್ಕದಲ್ಲೇ 100 ಎಕರೆಯ ಟೌನ್‌ಶಿಪ್ ಇದು ಮಧುಪಂಡಿತ ಶ್ರೀಕೃಷ್ಣನ ಹೆಸರಲ್ಲಿ ಈತನಕ ಸಂಪಾದಿಸಿದ ಆಸ್ತಿಯ ವಿವರಗಳಷ್ಟೇ. ಏನೂ ಇಲ್ಲದ ಬರಿಗೈಯ ದಾಸನೊಬ್ಬ ಐದಾರು ವರ್ಷದಲ್ಲಿ ಈ ಪಾಟ ಆಸ್ತಿ ಮಾಡಲು ಹೇಗೆ ಸಾಧ್ಯ?

ತನಿಖೆ ಮಾಡುವವರ್‍ಯಾರು? ಬಡಮಕ್ಕಳ ಫೋಟೋ ತೋರಿಸಿ ಇನ್ನೆಷ್ಟು ದೋಚಬಹುದು? ಕೇಳುವವರ್‍ಯಾರು? ■

ಬಾಬು ಜಗಜೀವನರಾಂ ಜನ್ಮ ಮುನ್ನಾ ದಿನ ಪೌರ ಕಾರ್ಮಿಕರ ಬಲಿ

ಹುಬ್ಬಳ್ಳಿ-ಧಾರವಾಡ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ "ಸ್ವಚ್ಛತಾ ಗುತ್ತಿಗೆ"ಯ ಒಳವ್ಯವಹಾರವೇ ಬಾಬು ಜಗಜೀವನರಾಂ ಜನ್ಮ ದಿನಾಚರಣೆಯ ಮುನ್ನಾದಿನ ಹುಬ್ಬಳ್ಳಿಯಲ್ಲಿ ಇಬ್ಬರು ಪೌರ ಕಾರ್ಮಿಕರನ್ನು ಬಲಿ ತೆಗೆದುಕೊಂಡಿತು.

ಹುಬ್ಬಳ್ಳಿಯ ಹೆಗ್ಗೇರಿ ಕಾಲೋನಿಗೆ ಹೊಂದಿಕೊಂಡಿರುವ ಒಳಚರಂಡಿ ಮ್ಯಾನ್‌ಹೋಲ್‌ನಲ್ಲಿ ಏಪ್ರಿಲ್ 6 ರಂದು ಮಧ್ಯಾಹ್ನ 12 ಕ್ಕೆ 30 ಅಡಿ ಒಳಗೆ ಸ್ವಚ್ಛಗೊಳಿಸಿ ಇಳಿದ ಇಂದಿರಾನಗರದ 34 ವರ್ಷದ ಶಿವಪುತ್ರಪ್ಪ ಓಬಳಪ್ಪಾ 23 ವರ್ಷದ ಶಂಕರಕುಮಾರ ಬಿಲಾನ್ ಎಂಬ ಖಾಯಂಗೊಂಡ ಪೌರ ಕಾರ್ಮಿಕರು ಮೇಲೆ ಬರಲೇ ಇಲ್ಲ.

ಶಿವಪುತ್ರಪ್ಪ ಎರಡು ಹೆಣ್ಣು ಒಂದು ಗಂಡು ಮಗುವಿನ ತಂದೆ. ಈತನ ತಂದೆ ಓಬಳಪ್ಪಾ ಬಳ್ಳಾರಿ ಕೂಡಾ ಮಹಾನಗರ ಪಾಲಿಕೆಯಲ್ಲಿ ಪೌರ ಕಾರ್ಮಿಕನಾಗಿದ್ದು ಕೆಲಸದಲ್ಲಿದ್ದಾಗಲೇ ಮೃತಗೊಂಡ ನಂತರ ಅನುಕಂಪದ ಆಧಾರದ ಮೇಲೆ ಶಿವಪುತ್ರಪ್ಪ ಪೌರ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ್ದ. ಸುಮಾರು 13 ವರ್ಷಗಳ ಸೇವೆ ಕೂಡಾ ಸಲ್ಲಿಸಿದ್ದಾನೆ. ಈಗ ಕುಟುಂಬ ನಿರ್ವಹಣೆಗಾಗಿ ಅವನ ಪತ್ನಿ ಅಥವಾ ಭವಿಷ್ಯತ್ತಿನಲ್ಲಿ ಮಕ್ಕಳಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಸಾಧ್ಯವಿಲ್ಲ. ಶಂಕರಕುಮಾರ ಬಿಲಾನ್ ಎರಡು ಹೆಣ್ಣು ಮಕ್ಕಳ ತಂದೆ. ಕೆಲಸಕ್ಕೆ ಸೇರಿ ಸುಮಾರು ಆರು ವರ್ಷವಾಗಿದೆ. ಕುಡಿತದ ಗುಲಾಮ ಬೇರೆ. ಕೆಲಸಕ್ಕೆ ಬಹಳ ದಿನಗಳಿಂದ ಗೈರುಹಾಜರಾಗಿ ಮತ್ತೆ ಕೆಲಸಕ್ಕೆ ಬಂದು ಕೇವಲ ಮೂರು ದಿನ ಆಗಿತ್ತು.

ಶಂಕರ ಹಾಗೂ ಶಿವಪುತ್ರಪ್ಪ ಹುಬ್ಬಳ್ಳಿಯ 44 ನೇ ವಾರ್ಡಿನ ಪೌರ ಕಾರ್ಮಿಕರು. ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಲ್ಲಿ ಇಬ್ಬರೂ ತುಂಬಾ ಎಕ್ಸ್‌ಪರ್ಟ್. ಇದೇ ಇವರ ಜೀವ ಬಲಿ ತೆಗೆದುಕೊಂಡಿತು.

ಶುಕ್ರವಾರವಾದ್ದರಿಂದ ಇಬ್ಬರಿಗೂ ಅರ್ಧ ದಿನ ರಜೆಯಿತ್ತು. ಬೆಳಿಗ್ಗೆ 6.30 ರಿಂದ 12ರ ತನಕ ತಮ್ಮ 44 ನೇ ವಾರ್ಡಿನಲ್ಲಿ ಕೆಲಸ ಮಾಡಿದ್ದಾರೆ. ಇಲ್ಲಿ ಆರೋಗ್ಯ ನಿರೀಕ್ಷಕ ಆರ್.ಎಸ್. ದೊಡ್ಡಮನಿ. ಇವನ ಖಾಸಾ ತಮ್ಮನೇ 39 ನೇ ವಾರ್ಡಿನ ಖಾಸಗಿ ಸ್ವಚ್ಛತಾ ಕೆಲಸ ಗುತ್ತಿಗೆ ಪಡೆದಿದ್ದಾನೆ. 39 ನೇ ವಾರ್ಡಿನ ವ್ಯಾಪ್ತಿಯ ಹೆಗ್ಗೇರಿ ಸಮೀಪದ ಜಗದೀಶ ನಗರದಲ್ಲಿದ್ದ 30 ಅಡಿ ಆಳದ ಮ್ಯಾನ್‌ಹೋಲ್ (ಒಳ ಚರಂಡಿ)ನಲ್ಲಿ ಹೂಳು ತುಂಬಿ ಕೊಳಚೆ ನೀರು ಮುಂದಕ್ಕೆ ಹೋಗದೆ ಮೇಲಕ್ಕೆ ಉಕ್ಕುತಿತ್ತು. ಇದನ್ನು ಸ್ವಚ್ಛಗೊಳಿಸಲು ತನ್ನ ಅಣ್ಣ ದೊಡಮನಿಗೇ ಹೇಳಿದ್ದಾನೆ. ಅವನು ಮ್ಯಾನ್‌ಹೋಲ್ ಎಕ್ಸ್‌ಪರ್ಟ್ ಶಿವಪುತ್ರಪ್ಪ ಹಾಗೂ ಶಂಕರರನ್ನು ಕರೆದು ಆ ಕೆಲಸ ಮಾಡುವಂತೆ ತಿಳಿಸಿದ್ದಾನೆ. "ನಮ್ಮ ಕೆಲಸ ಮುಗಿದಿದೆ. ಈಗ ರಜೆ. ನಾವು ಮಾಡುವುದಿಲ್ಲ, ಅದು ತಮ್ಮ ವಾರ್ಡ್" ಅಂತಾ ಹೇಳಿದ್ದಾರೆ.


ಇವರ ದೌರ್ಬಲ್ಯದ ಅರಿವಿದ್ದ ದೊಡ್ಡಮನಿ "ನೀವೇನೂ ಪುಕ್ಕಟೆ ಮಾಡುವುದು ಬೇಡ. 1000 ರೂ. ಕೊಡುತ್ತೇನೆ" ಅಂದಾಗ ಒಪ್ಪಿಕೊಂಡಿದ್ದಾರೆ. ಮೊದಲು ಅಡ್ವಾನ್ಸ್ ಆಗಿ 200 ರೂ. ಕೊಟ್ಟಿದ್ದಾನೆ. "ಕೆಲಸ ಪೂರ್ತಿಯಾದ ನಂತರ 800 ರೂ. ಕೊಡುತ್ತೇನೆ. ಬೇಗ ಹೋಗಿ ಕೆಲಸ ಪ್ರಾರಂಭಿಸಿ" ಅಂದಿದ್ದಾನೆ. ಇಬ್ಬರೂ ಒಪ್ಪಿಕೊಂಡು 200 ರೂಪಾಯಿ ಇಸಿದುಕೊಂಡು ಹೋಗಿ ಸಾರಾಯಿ ಕುಡಿದಿದ್ದಾರೆ. ಪೌರ ಕಾರ್ಮಿಕರಲ್ಲಿ ಮಹಿಳೆಯರನ್ನು ಒಳಗೊಂಡು ಹೆಚ್ಚಿನವರು ಕುಡಿಯುವುದು ಅಭ್ಯಾಸ ಮಾಡಿಕೊಂಡಿದ್ದಾರೆ. ಅವರ ಉದ್ಯೋಗವೇ ಅಂತಹದು.

ಮದ್ಯದ ಅಮಲಿನಲ್ಲಿಯೇ 30 ಅಡಿ ಆಳದ ಮ್ಯಾನ್‌ಹೋಲ್‌ನಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ಮೊದಲು ಶಂಕರಕುಮಾರ ಬಿಲಾನ್ ಇಳಿದಿದ್ದಾನೆ. ಬಹಳ ಸಮಯದವರೆಗೆ ಆತ ಮೇಲೆ ಬರದೇ ಇರುವುದನ್ನು ಕಂಡು ಶಿವಪುತ್ರಪ್ಪ ಕೂಡಾ ಇಳಿದಿದ್ದಾನೆ. ಇಬ್ಬರೂ ಕೂಡಾ ಕೊಳಚೆಯಿಂದ ಬ್ಲಾಕ್ ಆಗಿದ್ದ ಪೈಪ್‌ಲೈನ್‌ಗಳಿಗೆ ಕಬ್ಬಿಣದ ರಾಡ್‌ನಿಂದ ಚುಚ್ಚಿ ಚುಚ್ಚಿ ಹರಿಯುವಂತೆ ಮಾಡಿದಾಕ್ಷಣವೇ ತಡೆಹಿಡಿದಿದ್ದ ಕೊಳಚೆ ನೀರು ರಭಸದಿಂದ ಒಮ್ಮೆಲೆ ಇಬ್ಬರ ಮೇಲೆ ನುಗ್ಗಿ ಬಂದಿದೆ. ಇದರಿಂದಾಗಿ ಇಬ್ಬರೂ ಕೊಚ್ಚೆ ನೀರಲ್ಲಿ ಮೇಲೆ ಬರಲಾರದೇ ಉಸಿರುಗಟ್ಟಿ ಸಾವನಪ್ಪಿದ್ದಾರೆ.

ಮಧ್ಯಾಹ್ನ ಬೇರೆ. ಜನಸಂಚಾರ ಕಡಿಮೆ. ಇವರ ಸಾವಿನ ಸುದ್ದಿ ಹಬ್ಬಿ ನೂರಾರು ಜನ ಸೇರಿದ್ದಾರೆ. ಈ ಸುದ್ದಿ ಕೆಲಸಕ್ಕೆ ಕಳಿಸಿದ ಆರೋಗ್ಯ ನಿರೀಕ್ಷಕ (ಸ್ಯಾನಿಟರಿ ಇನ್ಸ್‌ಪೆಕ್ಟರ್) ದೊಡ್ಡಮನಿಗೆ ಮತ್ತು ವಲಯ ಸಹಾಯಕ ವಿ.ಎಸ್. ಪವಾರಗೇ ಕೂಡಾ ತಿಳಿದಿದೆ. ಇಬ್ಬರೂ ಸ್ಥಳಕ್ಕೆ ಬಂದಿದ್ದಾರೆ. ಆಗಲೇ ಮೃತಪಟ್ಟ ಪೌರ ಕಾರ್ಮಿಕರ ಕುಟುಂಬ ವರ್ಗಕ್ಕೆ ಸುದ್ದಿ ಮುಟ್ಟಿ ಅವರೂ ಬಂದು ಸೇರಿದ್ದಾರೆ. ಅವರೆಲ್ಲಾ ಆಕ್ರೋಶಗೊಂಡು ಹಿಡಿಶಾಪ ಹಾಕಲು ಪ್ರಾರಂಭಿಸಿದ್ದಾರೆ. ತಮಗೆ ಧರ್ಮದೇಟು ಗ್ಯಾರಂಟಿ ಎಂದು ಮನಗಂಡು ದೊಡ್ಡಮನಿ ಮತ್ತು ಪವಾರ ಜಾಗ ಖಾಲಿ ಮಾಡಿದ್ದಾರೆ.

ನಂತರ ಪೊಲೀಸರು ಆಗಮಿಸಿದ್ದಾರೆ. ಅಗ್ನಿಶಾಮಕ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿಕೊಂಡು ನೀರಿನಲ್ಲಿ ಹುಕ್ಕು ಬಿಟ್ಟು ಶವಗಳನ್ನು ಹೊರತೆಗೆದರು. ಈ ಸಾವು ಪೌರಕಾರ್ಮಿಕರಲ್ಲಿ ತೀವ್ರವಾದ ಆಘಾತ ತಂದಿದೆ.

ಮೊದಮೊದಲು ಗುತ್ತಿಗೆ ಕೆಲಸಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದ ಪೌರಕಾರ್ಮಿಕ ಸಂಘಟನೆಗಳೇ ಮುಂದೆ ಸುಮ್ಮನಾಗಿದ್ದು ಇಂದು



ಗುಟ್ಟೇನಾಗಿ ಉಳಿದಿಲ್ಲ. ಪಾಲಿಕೆಯ ಮಾಜಿ ಸದಸ್ಯರು, ಅವರ ಸಂಬಂಧಿಕರು, ದಲಿತ ಮುಖಂಡರು, ಪಾಲಿಕೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳೇ ಬೇನಾಮಿ ಹೆಸರಿನಲ್ಲಿ ಪಾಲಿಕೆಯ ಸ್ವಚ್ಛತೆಯ ಗುತ್ತಿಗೆ ಪಡೆದು ಸುಮ್ಮನಾಗಿದ್ದಾರೆ. ಹುಬ್ಬಳ್ಳಿಯೊಂದರಲ್ಲೇ ಸುಮಾರು 3000 ಗುತ್ತಿಗೆ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಗುತ್ತಿಗೆದಾರರು ಪ್ರತಿ ತಿಂಗಳು ಪಾಲಿಕೆಯಿಂದ ಪಡೆಯುವುದು 2500 ದಿಂದ 3000 ರೂಪಾಯಿಗಳಾದರೆ ಪೌರ ಕಾರ್ಮಿಕರಿಗೆ ನೀಡುತ್ತಿರುವುದು ಕೇವಲ 1500 ರೂಪಾಯಿಗಳು. ಒಬ್ಬೊಬ್ಬ ಗುತ್ತಿಗೆದಾರ 100 ರಿಂದ 200 ಜನ ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾನೆ. ಯಾವುದೇ ಶ್ರಮವಿಲ್ಲದೇ ಪ್ರತಿ ತಿಂಗಳು 10,000 ರಿಂದ 15,000 ರೂಪಾಯಿ ತನ್ನ ಜೇಬಿಗೆ ಇಳಿಸುತ್ತಿದ್ದಾನೆ.

ಪೌರ ಕಾರ್ಮಿಕರಿಗೆ ಬೂಟು, ಸುರಕ್ಷಾ ಕವಚಗಳನ್ನು ಸರಿಯಾಗಿ ಪೂರೈಸುತ್ತಿಲ್ಲ ಅನ್ನುವ ಆರೋಪ ಕೂಡಾ ಇದೆ. ಚರಂಡಿ ಸ್ವಚ್ಛಗೊಳಿಸಲು ಪಾಲಿಕೆಯಲ್ಲಿ ಯಂತ್ರಗಳಿವೆ. ಆದರೂ ಸಹ ಅವುಗಳನ್ನು ಬಳಸಲು ಅವಕಾಶ ಕೊಡುತ್ತಿಲ್ಲ, ಪಾಲಿಕೆ ಅಧಿಕಾರಿಗಳು ಪೌರ ಕಾರ್ಮಿಕರಿಗೆ ಸರಿಯಾಗಿ ರಕ್ಷಣೆ ನೀಡುತ್ತಿಲ್ಲ ಅನ್ನುವುದು ಪೌರ ಕಾರ್ಮಿಕರ ಅಳಲು ಅದು ಸತ್ಯ ಕೂಡಾ ಆಗಿದೆ.

ಆಯುಕ್ತ ಪಿ. ಮಣಿವಣ್ಣನ್ ನಗರ ಸೌಂದರೀಕರಣದ ಕಡೆಗೆ ಗಮನ ಹರಿಸಿದರೆ ಸಾಲದು. ಅವರೀಗ ಪಾಲಿಕೆಯ ಆಸ್ತಿಗಳನ್ನು ಅಡವಿಟ್ಟು ರಸ್ತೆ ಫುಟ್‌ಪಾತ್ ನಿರ್ಮಿಸಿ ಪಾಲಿಕೆಯನ್ನು ಸಾಲದಲ್ಲಿ ಮುಳುಗಿಸುವಲ್ಲಿ ನಿರತರಾಗಿದ್ದಾರೆ. ಆದರೆ ಅದೇ ಪೌರ ಕಾರ್ಮಿಕರನ್ನು ಬಲಿ ತೆಗೆದುಕೊಳ್ಳುವ ಖಾಸಗಿ ಗುತ್ತಿಗೆದಾರರನ್ನು ನಿಯಂತ್ರಿಸಲು ಏಕೆ ಆಗುತ್ತಿಲ್ಲ. ಸತ್ತ ಕಾರ್ಮಿಕರಿಗೆ ತಲಾ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ ನೀಡಿದ್ದೇನೋ ಸರಿ. ಆದರೆ ಅವರ ಸಾವಿಗೆ ಕಾರಣರಾದ ದೊಡ್ಡಮನಿಗೆ ಹಾಗೂ ಆತನ ಸಹೋದರನನ್ನು ಜೈಲಿಗೆ ತಳ್ಳುತ್ತಿಲ್ಲ ಏಕೆ? ಸತ್ತವರು ದಲಿತರು ಅನ್ನುವ ಕಾರಣಕ್ಕೆ ಏನು?

ದೈನಂದಿನ ಕೆಲಸಗಳನ್ನು ಗುತ್ತಿಗೆ ನೀಡಬಾರದು ಬದಲಿಗೆ ನೌಕರರನ್ನು ನೇಮಿಸಿಕೊಳ್ಳಬೇಕು ಎಂದು ಹೇಳಿರುವ ಸುಪ್ರೀಮ್‌ಕೋರ್ಟಿನ ಆದೇಶ ಇಂದು ರಾಜ್ಯದಲ್ಲಿರುವ ಯಾವುದೇ ಪೌರ ಸಂಸ್ಥೆಗಳಲ್ಲಿ ಜಾರಿಗೊಂಡಿಲ್ಲ. ಅದು ಅಲ್ಲಿಯ ಅಧಿಕಾರಿಗಳ ತಾತ್ಸಾರ ಮನೋಭಾವ ತೋರಿಸುತ್ತದೆ. "ಡಿ" ವರ್ಗದ ನೌಕರ ಸತ್ತರೆ ಕನಿಷ್ಠ 60 ರಿಂದ 70 ಸಾವಿರ ರೂಪಾಯಿ ಪರಿಹಾರ ಆದರೆ ಪೌರ ಕಾರ್ಮಿಕ ಸತ್ತರೆ ಕೇವಲ 10 ಸಾವಿರ ರೂಪಾಯಿ ಪರಿಹಾರ. ನೀಡುವುದು ಸರ್ಕಾರದ ನೀತಿ. ಪೌರ ಕಾರ್ಮಿಕರು ಅತ್ಯಂತ ಅಪಾಯಕಾರಿ ಕೆಲಸ ಮಾಡುತ್ತಾರೆ. ಕೆಲಸಕ್ಕೆ ಸೇರಿದ 5-6 ವರ್ಷಗಳಲ್ಲಿ ಅನೇಕ ಅಂಟುರೋಗಗಳಿಗೆ ಬಲಿಯಾಗುತ್ತಾರೆ, ಎಷ್ಟಾದರೂ ದಲಿತರಲ್ಲವೇ ಇವರು.

ಈಗಾಗಲೇ ಈ ದುರಂತದ ಕುರಿತಂತೆ ನಿವೃತ್ತ ನ್ಯಾಯಾಧೀಶರಾದ ಡಿ.ವಿ. ಶೇಟ್ ಏಕವ್ಯಕ್ತಿ ಸಮಿತಿ 27.4.2007 ರಿಂದ ವಿಚಾರಣೆ ಪ್ರಾರಂಭ ಮಾಡಿದೆ. ಮೇ ದಿನಾಚರಣೆ ಆಚರಿಸುತ್ತಿರುವ ಈ ಸಂದರ್ಭದಲ್ಲಿ ದಲಿತ ಪೌರ ಕಾರ್ಮಿಕರಿಗೆ ನ್ಯಾಯ ಸಿಗುವುದೇ?

-ವರದಿಗಾರ

ದಾಸ ಮಧು ಪಂಡಿತನ ಕುಟುಂಬದ ಭಾಗೀದಾರ. ಖಜಾಂಚಿ ಸ್ಟೋಕ ಕೃಷ್ಣದಾಸ, ಭಕ್ತಿಲತಾ ದಾಸಿ, ಚಂಬೇಲಿ ದೇವಿ ಎಲ್ಲರೂ ಇಸ್ಕಾನ್ ಟ್ರಸ್ಟಿಗಳೆ.

ಒಂದೇ ಮಾತಲ್ಲಿ ಹೇಳುವುದಾದರೆ ಬೆಂಗಳೂರು ಇಸ್ಕಾನ್ ಮಧುಪಂಡಿತನ ಖಾಸಗಿ ಆಸ್ತಿಯೇ ಹೊರತು ಮತ್ತೇನಲ್ಲ.

ಇಂಥ ಐನಾತಿ ಮಧುಪಂಡಿತನ ಕೈಗೆ ಅಕ್ಷರ ದಾಸೋಹದಂಥ ಸರ್ಕಾರಿ ಯೋಜನೆಯೊಂದು ಸಿಕ್ಕಿಬಿಟ್ಟರೆ ಗತಿ ಏನು?

ಗ್ರಾಮೀಣ ಕಡುಬಡವರ ಮಕ್ಕಳಿಗೆ ಪ್ರತಿನಿತ್ಯ ಶಾಲೆಗಳಲ್ಲೇ ಊಟ ಕೊಡುವ ಅಕ್ಷರ ದಾಸೋಹಕ್ಕೂ ಮಧುಪಂಡಿತನ ಕುಟಿಲತೆಗೂ ಮೇಲುನೋಟಕ್ಕೆ ಸಂಬಂಧವಿಲ್ಲ ನಿಜ. ಆದರೆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಇಸ್ಕಾನ್‌ನಿಂದಲೇ ಬಡಿಸುತ್ತಿದ್ದೇವೆ ಎಂದು ಎಲ್ಲೆಂದರಲ್ಲಿ ಘಂಡೆತ್ತಬಹುದಲ್ಲ!

ಇದು ಮಧುಪಂಡಿತನ ಹುನ್ನಾರ. ಅದಕ್ಕೆಂದೇ ತನ್ನ ಪತ್ನಿ, ಆಕೆಯ ತಂಗಿ, ಆವಳ ಗಂಡ ಚಂಚಲಪತ್ನಿ ದಾಸ, ದತ್ತುಪುತ್ರ ಚೈಚೈತನ್ಯದಾಸ ಮತ್ತು ಸಂಬಂಧಿ ಚಿತ್ರಾಂಗ ಚೈತನ್ಯ ದಾಸರುಳ್ಳ 'ಅಕ್ಷಯ ಪಾತ್ರ ಫೌಂಡೇಷನ್' ಎಂಬ ಮತ್ತೊಂದು ಟ್ರಸ್ಟ್ ಹುಟ್ಟುಹಾಕಿದ. ...ದಾಗಿದ್ದು 2001 ರ ಅಕ್ಟೋಬರ್ 16 ರಂದು.


ಬೆಂಗಳೂರು ನಗರದ 1.45 ಲಕ್ಷ, ಹುಬ್ಬಳ್ಳಿ-ಧಾರವಾಡದ 1.56 ಲಕ್ಷ, ಬಳ್ಳಾರಿಯ 36,000, ಮೈಸೂರಿನ 9000, ಮಂಗಳೂರಿನ 6000, ಬಿಜಾಪುರ, ಗುಲ್ಬರ್ಗಾ, ರಾಯಚೂರುಗಳ ಮೂರು ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಗುತ್ತಿಗೆ ಮಧುಪಂಡಿತ ಪಡೆದಿದ್ದಾನೆ. ವಾಸ್ತವವಾಗಿ ಮಧುಪಂಡಿತ ...ದರ ಲೇಬರ್ ಕಂಟ್ರಾಕ್ಟರ್ ಎಂಬುದನ್ನು ಬಿಟ್ಟರೆ ...ಯನ್ನೂ ಕೈಯಿಂದ ಖರ್ಚು ಮಾಡುವುದಿಲ್ಲ. ಅದಕ್ಕೆಂದು ಪ್ರತಿ ಊಟಕ್ಕೆ ಸರ್ಕಾರ ಕೊಡುವ ಬಾಬ್ತು 3.20 ರೂಪಾಯಿ.

ಈ 3.20 ರೂಪಾಯಿಯಲ್ಲೇ ಅನಂತ್ ಕುಮಾರ್ ಪತ್ನಿಯ ಅದಮ್ಯ ಚೇತನ ಟ್ರಸ್ಟು ಪ್ರತಿನಿತ್ಯ ಊಟ ಕೊಡುತ್ತಲೇ ಇದೆ. ಮಗುವೊಂದರ ಊಟಕ್ಕೆ ಇದಕ್ಕಿಂತ ಹೆಚ್ಚು ಬೇಕೇ ಇಲ್ಲ. ಆದರೆ ಮಧುಪಂಡಿತ ಸರ್ಕಾರ ಊಟವೊಂದಕ್ಕೆ 3.20 ರೂ. ಕೊಡುತ್ತಿದೆ ಎಂಬುದನ್ನು ಎಲ್ಲೂ ಹೇಳುವುದಿಲ್ಲ. ವ್ಯವಸ್ಥಿತವಾಗಿ ಅದನ್ನು ಮುಚ್ಚಿಟ್ಟು ತಾನು ಮಗುವೊಂದಕ್ಕೆ ಪ್ರತಿ ಊಟಕ್ಕೆ ಆರು ರೂಪಾಯಿ ಖರ್ಚು ಮಾಡುತ್ತಿದ್ದೇನೆಂದೂ, ಪ್ರತಿನಿತ್ಯ ಕರ್ನಾಟಕದ ಆರು ಲಕ್ಷ ನಿರ್ಗತಿಕ ಮಕ್ಕಳಿಗೆ ಊಟ ಹಾಕುತ್ತಿದ್ದೇನೆಂದೂ ಎಲ್ಲೆಂದರಲ್ಲಿ ಹೇಳಿಕೊಳ್ಳುತ್ತಾನೆ. ಅದಕ್ಕೆಂದೇ ಥರಾವರಿಯ ವೆಬ್‌ಸೈಟುಗಳನ್ನು ತೆರೆದಿದ್ದಾನೆ.



ಅಕ್ಷಯ ಪಾತ್ರೆಯನ್ನು ಉದ್ಘಾಟಿಸುತ್ತಿರುವ ಮುರಳಿ ಮನೋಹರ್ ಜೋಶಿ, ಹೆಗಡೆ ಜೊತೆ ಪಂಡಿತ್ ದಾಸ್


ಇನ್ನೂ ನಿಗೂಢವೆಂದರೆ ಈ ಅಕ್ಷಯ ಪಾತ್ರ ಫೌಂಡೇಷನ್ ರಿಜಿಸ್ಟರ್ ಆಗಿರುವುದೇ ಅಮೆರಿಕದಲ್ಲಿ, ಬೀದಿಬದಿಯಲ್ಲಿ ಚಿಂದಿ ಆಯುವ, ಊಟಕ್ಕೆ ಗತಿಯಿಲ್ಲದೇ ಅಳುತ್ತಿರುವ ಅನಾಥ ಮಕ್ಕಳ ಫೋಟೋಗಳನ್ನು ಅಮೆರಿಕಾ, ಯೂರೋಪ್‌ನಲ್ಲೆಲ್ಲಾ ತೋರಿಸುತ್ತಾನೆ. ಇದೇ ಮಕ್ಕಳೇ ಯೂನಿಫಾರ್ಮಿನಲ್ಲಿ ಕೂತ ಶಾಲಾ ಮಕ್ಕಳು ಎನ್ನುತ್ತಾನೆ. ಇಂಥ ಮಕ್ಕಳ ವರ್ಷಂಪೂರ್ತಿ ಊಟಕ್ಕೆಂದು 30 ಡಾಲರ್ ಕೊಟ್ಟರೆ ಸಾಕೆನ್ನುತ್ತಾನೆ. ಈ ರೀತಿ ವಿದೇಶಿ ಕಂಪೆನಿಗಳಿಂದ, ಅಮೆರಿಕದ ದಯಾವಂತರಿಂದ ಫಂಡ್ ಸುಲಿಯಲೆಂದೇ ಅಮೆರಿಕದ ಭಟ್ನಾಗರ್ ಎಂಬಾಕೆಯನ್ನು ಫಂಡ್‌ರೈಸಿಂಗ್ ಏಜಂಟ್ ಆಗಿ ನೇಮಿಸಿಕೊಂಡಿದ್ದಾನೆ. ಈಕೆ ವೃತ್ತಿನಿರತ ವಸೂಲಿಯಾಕೆ. ಕೈತುಂಬಾ ಕಮೀಷನ್ ಮುರಿದುಕೊಂಡೇ ಮಿಕ್ಕಿದ್ದನ್ನು ಅಕ್ಷಯ ಪಾತ್ರ ಫೌಂಡೇಷನ್ನಿಗೆ ಹಾಕುತ್ತಾಳೆ. ಹಾಗೇ ಅಕ್ಷರ ದಾಸೋಹದ ಹೆಸರಲ್ಲಿ ವಸೂಲಿಯಾದ ದುಡ್ಡು ಭಾರತಕ್ಕೆ ಬರುವುದೇ ಇಲ್ಲ. ಬಂದರೂ ಮಕ್ಕಳ ಊಟಕ್ಕೆ ಬಳಕೆಯಾಗುತ್ತಾ? ಅಥವಾ ಅನಾಥ ಮಕ್ಕಳಿಗೆ ಉಪಯೋಗವಾಯಿತಾ? ಆ ಬಗ್ಗೆಯೂ ಮಾಹಿತಿಯಿಲ್ಲ.



ಸರ್ಕಾರದ ದುಡ್ಡಲ್ಲಿ ಶಾಲಾ ಮಕ್ಕಳಿಗೆ ಇಸ್ಕಾನ್ ಊಟ

ಅಮೆರಿಕದ ಮಾತು ಒತ್ತಟ್ಟಿಗಿರಲಿ, ಈಗಾಗಲೇ ಇನ್‌ಫೋಸಿಸ್ ಕಂಪೆನಿಯೊಂದೇ ನಾಲ್ಕೂವರೆ ಕೋಟಿ ಕೊಟ್ಟಿದೆ. ಏರ್‌ಟೇಲ್ ಕಂಪೆನಿಯಿಂದ 5 ಕೋಟಿ, ಜಿಂದಾಲ್ ಕಂಪೆನಿಯಿಂದ ಮತ್ತೆ ಐದು ಕೋಟಿ ಹೀಗೆ ಕಾರ್ಪೋರೇಟ್ ಕಂಪೆನಿಗಳಿಂದ, ದಯಾಳು ಶ್ರೀಮಂತರಿಂದ ದುಡ್ಡು ಹರಿದು ಬರುತ್ತಲೇ ಇದೆ. ಈ ರೀತಿ ಫಂಡ್ ವಸೂಲಿಗೆಂದೇ ತನ್ನ ಸಂಬಂಧಿ ಚಿತ್ರಾಂಗ ಚೈತನ್ಯದಾಸ ಎಂಬಾತನನ್ನು ಮಧುಪಂಡಿತದಾಸ ನೇಮಿಸಿದ್ದಾನೆ. ಆತನ ಸುಪರ್ದಿನಲ್ಲಿ ರಮಾ, ಉಷಾ ಮುಂತಾದ ರಂಗೀಲಾ ಹೆಂಗಸರೇ ಹಿಂದೆ ಫಂಡ್ ಸುಲಿಗೆಗಿಳಿದಿದೆ. ಇವರ್‍ಯಾರಿಗೂ ನಲವತ್ತು ಸಾವಿರಕ್ಕಿಂತ ಕಮ್ಮಿಯ ಸಂಬಳವಿಲ್ಲ. ಸಂಬಳವೇ ಇಷ್ಟಾದರೆ ಅಕ್ಷರ ದಾಸೋಹದ ಲೂಟಿ ಇನ್ನೆಷ್ಟಿರ ಬೇಡ?

ಶಾಸಕ ಮಾಧುಸ್ವಾಮಿ ಈಗಾಗಲೇ ಮಧುಪಂಡಿತನ ಹಗಲು ದರೋಡೆಯ ವಿರುದ್ಧ ವಿಧಾನಸಭೆಯಲ್ಲಿ ಪ್ರತಿಭಟಿಸಿದ್ದಾರೆ. ಇಷ್ಟಾದ ನಂತರವೂ ಸರ್ಕಾರ 'ಅಕ್ಷಯ ಪಾತ್ರ' ಅಕ್ರಮದ ವಿರುದ್ಧ ಏಕೆ ತನಿಖೆ ಮಾಡುತ್ತಿಲ್ಲ? ಮಧುಪಂಡಿತನನ್ನು ಜೈಲಿಗೆ ಹಾಕಲು ಇದಕ್ಕಿಂತ ಉದಾಹರಣೆ ಬೇಕೆ?



ಕೊರಂಗು ಮತ್ತು ಕ್ರೈಂ ಸ್ಟೋರಿ!

ಇತ್ತ ಕೊರಂಗುನನ್ನು ಬಂಡಿಪುರ ಕಾಡಿನಲ್ಲಿ ಎನ್‌ಕೌಂಟರ್ ಮಾಡಿದ್ದಾರೆಂಬ ಸುದ್ದಿ ದಟ್ಟವಾಗಿ ಹರಡುತ್ತಿದ್ದಂತೆಯೇ ಅತ್ತ ಸ್ವತಃ ಕೊರಂಗು ಉದಯ ಟೀವಿಯ ಕ್ರೈಂಸ್ಟೋರಿಯ ರಿಪೋರ್ಟರ್ ರಾ. ಪ್ರವೀಣ್‌ರನ್ನು ಸಂಪರ್ಕಿಸಿ ತಮಿಳುನಾಡಿನ ಯಾವುದೋ ಸಮುದ್ರ ತೀರಕ್ಕೆ ಕರೆಸಿಕೊಂಡು 'ನಾನು ಎನ್‌ಕೌಂಟರ್ ಆಗ್ತೀನಾ? ಇನ್ನೂ ಬದುಕಿದ್ದೀನಿ. ಮಚ್ಚನನ್ನು ಕೊಂದ ಒಬ್ಬೊಬ್ಬರನ್ನೂ ಬೇಟೆ ಆಡ್ತೀನಿ....' ಎಂದು ಎಗರಾಡಿದ್ದ. ಅದು ಕೊರಂಗು ಮಂಗಾಟಕ್ಕೊಂದು ನಿದರ್ಶನದಂತಿತ್ತು. ಅದನ್ನು ಯಥಾವತ್ತಾಗಿ ಕ್ರೈಂಸ್ಟೋರಿ ಬಿತ್ತರಿಸೇಬಿಟ್ಟಿತು.

ರಿವೇಂಜ್ ಕಿಲ್ಲಿಂಗ್ಸ್ 27

ರಾ. ಸೋಮನಾಥ್


ಲೇಮತ್ತು ಕೊರಂಗು ಆಡಿದ ಮಾತುಗಳೇನು ತನ್ನಿಯ ಮಾತುಗಳಾ?

'.... ಅವನಮ್ಮನ್ ಗಾಂಡು ನನ್ಮಕ್ಳು ಮಚ್ಚ ಫೀಲ್ಡಲ್ಲಿರೋವಾಗ ತೋರಿಸಬೇಕಿತ್ತು. ಎಲ್ಲಾ ಬಿಟ್ಟು ರಾಜಕೀಯಕ್ಕೆ ಬಂದ ಮೇಲೆ ಹೊಡೆಯೋದಾ? ಅದೂ ಒಬ್ಬನ ಮೇಲೆ ಆರವತ್ತೈವತ್ತು ಜನಾ ಹೋಗೋದಾ? ಗಾಂಡು ಗಳು....!'


ಇದು ಉದಯ ಟೀವಿಯ ಕ್ರೈಂಸ್ಟೋರಿಯಲ್ಲಿ ಬಂದ ಕೊರಂಗು ಸಂದರ್ಶನದ ಸ್ಯಾಂಪಲ್. ಆ ಹೊತ್ತಿಗಾಗಲೇ ಮಂಡ್ಯ ಕೃಷ್ಣನ ಹಂತಕರಿಗಾಗಿ ಸಿಸಿಬಿಯ ಎಸಿಪಿ ಬಿ.ಕೆ. ಶಿವರಾಮ್ ತಂಡ ಇಡೀ ಕರ್ನಾಟಕವನ್ನೇ ಜಾಲಾಡಿಬಿಟ್ಟಿತ್ತು. ಸಿಸಿಬಿಯ ನಿಷ್ಣಾತ ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ಮತ್ತು ಉಮೇಶ್ ಕೊರಂಗು ಹೆಂಡತಿಯ ಊರಾದ ಆಂಧ್ರಕ್ಕೆ ಹೋಗಿ ತಿಂಗಳಾನುಗಟ್ಟಲೇ ವೇಷ ಮರೆಸಿಕೊಂಡು ಹೊಂಚು ಹಾಕಿದ್ದರು. ಬೆಂಗಳೂರಿನ ನಾಲ್ವರೂ ಡಿಸಿಪಿಗಳು ಒಂದೊಂದು ಸ್ಕ್ವಾಡ್ ಮಾಡಿಕೊಂಡು ಕೊರಂಗು ಬೆನ್ನಿಗೆ ಬಿದ್ದಾಗಿತ್ತು. ಈ ಮಧ್ಯೆಯೇ ಗುಂಡ್ಲುಪೇಟೆ ಸಮೀಪದ ಬಂಡಿಪುರ ಕಾಡಿನಲ್ಲಿ ಕೊರಂಗುವನ್ನು ಸಿಸಿಬಿ ಎಸಿಪಿ ಬಿ.ಕೆ. ಶಿವರಾಮ್ ಪಡೆ ಎನ್‌ಕೌಂಟರ್ ಮಾಡಿ ಕೊಂದು ಹಾಕಿದೆ ಎಂಬ ಸುದ್ದಿಯೊಂದು ಅದೆಲ್ಲಿಂದಲೋ ಹುಟ್ಟಿಕೊಂಡಿತ್ತು. Of course ಇಷ್ಟರಲ್ಲೇ ಕೊರಂಗು ಎನ್‌ಕೌಂಟರ್ ನಡೆಯಲಿದೆ ಎಂಬುದು ಬೆಂಗಳೂರಿನ ಬಹುತೇಕ ಕ್ರೈಂ ರಿಪೋರ್ಟರುಗಳಿಗೆಲ್ಲ ಗೊತ್ತಾಗಿಬಿಟ್ಟಿತ್ತು. ಯಾವತ್ತು ಬಂಡಿಪುರ ಕಾಡಿನಲ್ಲಿ ಕೊರಂಗುನನ್ನು ಪೊಲೀಸರು ಗುಂಡಿಟ್ಟು ಕೊಂದರೆಂಬ ಸುದ್ದಿ ಹಬ್ಬಿತೋ ಎಲ್ಲಾ ದಿನಪತ್ರಿಕೆಗಳು ಅದನ್ನು ಲೀಡ್ ಸುದ್ದಿ ಮಾಡಿ ಪ್ರಕಟಿಸಿಬಿಟ್ಟವು.

ವಾಸ್ತವವೇನೆಂದರೆ ಕೊರಂಗು ಎನ್‌ಕೌಂಟರ್ ಸುದ್ದಿಯೇ ಅಪ್ಪಟ ಕುಚೋದ್ಯವಾಗಿತ್ತು. ಅದನ್ನು ಆತನೇ ಹಬ್ಬಿಸಿದ್ದಾ? ಅಥವಾ ಆತನ ಪತ್ನಿ ಗಾಬರಿಗೆ ಬಿದ್ದು ಪತ್ರಿಕೆಗಳಿಗೆ ಫೋನ್ ಮಾಡಿದ್ದಾ? ಹಾಗಂಥ ಪೊಲೀಸರೇ ಸುದ್ದಿ ಹಬ್ಬಿಸಿದರಾ?-ಗೊತ್ತಿಲ್ಲ.

ಆದರೆ ಕೊರಂಗು ಮಾತ್ರ ಅಷ್ಟಕ್ಕೇ ಬಿಡಲಿಲ್ಲ. ಉದಯ ಟೀವಿಯ ಕ್ರೈಂಸ್ಟೋರಿಯ ರಿಪೋರ್ಟರ್ ರಾ. ಪ್ರವೀಣ್‌ರನ್ನು ಸಂಪರ್ಕಿಸಿದ್ದೇ ತಮಿಳುನಾಡಿನ ಯಾವುದೋ ಸಮುದ್ರ ತೀರಕ್ಕೆ ಕರೆಸಿಕೊಂಡು 'ನಾನು ಎನ್‌ಕೌಂಟರ್ ಆಗ್ತೀನಾ? ಇನ್ನೂ ಬದುಕಿದ್ದೀನಿ. ಮಚ್ಚನನ್ನು ಕೊಂದವರನ್ನು ಒಬ್ಬೊಬ್ಬರಾಗಿ ಬೇಟೆ ಆಡ್ತೀನಿ....' ಎಂಬರ್ಥದ ಮಾತಾಡಿಬಿಟ್ಟ. ಅದು ಕೊರಂಗು ಮಂಗಾಟಕ್ಕೊಂದು ನಿದರ್ಶನ ಮಷ್ಟೇ. ಅದನ್ನೇ ಯಥಾವತ್ತಾಗಿ ಕ್ರೈಂಸ್ಟೋರಿ ಬಿತ್ತರಿಸಿತು.



ತಿಮ್ಮೇನಹಳ್ಳಿ ಸೂರಿ



ಪೆದ್ದಗುಂಡ

'ನಾನು ಬೆಂಗಳೂರು ಬಿಟ್ಟೇ ಒಂದು ವರ್ಷವಾಗಿತ್ತು. ಈಗ ಕೆಣಕಿ ಕೆಣಕಿ ದುಷ್ಮನ್‌ಗಳು ನನ್ನನ್ನು ಬೆಂಗಳೂರಿಗೆ ಬರುವಂತೆ ಮಾಡಿದ್ದಾರೆ. ಬದ್ತೀನಾ? ಆ ಗಾಂಡು ನನ್ಮಕ್ಳು ಯಾರು ಬೇಕಾದ್ರೂ ಬರಲಿ. ನನ್ನ ಬಾಗಿಲು ತೆಗೆದೇ ಇದೆ. ನಮ್ಮ ಕಡೆಯ ಒಬ್ಬನ ಮೇಲೆ ಅವರು ಕೈಯಿಟ್ಟರೆ ನಾನು ಅವರ ಕಡೆಯ ಇಪ್ಪತ್ತು ಮಂದಿಯನ್ನು ತೆಗೀತೀನಿ. ಆ ಗಾಂಡು ನನ್ಮಗ ಮುಲಾಮ ನನ್ನನ್ನ ಮಂಡ್ಯ ಕೃಷ್ಣನ ಕೊಲೆ ಕೇಸಲ್ಲಿ ಫಿಟ್ ಮಾಡಿಸಿದ್ದಾನೆ. ತಾಕತ್ತಿದ್ರೆ ಮುಂದೆ ಬರಲಿ. ಆ ಗಾಂಡು ನನ್ಮಗ ಮಂಡ್ಯ ಕೃಷ್ಣ ಯಾರು ಅನ್ನೋದೇ ನನಗೊತ್ತಿಲ್ಲ, ಅಂವನ ಮುಖಾನೇ ನೋಡಿಲ್ಲ, ಅವನನ್ನ ನಾನ್ಯಾಕೆ ಕೊಲ್ಲಲಿ?'

ಇದು ಕೊರಂಗುನ ಕ್ರೈಂಸ್ಟೋರಿ ಸಂದರ್ಶನದ ವೈಖರಿ. ಅಲ್ಲಿಗೆ ಮಚ್ಚನ ಇಡೀ ತಂಡವನ್ನು ಲೀಡ್ ಮಾಡುತ್ತಿರುವುದೇ ಕೊರಂಗು ಎಂಬುದು ಇಡೀ ಅಂಡರ್‌ವರ್ಲ್ಡಿಗೆ ಗೊತ್ತಾಗಿ ಹೋಗಿತ್ತು. ಸಾಮಾನ್ಯವಾಗಿ ಕಸುಬುದಾರ ಪಾತಕಿಗಳ್ಯಾರೂ ಹೀಗೆ ದುಡುಕುವುದಿಲ್ಲ. ಒಬ್ಬ ರೌಡಿಯ ಹತ್ಯೆಗೆ ತಾನೇ ನಿಂತು ಪ್ರತೀಕಾರ ಕೈಗೊಳ್ಳುತ್ತೇನೆಂದು ಈ ರೀತಿ ಬಹಿರಂಗವಾಗಿ ಭಡಾಯಿ ಕೊಚ್ಚಿಕೊಳ್ಳುವುದಿಲ್ಲ. ಸದ್ದಿಲ್ಲದೇ ಕಾರ್ಯ ಸಾಧಿಸುತ್ತಾರೆ. ಆದರೆ ಕೊರಂಗು ದುಡುಕಿಬಿಟ್ಟ-

ಹಕೀಕತ್ತೇನೆಂದರೆ ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಕೊರಂಗು ಪಾತ್ರವಿರಲಿಲ್ಲ. ಅದು ಮಚ್ಚನ ಅನುಯಾಯಿಗಳ ಪಕ್ಕಾ ಪ್ರತೀಕಾರವಾಗಿತ್ತು. 2005 ರ ನವೆಂಬರ್ 30 ರಾತ್ರಿ 8.15 ಕ್ಕೆ ಲಗ್ಗೆರೆಯ ರಾಜೀವ್‌ಗಾಂಧಿನಗರದ ತನ್ನ ಮನೆಯಲ್ಲಿ ಟೀವಿ ನೋಡುತ್ತಲೇ ಮಲಗಿದ್ದ ಮಂಡ್ಯ ಕೃಷ್ಣ ಆಹಾಗಾಗಲೇ ಹರ್ನಿಯಾ ಆಪರೇಷನ್ನಾಗಿತ್ತು. ಆತನ ಪತ್ನಿ ಭಾಗ್ಯಮ್ಮ ತರಕಾರಿ ಹೆಚ್ಚುತ್ತಾ ಕೂತಿದ್ದಳು. ಯಾರೋ ಬಾಗಿಲು ಬಡಿದಂತಾಯ್ತು. ಬಾಗಿಲು ತೆರೆದರೆ ಸಾಕ್ಷಾತ್ ಯಮಧೂತನಂತೆ ಕೋತಿರಾಮ ಲಾಂಗ್ ಹಿಡಿದು ನಿಂತಿದ್ದ. ವಾಪಸ ವಾಪಸೆ ಹಿಡಿದ ಭಾಗ್ಯಮ್ಮ 'ರೀ ಹೊಡೆಯೋದಕ್ಕೆ ಬಂದವ್ನೆ.... ಓಡ್ರೀ!' ಎಂದಿದ್ದಾಳೆ.

ಓಡಿದ್ದೇ ರೂಮಿನೊಳಕ್ಕೆ. ಇನ್ನೇನು ಬೋಲ್ಟ್ ಹಾಕಿಕೊಳ್ಳಬೇಕೆನ್ನುವಷ್ಟರಲ್ಲಿ ಕಲಗಚ್ಚು ಸೀನನ ಗ್ಯಾಂಗ್ ನುಗ್ಗಿಬಿಟ್ಟಿತ್ತು. ಆ ಪೈಕಿ ತುರೆ ಸತೀಶ 'ಎಲ್ಲೋ ಅವ್ನು ಮುಲಾಮ?' ಎಂದಿದ್ದಾನೆ. ಥರಗುಡುತ್ತಲೇ 'ಸತ್ಯವಾಗ್ಲೂ ಗೊತ್ತಿಲ್ಲಾ ಗುರೂ' ಎಂದಿದ್ದಾನೆ ಮಂಡ್ಯ ಕೃಷ್ಣ. ಅಷ್ಟೇ, ಕೋತಿ ರಾಮ, ಕಲಗಚ್ಚು ಸೀನ, ಕೋಳಿ ರಾಜ, ಮಹೇಂದ್ರ, ಕೋಳಿ ಸೀನ- ಹೀಗೆ ಒಬ್ಬೊಬ್ಬರಾಗಿ ಲಾಂಗ್ ಬೀಸಿದ್ದಾರೆ. ಅದು ಎಷ್ಟು ಭರ್ಬರವಾಗಿತ್ತೆಂದರೆ ಆತನ ಪತ್ನಿ ಹೆಚ್ಚುತ್ತಿದ್ದ ತರಕಾರಿ ಕೂಡ ಚೆಲ್ಲಿದ ರಕ್ತದಲ್ಲಿ ತೋಯ್ದು ಹೋದವು. ರಕ್ತದ ಓಕುಳಿಯಲ್ಲಿ ಬಿದ್ದಿದ್ದ ಮಂಡ್ಯ ಕೃಷ್ಣನನ್ನು ಪ್ರಾರಂಭದಲ್ಲಿ ಸಂಜೀವಿನಿ ಆಸ್ಪತ್ರೆಗೆ ಸಾಗಿಸಲಾಗಿತ್ತು. ಅಲ್ಲಿನ ವೈದ್ಯರು ಕೈ ಚೆಲ್ಲಿದ ಮೇಲೆ ಆತನನ್ನು ರಾಜಾಜಿನಗರದ ಆಸ್ಪತ್ರೆಗೆ ರವಾನಿಸಲಾಯಿತು.

ಅಸಲಿಗೆ ಆವತ್ತೇ ಆತ ಸತ್ತುಹೋಗಿದ್ದನಾದರೂ ಆಸ್ಪತ್ರೆಯವರು ದುಡ್ಡು ಸುಲಿಯಲು ICU ನಲ್ಲಿಟ್ಟು, ಮೂಗಿಗೆ ಆಕ್ಸಿಜನ್ ಕೊಳವೆಗಳಿಟ್ಟು ಹೇಗೋ ಒಂದು ವಾರ 'ಕೋಮಾ' ಹಂತದಲ್ಲೇ ಇರಿಸಿದ್ದರು. ಅಂತಿಮವಾಗಿ ಡಿಸೆಂಬರ್ 6 ರಂದು ಆಸ್ಪತ್ರೆಯಿಂದ ಹೊರಬಿದ್ದಿದ್ದು ಮಂಡ್ಯ ಕೃಷ್ಣನ ಹೆಣ ಮಾತ್ರ. ಅಷ್ಟಕ್ಕೇ ಆಸ್ಪತ್ರೆ 70 ಸಾವಿರ ರೂಪಾಯಿಗಳನ್ನು ದೋಚಿತ್ತು.


ಯಾವತ್ತು ಮಂಡ್ಯ ಕೃಷ್ಣನನ್ನು ಕತ್ತರಿಸಿದ್ದ ಸುದ್ದಿ ಮುಲಾಮನ ಕಿವಿ ಮುಟ್ಟಿತೊ, ಮೊದಲೇ ಜಿದ್ದಿತ್ತಲ್ಲ; ಕೃಷ್ಣನ ಹೆಂಡತಿಯ ಕೈಯಿಂದ ಕೊರಂಗುನೇ ನಿಂತು ಮಾಡಿಸಿದ ಎಂದು ಮುಲಾಮ ಕಂಪ್ಲೇಂಟ್ ಕೊಡಿಸಿಬಿಟ್ಟ. ಆದಕ್ಕೆ ತಕ್ಕಂತೆ ಮಚ್ಚನ ಎಲ್ಲಾ ವಿರೋಧಿಗಳೂ ಒಟ್ಟಾಗಿ ತಮಗೆ ಯಾರೆಲ್ಲ ಆಗುವುದಿಲ್ಲವೋ ಅವರೆಲ್ಲರನ್ನು ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ಸಿಲುಕಿಸಿಬಿಟ್ಟರು. ಆಗ ರಾಜಗೋಪಾಲನಗರಕ್ಕೆ ಇನ್ಸ್‌ಪೆಕ್ಟರ್ ಆಗಿದ್ದುದು ಭೋಪಯ್ಯ. ಕಡಬಗೆರೆ ಪಾಯ್ಸನ್ ರಾಮು ಮತ್ತು ಆತನ ಅಣ್ಣ, ಇಬ್ಬರಿಗೂ ಮಂಡ್ಯ ಕೃಷ್ಣ ಕೊಲೆಯಾಗಿದ್ದು ಎಂಥಾ ಅನುಕೂಲವಾಯಿತೆಂದರೆ, ತಮ್ಮ ರಾಜಕೀಯದ ಎದುರಾಳಿ ಕಾಂಗ್ರೆಸ್ ಜಿಲ್ಲಾ ಪಂಚಾಯ್ತಿ ಸದಸ್ಯ ಗೊಲ್ಲರಹಟ್ಟಿ ರಾಜಣ್ಣನವರನ್ನು ಅನ್ಯಾಯವಾಗಿ ಕೇಸಿಗೆ ಫಿಟ್ ಮಾಡಿಸಿದರು. ಜೊತೆಗೆ ಕಾಮಾಕ್ಷಿಪಾಳ್ಯದ ಯದುಗಿರಿ ಮತ್ತು ಕಿವುಡಾ ಬಲರಾಮರನ್ನೂ ವಿನಾಕಾರಣ ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ಸಿಲುಕಿಸಲಾಯ್ತು.

ಹಾಗೆ ನೋಡಿದರೆ ಗೊಲ್ಲರಹಟ್ಟಿ ರಾಜಣ್ಣ ಆ ಭಾಗದ ಅತ್ಯಂತ ಜನಪ್ರಿಯ ರಾಜಕಾರಣಿ. ಆ ಕಾಲದಿಂದಲೂ ಕಡಬಗೆರೆ ಪಾಯ್ಸನ್ ರಾಮುನ ಹಾವಳಿಯ ವಿರುದ್ಧ ಹೋರಾಡುತ್ತಾ ಬಂದವರು. ಅಲ್ಲಿಗೆ ಆರು ತಿಂಗಳ ಹಿಂದಷ್ಟೇ ನಡೆದ ಜಿಲ್ಲಾ ಪಂಚಾಯ್ತಿ ಚುನಾವಣೆಯ ಜೆಡಿಎಸ್ ವಿರುದ್ಧ ಭಾರೀ ಅಂತರದಿಂದ ಗೆದ್ದಿದ್ದರು. ಹಾಗಿದ್ದೂ ಮಂಡ್ಯ ಕೃಷ್ಣನ ಕೊಲೆ ಕೇಸಿನಿಂದ ಬಚಾವಾಗುವುದು ಅವರಿಂದಾಗಲೇ ಇಲ್ಲ, ಆ ಮಟ್ಟಿಗೆ ಪೊಲೀಸರ ಮೇಲೆ ಜೆಡಿಎಸ್ ಹಂತಕರ ಪ್ರಭಾವವಿತ್ತಾದ್ದರಿಂದಲೇ ಯಾರೆಲ್ಲ ಮಚ್ಚನ ಬೆನ್ನಿಗಿದ್ದರೋ ಅವರೆಲ್ಲರನ್ನೂ ಮಂಡ್ಯ ಕೃಷ್ಣ ಕೊಲೆ ಕೇಸಿಗೆ ಸಿಲುಕಿಸಲಾಯ್ತು. ಕೊರಂಗುನೇ ಮೊದಲನೇ ಆರೋಪಿಯಾಗಿದ್ದ. ಯದುಗಿರಿಯನ್ನು ಎರಡನೇ ಆರೋಪಿಯನ್ನಾಗಿಸಲಾಯ್ತು. ಕಲಗಚ್ಚು ಸೀನ, ಕೋಳಿರಾಜ, ಕೋತಿರಾಮ, ತುರೆ ಸುತೀಶ, ಕೋಳಿ ಸೀನ, ಪೆದ್ದಗುಂಡ, ಕಿವುಡ ಬಲರಾಮ, ಮಹೇಂದ್ರ, ರಾಜಣ್ಣ, ಕಮಲ್, ರಾಮಚಂದ್ರ ಮತ್ತು ಇತರರನ್ನು ಆರೋಪಿಗಳನ್ನಾಗಿ ಮಾಡಿ ರಾಜಗೋಪಾಲನಗರದ ಇನ್ಸ್‌ಪೆಕ್ಟರ್ ಭೋಪಯ್ಯ ಚಾರ್ಜ್‌ಶೀಟ್ ಹಾಕಿದರು.

ಅಲ್ಲಿಯತನಕ ಬೆಂಗಳೂರು ಅಂಡರ್‌ವರ್ಲ್ಡ್ ಪಾಲಿಗೆ ಮರೆಯಲ್ಲಿದ್ದ ಕೊರಂಗು ರಾತ್ರೋರಾತ್ರಿ ಕುಖ್ಯಾತನಾಗಿಬಿಟ್ಟ.



ಮಂಡ್ಯ ಕೃಷ್ಣ



ಕೋತಿರಾಮು

ಆದರೂ ಮಚ್ಚನ ಹತ್ಯೆಗೆ ಸೇಡು ತೀರಿಸಿಕೊಳ್ಳುತ್ತೇನೆಂದು ಆ ರೀತಿ ಬಡಾಯಿ ಕೊಚ್ಚುತ್ತಾನೆಂದರೆ ಯಾರೆಲ್ಲ ಮಚ್ಚನ ಕೊಲೆಯಲ್ಲಿ ಕೈಜೋಡಿಸಿದ್ದರೋ ಅವರ ಕಣ್ಣು ಬಿಳಿದಿರುತ್ತಾ? ಅಂಥಾದ್ದೊಂದು ದುಸ್ಸಾಹಸಕ್ಕೆ ಕೈಹಾಕಿದ್ದ ಕೊರಂಗು 2006 ರ ಜನವರಿಯಲ್ಲಿ ಮತ್ತೊಂದು ಯಡವಟ್ಟಿಗೆ ಕೈಯಿಟ್ಟ. ಆವತ್ತು ಮಚ್ಚನ ಕೊಲೆ ಕೇಸಿಗೆಂದು ಮುಲಾಮ ಸೆಷನ್ಸ್ ಕೋರ್ಟಿಗೆ ಬಂದರೆ ಮಂಡ್ಯ ಕೃಷ್ಣನ ಕೊಲೆ ಕೇಸಿಗೆಂದು ತುಮಕೂರು ಜೈಲಲ್ಲಿದ್ದ ಕೊರಂಗುವನ್ನು ಅದೇ ಸೆಷನ್ಸ್ ಕೋರ್ಟಿಗೆ ಕರೆತರಲಾಗಿತ್ತು. ಮೊದಲನೇ ಮಹಡಿಯಲ್ಲಿದ್ದ ಮುಲಾಮನನ್ನು ನೋಡಿದ್ದೇ ತಡ ಕೊರಂಗು ನಾಲ್ಕನೇ ಮಹಡಿಯಿಂದಲೇ 'ಏ ಗಾಂಡೂ....!' ಎಂದು ಕಿರುಚಿಬಿಟ್ಟ!

ಅದಕ್ಕೆ ಪ್ರತಿಯಾಗಿ ಮುಲಾಮ ಕೂಡ ಕೆಳಗಿದ್ದೇ 'ತಾಕತ್ತಿದ್ರೆ ಬಾರೋ' ಎಂದುಬಿಟ್ಟ. ಪೊಲೀಸರಿಲ್ಲದೇ ಹೋಗಿದ್ದರೆ ಆವತ್ತು ಮುಲಾಮ ಅಥವಾ ಕೊರಂಗು ಇಬ್ಬರಲ್ಲೊಬ್ಬರ ಹೆಣ ಬೀಳುತ್ತಿತ್ತು!

ಮಚ್ಚನ ಹತ್ಯೆಯಿಂದಾಗಿ ಇಡೀ ಬೆಂಗಳೂರು ಅಂಡರ್‌ವರ್ಲ್ಡ್ ಇಬ್ಭಾಗವಾಗಿ ಹೋಗಿತ್ತು. ಒಂದೆಡೆ ಮುಲಾಮ, ಕಡಬಗೆರೆ ರಾಮ, ತಿಮ್ಮೇನಹಳ್ಳಿ ಗೋವಿಂದ, ಸೂರಿ, ಅರಸಯ್ಯ, ಶಿವಮೊಗ್ಗ ನಾಗ, ಶಿವಕಾಶಿ ಗೂಳಿ ಬಸವರ ಸಿಂಡಿಕೇಟ್. ಅದಕ್ಕೆ ವ್ಯತಿರಿಕ್ತವಾಗಿ ಕೊರಂಗು, ಸುನೀಲ, ಮಾರ್ಕೆಟ್ ವೇಡಿ, ಕತ್ರಿಗುಪ್ಪೆ ಲಿಂಗ, ಒಂಟೆ, ಲಕ್ಕಿ ಇತ್ಯಾದಿಗಳ ಗ್ಯಾಂಗ್. ಒಂದೋ ಇಷ್ಟರಲ್ಲೇ ಕೊರಂಗು ಎನ್‌ಕೌಂಟರ್ ಆಗುತ್ತಾನೆ ಅಥವಾ ಹೊರಗಿದ್ದೇ ಕೊರಂಗು ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಅಥವಾ ಮುಲಾಮನಿಗೆ ಗತಿ ಕಾಣಿಸುತ್ತಾನೆ ಎಂಬುದು ಎಲ್ಲೆಂದರಲ್ಲಿ ಹೊಗೆಯಾಡಲಾರಂಭಿಸಿತು. ಪೊಲೀಸರು ಸಿಕ್ಕಸಿಕ್ಕ ರೌಡಿಗಳನ್ನೆಲ್ಲ ಎಳೆದೊಯ್ದು ರಿಪೇರಿ ಮಾಡುತ್ತಿದ್ದರು. ಅರ್ಧಕ್ಕರ್ಧ ರೌಡಿಗಳು ಹೆದರಿ ಬೆಂಗಳೂರು ಬಿಟ್ಟರು. ಇಂಥಾ ಸಂದಿಗ್ದದಲ್ಲೇ ಅನೇಕ ದಿನಗಳಿಂದ ಜೈಲು ಸವೆಸುತ್ತಿದ್ದ ಒಬ್ಬರ ಕಂಡರೆ ಇನ್ನೊಬ್ಬರಿಗಾಗದ ಹಾವು ಮುಂಗುಸಿಯಂತಿದ್ದ ಪರಸ್ಪರ ವಿರೋಧಿ ಜಾಲದ ಇಬ್ಬರು ವಿಲಕ್ಷಣ ಹಂತಕರು ಜೈಲಿಂದ ಹೊರಬಿದ್ದರು. ಆ ಪೈಕಿ ಒಬ್ಬ ತಿಮ್ಮೇನಹಳ್ಳಿ ಸೂರಿ! ಮತ್ತೊಬ್ಬ ಮಚ್ಚನ ನೆಚ್ಚಿನ ಬಂಟ ಪೆದ್ದಗುಂಡ!

ಮಚ್ಚನ ಹತ್ಯೆಯಲ್ಲಿ ಮುಲಾಮನ ಬಂಟರಾದ ರಾಮ ಮತ್ತು ಲಕ್ಷ್ಮಣರ ಹೆಸರೇ ಮುಂಚೂಣಿಯಲ್ಲಿತ್ತಾದರೂ, ಅವರಿಬ್ಬರಿಗಿಂತಲೂ ಹೆಚ್ಚಾಗಿ ಸೂರಿಯ ಕೈಯಿತ್ತೆಂಬುದು ಇಡೀ ಮಚ್ಚನ ಗ್ಯಾಂಗಿಗೆ ಗೊತ್ತಾಗಿ ಹೋಗಿತ್ತು. ಸೂರಿಯ ಗುರು ತಿಮ್ಮೇನಹಳ್ಳಿ ಗೋವಿಂದನಿಗೂ ಜೈಲಿಂದ ಬಿಡುಗಡೆಯಾಗಿತ್ತಾದರೂ ಆತ ಹೊರಬಿದ್ದವನೇ ಭೂಗತನಾಗಿಬಿಟ್ಟಿದ್ದ. ಆದರೆ ಸೂರಿ ಹಾಗಲ್ಲ, ಆತ ಗೋವಿಂದನಿಗಿಂತಲೂ ವೇಗವಾಗಿ ಬೆಳೆದುಬಿಟ್ಟಿದ್ದ. ಜೈಲೊಳಗಿದ್ದೇ ಅದೆಂಥಾ ಹಂತಕರ ತಂಡಗಳನ್ನು ಸಂಘಟಿಸಿದ್ದನೆಂದರೆ; ಒಂದೆಡೆ ಶಿವಮೊಗ್ಗ ನಾಗ, ಮತ್ತೊಂದೆಡೆ ಕತ್ರಿಗುಪ್ಪೆಯ ಕಿಲ್ಲರ್ ಬಳ್ಳ, ಮಗದೊಂದೆಡೆ ಬನಶಂಕರಿಯ ಅರಸಯ್ಯ, ಇನ್ನೊಂದೆಡೆ ಯಶವಂತಪುರದ ವೆಂಕಿ- ಹೀಗೆ ಸೈಲೆಂಟ್ ಸುನೀಲನಿಗೆ ಪರ್ಯಾಯವಾಗಿ ಸೂರಿ ಚಿಗುರಿಕೊಂಡಿದ್ದ. ತಮ್ಮಯ್ಯನ ಕೊಲೆ ಕೇಸಿನಲ್ಲಿ ವರ್ಷಾನುಗಟ್ಟಲೇ ಜೈಲಲ್ಲಿದ್ದರೂ ಅಲ್ಲಿದ್ದಷ್ಟೂ ದಿನ ಒಂದಲ್ಲಾ ಒಂದು ಭೂಗತ ಕಾರಸ್ಥಾನವನ್ನು ನಡೆಸಿಕೊಂಡೇ ಬಂದಿದ್ದ ಸೂರಿಯ ಬೆಳವಣಿಗೆ ಕಂಡು ಆತನ ಗುರು ತಿಮ್ಮೇನಹಳ್ಳಿ ಗೋವಿಂದನೇ ಅಸೂಯೆ ಪಟ್ಟುಕೊಂಡಿದ್ದ. ಗೋವಿಂದನಿಗೂ ಸೂರಿಗೂ ಜೈಲಲ್ಲೇ ಮನಸ್ತಾಪ ತಲೆ ಎತ್ತಿತ್ತು.


ಸೂರಿ ಹೊರಬರುತ್ತಿದ್ದಂತೆ ಕಾಮಾಕ್ಷಿಪಾಳ್ಯದ ಗೂಳಿ ಬಸವ ಮತ್ತು ಧರಣಿಯ ಜೊತೆ ಸುತ್ತಲಾರಂಭಿಸಿದ. ತಿಮ್ಮೇನಹಳ್ಳಿಗೆ ಶಾಸ್ತ್ರಕ್ಕಷ್ಟೇ ಭೇಟಿ ಕೊಡುತ್ತಿದ್ದ. ಮಿಕ್ಕಂತೆ ಕೆಂಗೇರಿ ಉಪನಗರದಲ್ಲಿ ಅಡ್ಡೆ ಹಾಕುತ್ತಿದ್ದ. ಅಂಥಾ ಸೂರಿಯನ್ನು ಕರೆತಂದು ಮೂಡಲಪಾಳ್ಯದ ತನ್ನ ಭೂಕಬಳಿಕೆಗೆ ಬೆಂಗಾವಲಾಗಿಟ್ಟುಕೊಂಡವನು ಕಾಮಾಕ್ಷಿಪಾಳ್ಯದ ನಟೋರಿಯಸ್ ಲ್ಯಾಂಡ್ ಗ್ರ್ಯಾಬರ್ ಜವರೇಗೌಡ. ಅಮರಜ್ಯೋತಿನಗರದ ಕೌನ್ಸಿಲರ್ ಪುಟ್ಟರಾಜು ಮನೆಯಿಂದ ಅನತಿ ದೂರದಲ್ಲಿ ಮಚ್ಚ ಹಾವಳಿಯಿಡುತ್ತಿದ್ದ. ಮಚ್ಚನ ಹತ್ಯೆಯಲ್ಲಿ ಸೂರಿಯ ಪಾತ್ರವೆಷ್ಟಿತ್ತೋ ಜವರೇಗೌಡನ ದುಡ್ಡೂ ಅಷ್ಟೇ ಕಾರಣವಾಗಿತ್ತು ಎಂಬುದು ಇವತ್ತಿಗೂ ಜನಜನಿತ. ಅಷ್ಟೇ ಅಲ್ಲ, ಕೆಂಗೇರಿ ಉಪನಗರದ ಸಮೀಪ ಕಾಡುಕುದುರೆ ಕೃಷ್ಣಪ್ಪನ ಭೂಕಬಳಿಕೆಗೂ ಸೂರಿಯೇ ಬೆಂಗಾವಲಾಗಿದ್ದ. ಎಲ್ಲಕ್ಕೂ ಮಿಗಿಲಾಗಿ ಸೂರಿಗೆ ಕೇಬಲ್ ಶ್ರೀಧರನ ನೆರಳಿತ್ತು. ಯಾವತ್ತಿಗೂ ಐವತ್ತು ಮಂದಿ ಹುಡುಗರ ಹಿಂಡು ಆತನ ಬೆನ್ನಿಗಿರುತ್ತಿತ್ತು. ಇಡೀ ಜೇದರಹಳ್ಳಿ ಸಾಮ್ರಾಜ್ಯಕ್ಕೆ ತಾನೇ ಉತ್ತರಾಧಿಕಾರಿಯೆಂದೂ ಒಬ್ಬ ಕೊರಂಗುನನ್ನು ಮುಗಿಸಿಬಿಟ್ಟರೆ ತಾನೇ ಬೆಂಗಳೂರಿನ ಭಾವಿ ಡಾನ್ ಎಂದೂ ಕನಸು ಕಾಣುತ್ತಿದ್ದ ಸೂರಿಗೆ ಸಾವೆಂಬುದು ಮಚ್ಚನ ನೆಚ್ಚಿನ ಬಂಟ ಪೆದ್ದಗುಂಡನ ರೂಪದಲ್ಲಿ ಅಟಕಾಯಿಸಿಕೊಳ್ಳಲಿದೆ ಎಂಬುದು ಎಲ್ಲಿ ಗೊತ್ತಿತ್ತು?

(ಮುಂದುವರೆಯುವುದು)

ಡೈವೋರ್ಸ್...!


ಕರ್ನಾಟಕದಲ್ಲಿ ಮತ್ತೆ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಕೂಟದ ಸರ್ಕಾರ ರಚನೆಯಾಗಲಿದೆ ಎಂಬ ಸುದ್ದಿಗೆ ಈಗ ಇನ್ನಷ್ಟು ಸ್ಪಷ್ಟ ಸೂಚನೆಗಳು ಸಿಗುತ್ತಿವೆ.

ಇನ್ನೇನು ಮೇ ತಿಂಗಳ ಮೊದಲ ವಾರದಲ್ಲಿ ಹೊರಬೀಳಲಿರುವ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶಗಳಲ್ಲಿ ಯಾವ ಪಾರ್ಟಿಯ ತಾಕತ್ತು ಎಷ್ಟೆಂಬುದು ತೀರ್ಮಾನವಾದ ನಂತರ ಅದು ರಾಜ್ಯ ರಾಜಕಾರಣದ ಮೇಲೂ ತನ್ನದೇ ಪರಿಣಾಮ ಬೀರಲಿದೆ.



ಸೋನಿಯಾ, ದೇವೇಗೌಡ, ಯಡಿಯೂರಪ್ಪರಾದಿಯಾಗಿ ರಾಷ್ಟ್ರ ರಾಜಕಾರಣದ ದಿಗ್ಗಜರೆಲ್ಲರೂ ಈಗ ಚಾತಕಪಕ್ಷಿಗಳಂತೆ ಕಾಯುತ್ತಿರುವುದು ಇದಕ್ಕೇನೆ. ಇದೆಲ್ಲಾ ನೋಡಿ ಯಡಿಯೂರಪ್ಪನವರ ನೆಮ್ಮದಿ ಕದಡಿ ಹೋಗಿ ಚಟಪಟಿಸಲು ಶುರುಮಾಡಿದ್ದಾರೆ. ನಿನ್ನೆ ಏಪ್ರಿಲ್ 28ರ ಶನಿವಾರ ಮುಖ್ಯಮಂತ್ರಿ ಕುಮಾರಸ್ವಾಮಿ ಬಿಜೆಪಿಯ ಗೆಣೆಕಾರ ಯಡ್ಡಿಯನ್ನು ಭೇಟಿ ಮಾಡಿ ಸಂಭವನೀಯ 'ಡೈವೋರ್ಸ್'ನ ಸ್ಪಷ್ಟ ಸೂಚನೆ ಕೊಟ್ಟಿದ್ದಾರೆ ಎನ್ನಲಾಗಿದೆ.

ಅಲ್ಲಿಗೆ, ಬಿಜೆಪಿ-ಜೆಡಿಎಸ್ ಮೈತ್ರಿ ಕೂಟದ 15 ತಿಂಗಳ ಕೋ-ಜಾ ಸರ್ಕಾರದ ಆಯಸ್ಸು ಇನ್ನು ಕೆಲವೇ ದಿನಗಳೆಂಬ ರೂಮರ್‌ಗೆ ಈಗ ಇನ್ನಷ್ಟು ಸಾಕ್ಷಿಗಳು ಸಿಗುತ್ತಿವೆ. ಕಾಂಗ್ರೆಸ್‌ನ ಆಸ್ಕರ್ ಫರ್ನಾಂಡಿಸ್ ಅಥವಾ ಎಚ್.ಕೆ. ಪಾಟೀಲರು ಹೊಸ ಕಾ-ಜಾ (ಕಾಂಗ್ರೆಸ್-ಜಾತ್ಯತೀತ ದಳ) ಸರ್ಕಾರದ ಮುಖ್ಯಮಂತ್ರಿಯಾಗುವಂತೆಯೂ ಮತ್ತು ಗೌಡರ ಸುಪುತ್ರ ಎಚ್.ಡಿ. ರೇವಣ್ಣ ಉಪಮುಖ್ಯಮಂತ್ರಿಯಾಗಬೇಕೆಂಬ ಖಡಕ್ ಪ್ರಸ್ತಾವನೆಯೊಂದು ಈಗ ಸೋನಿಯಾ ಟೇಬಲ್ ಮೇಲಿದೆ.



ಹಾಲಿ ಕೋ-ಜಾಗಳ ಮೈತ್ರಿ ಮುರಿದುಬಿದ್ದು ಗೌಡರು ಹಳೇ ಗೆಣೆಕಾರರನ್ನು ಹುಡುಕಿಕೊಂಡು ಹೊರಡಲು ಹಾಗೂ ಕಾಂಗ್ರೆಸ್‌ಗೂ ಇದು ಅನಿವಾರ್ಯವಾಗಿದೆ ಎನ್ನಲು ಅವರವರದ್ದೇ ನೂರೆಂಟು ಕಾರಣಗಳಿವೆ.

ಗೌಡರ ಲೆಕ್ಕಾಚಾರ


ಇನ್ನೈದು ತಿಂಗಳಿಗೆ ಬಿಜೆಪಿಯ ಯಡ್ಡಿಗೆ ಮುಖ್ಯಮಂತ್ರಿ ಕುರ್ಚಿ ಬಿಟ್ಟು ಕೊಡಬೇಕಿರುವ ಗೌಡರಿಗೆ ಆ ಬಗ್ಗೆ ಕಿಂಚಿತ್ತೂ ಸಮಾಧಾನವಿಲ್ಲ. ಜೆಡಿಎಸ್‌ನ ಕುಮಾರಸ್ವಾಮಿಯೇ ಮೊದಲಿಗೆ ಮುಖ್ಯಮಂತ್ರಿಯಾದಾಗಲೂ ಅವರಿಗೆ ದುಡ್ಡು ಕದಿಯಲು ಸಾಧ್ಯವಾಯಿತೇ ವಿನಃ ಜಾತ್ಯತೀತ ದಳ ಒಂದು ಪಾರ್ಟಿಯಾಗಿ ಉಳಿಯದೆ ಕರಗಲು ಶುರು ಮಾಡಿತ್ತು. ಜನರಿಗೂ ಸಹ ಜೆಡಿಎಸ್ ಅಂದರೆ ಗೌಡರ ಕುಟುಂಬದ ಆಸ್ತಿ ಅನ್ನಿಸಿತ್ತೇ ವಿನಃ ತಮ್ಮ ಪಾರ್ಟಿ ಅನ್ನಿಸಿರಲಿಲ್ಲ. ಈ ಮಧ್ಯೆ ಗೌಡರ ಮಕ್ಕಳು ತಮಗೆ ಸಿಕ್ಕುವಷ್ಟು ಹಣ ಕದ್ದುಕೊಳ್ಳಲಿ ಎಂದು ಗಮನಿಸಿದಂತೆ ಸುಮ್ಮನಾಗಿದ್ದ ಬಿಜೆಪಿಗಳು ತಾವೂ ಸಿಕ್ಕಷ್ಟು ಲೂಟಿ ಮಾಡಿಕೊಳ್ಳುತ್ತಾ ಜೊತೆಗೆ ಪಾರ್ಟಿ ಕಟ್ಟುತ್ತಾ, ಇಮೇಜ್ ಬೆಳೆಸಿಕೊಳ್ಳುತ್ತಲೂ ಹೋದರು. ಮೈತ್ರಿ ಕೂಟದ ಒಪ್ಪಂದ ಅರ್ಥಾತ್ ಕಾಮನ್ ಮಿನಿಮಂ ಪ್ರೋಗ್ರಾಂ ಏನೇ ಇದ್ದರೂ ತಮ್ಮ 'ಹಿಂದೂತ್ವ'ದ ಗಬ್ಬುನಾತ ಹರಡುವುದನ್ನಂತೂ ನಿಲ್ಲಿಸಲೇ ಇಲ್ಲ.

ಈಗ ಗೌಡರು ಹಿಂತಿರುಗಿ ನೋಡಿದರೆ ಜೆಡಿಎಸ್‌ನ ಸಾಧನೆಗಳೆಂದರೆ ರೆಡ್ಡಿ ಸಿಡಿ ಹಗರಣ, ರೇವಣ್ಣ, ಕುಮಾರಣ್ಣ, ಬಾಲಕೃಷ್ಣ, ಅನಿತಾ, ಕವಿತಾ, ಭವಾನಿಯರ ಅಕ್ರಮ ಆಸ್ತಿ ವಹಿವಾಟುಗಳಷ್ಟೇ ಜನರ ನೆನಪಿನಲ್ಲಿವೆ. ಆದರೆ ಅತ್ತ ಬಿಜೆಪಿಗೆ 'ಜನಪರ ಬಜೆಟ್ ಮಂಡಿಸಿದ ಯಡ್ಡಿ', 'ವಿಕಾಸ ಯಾತ್ರೆ', ಇತ್ಯಾದಿಗಳ ಕಿರೀಟ ಮೂಡಿಗೇರಿವೆ. ಇನ್ನು ಅದೇ ಪಾರ್ಟಿ ಮುಖ್ಯಮಂತ್ರಿ ಹುದ್ದೆ ಗಿಟ್ಟಿಸಿಬಿಟ್ಟರೆ ಜೆಡಿಎಸ್ ಸರ್ವನಾಶ ಖಚಿತ ಎಂಬುದು ಗೌಡರಿಗೀಗ ಮಾನವರಿಕೆಯಾಗಿಬಿಟ್ಟಿದೆ.

ಇದಿಷ್ಟೇ ಅಲ್ಲ

ರೆಡ್ಡಿ ಗಣಿ ಲಂಚ ಹಗರಣದ ವಿಚಾರಣೆ ಈಗ ಸುಪ್ರೀಂಕೋರ್ಟಿನಲ್ಲಿ ನಡೆಯುತ್ತಿದೆ. ಅದೇನಾದರೂ ಸಿಬಿಐ ಕೈಗೆ ಹೋದರೆ ತಮ್ಮ ಮಕ್ಕಳನ್ನು ರಕ್ಷಿಸಿಕೊಳ್ಳಲು ಗೌಡರಿಗೆ ಕೇಂದ್ರದ ಯುಪಿಎ ಸರ್ಕಾರದ ಕೃಪೆ ಬೇಕೇಬೇಕು.

ಈ ವಿಚಾರದಲ್ಲಿ ಬಿಜೆಪಿ ಕಿಸಿಯುವುದೇನೂ ಇಲ್ಲ. ಇಷ್ಟಲ್ಲದೆ ದೇವೇಗೌಡರಿಗೆ ವೈಯಕ್ತಿಕವಾಗಿ ತಮಗೆ ರಾಷ್ಟ್ರಮಟ್ಟದಲ್ಲಿ ಅಧಿಕಾರ ಪಡೆಯುವ ಇನ್ನೊಂದು ಅವಕಾಶವಿದೆ ಎಂಬ ಭೂತ ತಲೆ ಹೊಕ್ಕು ಕುಳಿತುಬಿಟ್ಟಿದೆ. ಮೊದಮೊದಲಿಗೆ ರಾಷ್ಟ್ರಪತಿ ಹುದ್ದೆ ಎಂಬ ಕನಸು ಬಿದ್ದಿತ್ತಾದರೂ ಈಗ ಬಿಜೆಪಿಯ ಬೈರೋನ್‌ಸಿಂಗ್ ಶೆಖಾವತ್ ಖಾಲಿ ಮಾಡಲಿರುವ ಉಪ ರಾಷ್ಟ್ರಪತಿ ಜಾಗ ಸಿಕ್ಕರೂ ಸಾಕೆಂಬ ನಿಲುವಿಗೆ ಅವರು ಬಂದುಬಿಟ್ಟಿದ್ದಾರೆ. ಹಾಗಾಗಬೇಕೆಂದರೆ ಕಾಂಗ್ರೆಸ್ ಒಪ್ಪಬೇಕಷ್ಟೆ.




ಕರ್ನಾಟಕದಲ್ಲಿ ಬಿಜೆಪಿ ಸಖ್ಯ ತೊರೆದು ಕಾಂಗ್ರೆಸ್ ನೇತೃತ್ವದ ಹೊಸ ಮೈತ್ರಿ ಸರ್ಕಾರ ಸೇರುವುದು, ಹಾಗೂ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್-ಬಿಜೆಪಿ ಹೊರತಾದ ತೃತೀಯ ರಂಗಕ್ಕೆ ಚಾಲನೆ ನೀಡುವ ಯತ್ನದಲ್ಲಿ ಕೈ ಜೋಡಿಸದಿರುವುದು. ಇವು ಹೊಸ ಮೈತ್ರಿಗಾಗಿ ಸದ್ಯಕ್ಕೆ ಗೌಡರು ಸೋನಿಯಾಗೆ ನೀಡಿರುವ ಭರವಸೆಗಳಾಗಿವೆ.

ಕಾಂಗ್ರೆಸ್ ಬಿಕ್ಕಟ್ಟುಗಳು

ಚುನಾವಣೆ ನಡೆಯುತ್ತಿರುವ ರಾಜ್ಯಗಳಲ್ಲೆಲ್ಲಾ ಸೋಲುತ್ತಿರುವ ಕಾಂಗ್ರೆಸ್ ಈಗ ನಿಜಕ್ಕೂ ಬಿಕ್ಕಟ್ಟಿನಲ್ಲಿದೆ. ರಾಷ್ಟ್ರಮಟ್ಟದಲ್ಲಿ ಬಿಜೆಪಿಯೆ ಅದಕ್ಕಿರುವ ಏಕೈಕ ಪ್ರತಿಸ್ಪರ್ಧಿಯಾದರೂ ಪ್ರಾದೇಶಿಕ ಪಕ್ಷಗಳು ಮತ್ತೆ ಚಿಗುರಿಕೊಳ್ಳುತ್ತಿರುವುದಂತೂ ಕಾಂಗ್ರೆಸ್ ಅನ್ನು ಬಹಳ ದುರ್ಬಲಗೊಳಿಸುತ್ತಿದೆ. ಆಂಧ್ರ ಹಾಗೂ ದೆಹಲಿ ಬಿಟ್ಟರೆ ಕಾಂಗ್ರೆಸ್ ನೇರ ಆಳ್ವಿಕೆ ಇರುವ ದೊಡ್ಡ ರಾಜ್ಯಗಳು ಕಾಣುತ್ತಲೇ ಇಲ್ಲ. ಉಳಿದೆಡೆ ವಿಜೃಂಭಿಸುತ್ತಿರುವ ಬಹುಪಾಲು ಪ್ರಾದೇಶಿಕ ಪಕ್ಷಗಳು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದೊಳಗಿವೆ.



ಸೋನಿಯಾಗೆ ಚಿಂತೆಯಾಗಿರುವುದು ಈ ಬೆಳವಣಿಗೆಗಳೇನೆ. ದೇವೇಗೌಡ ಏನೇ ಮೋಸ ಮಾಡಿ ಕೈಕೊಟ್ಟು ಹೋಗಿದ್ದರೂ ಅಂತಾದ್ದನ್ನೆಲ್ಲಾ ನೆನೆದು ದ್ವೇಷ ಸಾಧಿಸುವಷ್ಟು ಸುಸ್ಥಿತಿ ಈಗ ಕಾಂಗ್ರೆಸ್‌ಗಿಲ್ಲ. ಕರ್ನಾಟಕದಲ್ಲಿ ಸ್ವತಃ ಧರಂಸಿಂಗ್, ಖರ್ಗೆಗಳಿಗೆ ಗೌಡರ ಜೊತೆಗಿನ ಮೈತ್ರಿ ಬಗ್ಗೆ ಯಾವುದೇ ಆಕ್ಷೇಪಣೆಯಿಲ್ಲ. ಇನ್ನು ಎಸ್.ಎಂ. ಕೃಷ್ಣ ಡಿ.ಕೆ. ಶಿವಕುಮಾರ್, ಸಿದ್ಧರಾಮಯ್ಯ ಈ ಪ್ರಯತ್ನ ವಿರೋಧಿಸಿದರೂ ರಾಷ್ಟ್ರ ರಾಜಕಾರಣವೆಂಬ ಮಹಾ ಚದುರಂಗದಾಟದಲ್ಲಿ ಇವರೆಲ್ಲಾ ಕಾಲಾಳುಗಳ ಲೆಕ್ಕಕ್ಕೂ ಬರುವುದಿಲ್ಲ ಎಂಬುದು ಸ್ವತಃ ಅವರಿಗೂ ಗೊತ್ತಿದೆ. ಕಾಂಗ್ರೆಸ್ ಹೈಕಮಾಂಡಿಗೀಗ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬಿಜೆಪಿಯನ್ನು ದುರ್ಬಲಗೊಳಿಸಬೇಕಿದೆ ಹಾಗೂ ಅಧಿಕಾರದಿಂದ ದೂರವಿಡಬೇಕಿದೆ. ಏನೇ ಆಗಲಿ ಈ ಬಗ್ಗೆ ಅಂತಿಮ ನಿರ್ಧಾರ ಆಗುವುದು ಮೇ ಮೊದಲ ವಾರದ ಉತ್ತರ ಪ್ರದೇಶ ಚುನಾವಣಾ ಫಲಿತಾಂಶ ಬಂದ ನಂತರ ಮಾತ್ರ. ಬಿಜೆಪಿಯ ಎನ್‌ಡಿಎ ಹಾಗೂ ಕಾಂಗ್ರೈನ ಯುಪಿಎ ಮೈತ್ರಿಕೂಟಕ್ಕೆ ಹೊರತಾದ ತೃತೀಯ ರಂಗ ಅಂತಾ ಏನಾದರೂ ತಲೆ ಎತ್ತಲು ಶುರುವಾಗಿಬಿಟ್ಟರೆ ಅದರ ಪೂರ್ತಿ ಪೆಟ್ಟು ಬೀಳುವುದೇ ಕಾಂಗ್ರೆಸ್‌ಗೆ. ಏಕೆಂದರೆ ಗೌಡರ ಜಾತ್ಯತೀತ ದಳ, ನಾಯ್ಡುನ ತೆಲುಗು ದೇಶಂ, ತೆಲಂಗಾಣ ರಾಷ್ಟ್ರ ಸಮಿತಿ, ಶರದ್‌ಪವಾರರ ಎನ್‌ಸಿಪಿ, ಮುಲಾಯಂರ ಸಮಾಜವಾದಿ ಪಾರ್ಟಿ, ಮಾಯವತಿಯ ಬಿಎಸ್‌ಪಿ, ಲೋಕದಳ, ನ್ಯಾಷನಲ್ ಕಾನ್‌ಫರೆನ್ಸ್, ಅಸ್ಸಾಂ ಗಣ ಪರಿಷತ್ ಕೊನೆಗೆ ಡಿಎಂಕೆ, ಎಐಡಿಎಂಕೆಗಳು ತಮ್ಮದೇ ಲಾಭ ನಷ್ಟ ಲೆಕ್ಕ ಹಾಕಿ ತೃತೀಯ ರಂಗಕ್ಕೆ ಚಾಲನೆ ನೀಡೇಬಿಟ್ಟರೆ ಅಲ್ಲಿಗೆ ಕಾಂಗ್ರೆಸ್ ಕತೆ ಮುಗಿದಂತೆ. ಹಾಗಾಗಿ ಶತ್ರುವೋ ಇಲ್ಲಾ ಮಿತ್ರನೋ ಯಾರೇ ಆಗಿರಲಿ ಮತ್ತೆ ಕಾಂಗ್ರೆಸ್ ಜೊತೆ ಕೈ ಜೋಡಿಸಲು ಬಂದರೆ ಬೇಡ ಎನ್ನುವ ಸ್ಥಿತಿಯಲ್ಲಿ ಸೋನಿಯಾರಂತೂ ಇಲ್ಲ. ಇತ್ತ ದೇವೇಗೌಡರಿಗೆ ತಮ್ಮದೇ ಕಾರಣಗಳಿಂದಾಗಿ ಇನ್ನು ಮುಂದೆ ಬಿಜೆಪಿಗಿಂತಾ ಕಾಂಗ್ರೆಸ್ ಜೊತೆ ಸೇರುವುದೇ ಲಾಭಕರ ಎಂದು ಖಚಿತಪಟ್ಟಿರುವ ಕಾರಣ ಕೋ-ಜಾ ಡೈವೋರ್ಸ್ ಗ್ಯಾರಂಟಿ ಎಂಬಂತಾಗಿ ಹೋಗಿದೆ.



-ಬಿಳಿದಾಳೆ ಈಶ

ಡೈವೋರ್ಸಿಗೆ ಉಳ್ಳಾಲದಲ್ಲಿ ಮುಹೂರ್ತ

ಕಂಡವರ ಮನೆಗಳಿಗೆ ರಾತ್ರಿ ಹೊತ್ತು ಹೋಗಿ ಮಲಗಿಬರುವ ದುರಭ್ಯಾಸ ಬೆಳೆಸಿಕೊಂಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿ ಇತ್ತೀಚೆಗೆ ಹೋಗಿ ಬಂದಿದ್ದು ಕರಾವಳಿಯ ಮೇಲಂಗಡಿಯ ಖತೀಜಮ್ಮರ ಮನೆಗೆ. ಇದು ಉಳ್ಳಾಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಗ್ರಾಮ ಮತ್ತು ಶಾಸಕ ಫರೀದ್ ನಿಧನದಿಂದ ಶೀಘ್ರದಲ್ಲೇ ಇಲ್ಲಿ ಮರು ಚುನಾವಣೆ ನಡೆಯಲಿದೆ ಎಂಬುದೂ ಗಮನಾರ್ಹ.

ಬಿಜೆಪಿ-ಜೆಡಿಎಸ್ ಡೈವೋರ್ಸ್‌ಗೂ ಈ ಮರು ಚುನಾವಣೆಗೂ ಕೊಂಚ ಲಿಂಕ್ ಇರುವಂತಿದೆ. ಉಳ್ಳಾಲಕ್ಕೆ ಬಂದ ಕುಮಾರಸ್ವಾಮಿ ಪಕ್ಷದ ಕಾರ್ಯಕರ್ತರಿಗೆ "ಕೋಮುವಾದಿಗಳಿಗೆ (ಹಿಂದೂತ್ವವಾದಿಗಳಿಗೆ) ಒದ್ದು ಪಾಠ ಕಲಿಸಿ," ಎಂದು ಕರೆ ಕೊಟ್ಟರು. ಮಜಾ ವಿಚಾರ ಏನೆಂದರೆ ಚಾಮುಂಡೇಶ್ವರಿ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದ ಬಿಜೆಪಿ ಈಗ ಉಳ್ಳಾಲವನ್ನು ತನಗೆ ಬಿಟ್ಟುಕೊಡುವಂತೆ ಅಲ್ಲಿ ಜೆಡಿಎಸ್ ಅಭ್ಯರ್ಥಿ ಹಾಕದಂತೆ ಒತ್ತಾಯಿಸುತ್ತಿದೆ. ಆದರೆ ಉಪಚುನಾವಣೆ ಸಮೀಪಿಸುತ್ತಿರುವಾಗಲೇ ಕುಮಾರಸ್ವಾಮಿ ಉಳ್ಳಾಲಕ್ಕೆ ಹೋಗಿಬಂದಿರುವುದು, ಜೊತೆಗೆ ಮುಸ್ಲಿಂ ಶಾಸಕ ಜಮೀರ್ ಅಹ್ಮದ್‌ರನ್ನು ಕರೆದುಕೊಂಡು ಹೋಗಿ 'ಕೋಮುವಾದಿಗಳ ವಿರುದ್ಧ ಗುಟುರು ಹಾಕಿರುವುದೇ' ಬಿಜೆಪಿ ಜೊತೆಗಿನ ಮೈತ್ರಿ ಮುರಿದು ಬೀಳುವ ಸಾಧ್ಯತೆ ತೋರಿಸುತ್ತಿಲ್ಲವೆ. ಮತ್ತೊಂದೆಡೆ ದೇವೇಗೌಡರು ಪದೇಪದೇ ಬಿಜೆಪಿಯ ಹದ್ದು ಮೀರಿದ ವರ್ತನೆ ಬಗ್ಗೆ ಎಚ್ಚರಿಕೆ ನೀಡುತ್ತಿರುವುದೂ ಸಹ ಅವರು ಏನಾದರೂ ಬಲವಾದ ನೆಪ ಹುಡುಕಿ ಬಿಜೆಪಿಯಿಂದ ದೂರವಾಗಲು ನೋಡುತ್ತಿದ್ದಾರೆ ಎಂಬಂತಿದೆ.



ಖತೀಜಮ್ಮನ ಮನೆಯಲ್ಲಿ ನಿದ್ರೆ ರಾಜಕೀಯ

ಬಹುಶಃ ಉಳ್ಳಾಲ ಉಪಚುನಾವಣೆಯಲ್ಲೇ ಈ ಡೈವೋರ್ಸ್‌ಗೆ ಮುಹೂರ್ತವಾಗಲಿದೆ. •

ಪ್ರಕಾಶ್-ಸಿದ್ಧರಾಮಯ್ಯ ಅತಂತ್ರ ಸ್ಥಿತಿ

ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಗೃಹ ಸಚಿವ ಎಂ.ಪಿ. ಪ್ರಕಾಶ್‌ಗೆ ಕಾಂಗ್ರೆಸ್-ದಳ ಪುನರ್ ಮೈತ್ರಿಯ ವಾಸನೆ ಸಿಕ್ಕದ್ದಕ್ಕೇ ಈಗ ರಾಜಕೀಯ ಸನ್ಯಾಸದ ಮಾತಾಡುತ್ತಿದ್ದಾರೆ. ಇದು ಕೇವಲ ಸಿದ್ಧಾಂತದ ವಿಚಾರವಲ್ಲ. ಏಕೆಂದರೆ ಪ್ರಕಾಶ್‌ಗೀಗ ಯಾವ ಸಿದ್ಧಾಂತವೂ ಇಲ್ಲ. ಅದರ ಬದಲಾಗಿ ಕಾಂಗ್ರೈ-ದಳ ಸರ್ಕಾರ ರಚನೆಯಾದರೆ ಆಸ್ಕರ್ ಫರ್ನಾಂಡಿಸ್ ಮುಖ್ಯಮಂತ್ರಿಯಾಗಿಯೂ ದಳದ ರೇವಣ್ಣ ಉಪಮುಖ್ಯಮಂತ್ರಿಯಾಗಬೇಕೆಂತಲೂ ಗೌಡ ಪ್ರಸ್ತಾವನೆ ಇಟ್ಟಿದ್ದಾರೆ. ಒಮ್ಮೆ ಉಪಮುಖ್ಯಮಂತ್ರಿಯಾಗಿ ನಂತರ ಸಿಎಂ ಕ್ಯಾಂಡಿಡೇಟ್ ಎನಿಸಿಕೊಂಡಿದ್ದ ಪ್ರಕಾಶ್ ತಮ್ಮೆದುರು ಬಾಲಕನಂತಿದ್ದ ರೇವಣ್ಣನ ಕೈಕೆಳಗೆ ಮುಂದೆ ಆರ್ಡಿನರಿ ಮಂತ್ರಿಯಾಗಿ ಮುಂದುವರೆಯಬೇಕಾಗುತ್ತದೆ. ಆ ಅವಮಾನ ನೆನೆಸಿಕೊಂಡೇ ಕುದ್ದು ಹೋಗುತ್ತಿರುವ ಪ್ರಕಾಶ್ ಬೇರೆ ದಾರಿ ಕಾಣದೆ ರಾಜಕೀಯ ನಿವೃತ್ತಿ ವಿಚಾರ ಹೇಳಿದ್ದಾರೆ. ಆದರೆ ದೇವೇಗೌಡ ಎಂತಾ ಒರಟು ಮನುಷ್ಯನೆಂದರೆ 'ಪ್ರಕಾಶ್ ಹೋದರೆ ನಷ್ಟವೇನಿಲ್ಲ. ಬೇಕಿದ್ದವರು ಇರಬಹುದು. ಬೇಡವಾದವರು ತೊಲಗಬಹುದು' ಎಂದು ಪ್ರಕಾಶ್‌ಗೇ ಮುಖಭಂಗ ಮಾಡಿದ್ದಾರೆ.


ಬೆನ್ನೆಲುಬಿಲ್ಲದ, ಸ್ವಂತ ತಾಕತ್ತಿರದ ಯಾರಿಗೂ ಗೌಡ ಬೆಲೆ ಕೊಡುವುದಿಲ್ಲ ಎಂಬುದು ಪ್ರಕಾಶ್ ವಿಚಾರದಲ್ಲಿ ಮತ್ತೆ ಸಾಬೀತಾಗಿಲ್ಲವೆ? •

ಎಚ್‌ಕೆ-ರೇವಣ್ಣ ಗೋವಾದಲ್ಲಿ ರಹಸ್ಯ ಸಭೆ!

ಈ ದೇವೇಗೌಡ ಅಂಡ್ ಸನ್ಸ್ ಯಾರ್‍ಯಾರಿಗೆ ಯಾವ ಗಾಳ ಹಾಕುತ್ತಾರೋ ಹೇಳಲಿಕ್ಕೆ ಅಸಾಧ್ಯ. ಕಾಂಗ್ರೆಸ್ ಜೊತೆ ಮತ್ತೆ ಮೈತ್ರಿಯಾಗಬೇಕು ಎಂದು ನಿರ್ಧರಿಸಿಕೊಂಡ ನಂತರ ಗೌಡ ಮೊದಲಿಗೆ ಸಂಪರ್ಕ ಏರ್ಪಡಿಸಿಕೊಂಡಿದ್ದು ಕೋಲಾರದ ಸಂಸದ ಹಾಗೂ ಕೇಂದ್ರ ಸಚಿವ ಕೆ.ಎಚ್. ಮುನಿಯಪ್ಪ ಜೊತೆ. ಈ ಮೂಲಕ ಸೋನಿಯಾ ಆಪ್ತ ಕಾರ್ಯದರ್ಶಿ ಅಹ್ಮದ್ ಪಟೇಲರನ್ನು ತಲುಪಿದ ಗೌಡಾಗೆ ನಂತರ ಸೋನಿಯಾ ಭೇಟಿಯಾಗುವುದೇನು ಕಷ್ಟವಾಗಲಿಲ್ಲ.

ಕಾಂಗ್ರೆಸ್ ಹೈಕಮಾಂಡ್ ಜೊತೆ ಏನು ಮಾತಾಡಬೇಕೊ ಅದನ್ನೆಲ್ಲಾ ನಡೆಸುತ್ತಲೇ ಇತ್ತ ಕರ್ನಾಟಕದಲ್ಲಿ ತಮ್ಮ ಪರ ಹಾಗೂ ವಿರೋಧಿಗಳ್ಯಾರೆಂದು ವಿಂಗಡಿಸಿ ಪಳಗಿಸುವ ತಂತ್ರವೊಂದು ಈಗ ಚಾಲ್ತಿಯಲ್ಲಿವೆ.

ಹಿರಿಯ ಕಾಂಗ್ರೈ ನಾಯಕ ಎಚ್.ಕೆ. ಪಾಟೀಲ್ ಹಾಗೂ ಮುಂದಿನ ಭಾವೀ ಡಿಸಿಎಂ ರೇವಣ್ಣ ಗೋವಾದಲ್ಲಿ ಎರಡು ಬಾರಿ ರಹಸ್ಯವಾಗಿ ಭೇಟಿಯಾಗಿ ಮಾತುಕತೆ ನಡೆಸಿರುವುದೂ ಇದರಲ್ಲಿ ಸೇರಿದೆ. ರಾಜ್ಯ ಕಾಂಗ್ರೆಸ್‌ನ ಕೆಲ ಲೀಡರ್‌ಗಳಿಗೂ ಇತ್ತೀಚೆಗೆ ಈ ವಿಚಾರ ಗೊತ್ತಾಗಿದೆ. ಎಚ್ಕೆ ಸಿಎಂ ಹುದ್ದೆ ಆಕಾಂಕ್ಷಿಯಾಗಿರುವುದು ಹಾಗೂ ಗೌಡರ ಶತ್ರುಗಳಾದ ಎಸ್.ಎಂ. ಕೃಷ್ಣ ಡಿ.ಕೆ. ಬಣದ ವಿರೋಧಿಯಾಗಿರುವುದು ಹಾಗೂ ಪ್ರಬಲ ಲಿಂಗಾಯತರ ಲೀಡರ್ ಎಂಬುದು ಸಹ ರೇವಣ್ಣ ಎಚ್ಕೆ ಭೇಟಿ ಹಿನ್ನೆಲೆಯಲ್ಲಿದೆ. ಲಿಂಗಾಯತರಾದ ಯಡಿಯೂರಪ್ಪನಿಗೆ ಮುಖ್ಯಮಂತ್ರಿ ಹುದ್ದೆ ತಪ್ಪಿಸಿದರೆಂಬ ಆರೋಪ ಗೌಡರ ತಲೆಗೆ ಸುತ್ತಿಕೊಳ್ಳಬಾರದೆಂದರೆ ಅದೇ ಲಿಂಗಾಯತರ ಕಾಂಗ್ರೆಸ್ ಲೀಡರ್ ಎಚ್.ಕೆ. ಪಾಟೀಲರನ್ನೇ ಸಿಎಂ ಆಗಿಸುವ ಮೂಲಕ ತಾವು ಆರೋಪಮುಕ್ತರಾಗಬಹುದಲ್ಲವೇ ಎಂಬುದು ಗೌಡರ ಲೆಕ್ಕಾಚಾರ.



ರೇವಣ್ಣ-ಎಚ್ಕೆಗಳ ಗೋವಾ ಸೀಕ್ರೆಟ್ ಮೀಟಿಂಗ್‌ನಲ್ಲಿ ಚರ್ಚೆಯಾಗಿರುವುದೂ ಇದೇನೆ. ಆದರೆ ಕಾಂಗ್ರೆಸ್ ಹೈಕಮಾಂಡಿಗೆ ಮೊದಲು ಆಸ್ಕರ್ ಸಿಎಂ ಆದರೆ ಹೇಗೆ ಎಂಬ ಯೋಚನೆ ಇತ್ತು. ಈಗಲೂ ಇದೆ. ಆಸ್ಕರ್ ಲಿಂಗಾಯತ, ಒಕ್ಕಲಿಗ, ದಲಿತ, ಹೀಗೆ ಯಾವ ಪ್ರಬಲ ಕೋಮಿಗೂ ಸೇರಿರದ ಹಾಗೂ ಶತ್ರುಗಳಿರದ ವ್ಯಕ್ತಿ ಎಂಬುದೇ ಇದಕ್ಕೆ ಕಾರಣವಾಗಿತ್ತು. ಆದರೆ ಬಿಜೆಪಿ ಸುಮ್ಮನಿರಬೇಕಲ್ಲ. ಆಸ್ಕರ್ ಕ್ರಿಶ್ಚಿಯನ್ ಎಂಬುದನ್ನೇ ನೆಪ ಮಾಡಿಕೊಂಡು, ಆಂಧ್ರದಲ್ಲಿ ರಾಜಶೇಖರರೆಡ್ಡಿ ಕರ್ನಾಟಕದಲ್ಲಿ ಆಸ್ಕರ್.... ಹೀಗೆ ಸೋನಿಯಾ ಕ್ರಿಶ್ಚಿಯನ್ನರಿಗೇ ಆದ್ಯತೆ ನೀಡುತ್ತಿದ್ದಾರೆಂದು ಹೊಸ ಕ್ಯಾತೆ ತೆಗೆಯಲು ಅದು ರೆಡಿಯಾಗಿದೆ.

ಈ ಹಿನ್ನೆಲೆಯಲ್ಲಿ ಗೌಡಾಗೂ ಎಚ್.ಕೆ. ಪಾಟೀಲರೇ ಸಿಎಂ ಆಗಲಿ ಎಂದಿದೆ.

ಎಚ್.ಕೆ. ಇದಕ್ಕೆ ಒಪ್ಪುತ್ತಾರಾ? ಅಧಿಕಾರ ಸಿಗುವುದಾದರೆ, ಸೋನಿಯಾ ಒಪ್ಪಿದರೆ ಅವರೇಕೆ ಬೇಡಾ ಎಂದಾರು ಬಿಡಿ.

ಪೊಲೀಸರು ನಡೆಸುವ ಎನ್‌ಕೌಂಟರ್‌ಗಳೆಲ್ಲವೂ ಅಸಲಿ ಆಗಿರುವುದಿಲ್ಲ ಎನ್ನಲು ಈಗ ಮತ್ತೊಂದು ಸಾಕ್ಷಿ ಇಲ್ಲಿದೆ. ಕರ್ನಾಟಕದ ಹಿರಿಯ IPS ಅಧಿಕಾರಿ ಕೆಂಪಯ್ಯನವರ ಅಳಿಯ ಕೋಲಾರದ ದಿನೇಶ್ ಕುಮಾರ್ ರಾಜಸ್ಥಾನ ರಾಜ್ಯದಲ್ಲಿ IPS ಆಫೀಸರ್ ಆಗಿದ್ದ. ಈತ ಹಾಗೂ ಗುಜರಾತಿನ ಇನ್ನಿಬ್ಬರು ಪೊಲೀಸ್ ಆಫೀಸರ್‌ಗಳು ಸೇರಿಕೊಂಡು ಸೊಹ್ರಾಬುದ್ದೀನ್ ಎಂಬ ಒಬ್ಬ ಮಾಮೂಲಿ ಕ್ರಿಮಿನಲ್‌ನನ್ನು ಅರೆಸ್ಟ್ ಮಾಡಿ ಟೆರರಿಸ್ಟ್ ಲೇಬಲ್ ಹಚ್ಚಿ ಗುಂಡಿಟ್ಟು ಕೊಂದಿದ್ದಾರೆ. ಅವನ ಹೆಂಡತಿ ಕೌಸರ್ ಬಿಯನ್ನು ರೇಪ್ ಮಾಡಿ ಕೊಂದು, ಹೆಣ ಕೂಡ ಸಿಗದಂತೆ ಸುಟ್ಟು ಹಾಕಲಾಗಿದೆ. ಕೆಲ ತಿಂಗಳ ಹಿಂದೆ ಕಾಶ್ಮೀರದಲ್ಲಿ ಮಿಲಿಟರಿಯವರೂ ಅಮಾಯಕ ಮುಸ್ಲಿಂ ಮರದ ವ್ಯಾಪಾರಿಯೊಬ್ಬನನ್ನು ಪ್ರಶಸ್ತಿ, ಪ್ರಮೋಷನ್ ಹಾಗೂ ನಗದು ಬಹುಮಾನದ ಆಸೆಗಾಗಿ ಕೊಂದು ಸಿಕ್ಕಿಬಿದ್ದಿದ್ದಾರೆ. ಈಗ ಕನ್ನಡಿಗ IPS ದಿನೇಶ್ ಗುಜರಾತಿನಲ್ಲಿ ಅಂತದ್ದೇ ದುಷ್ಕೃತ್ಯವೆಸಗಿ ಸಿಕ್ಕು ಜೈಲು ಪಾಲಾಗಿದ್ದಾನೆ. ಈ ಬಗ್ಗೆ ವಿವರಗಳಿರುವ ವರದಿ ಇದು....



ಕೆಂಪಯ್ಯ

ಕೆಂಪಯ್ಯನ ಅಳಿಯ ಕೊಲೆ ಮಾಡಿದನಾ?

ಬಿದುಕೆಂಬುದು ಎಂತಹ ಜೋಕಾಲಿ ನೋಡಿ. ಇಲ್ಲಿ ಸುಖ ಮತ್ತು ನೆಮ್ಮದಿ ಒಮ್ಮೆ ಬಂದರೆ ಇನ್ನೊಮ್ಮೆ ದುಃಖ ಮತ್ತು ದುರಾದೃಷ್ಟ ಅಪ್ಪಳಿಸಿಕೊಂಡು ಬರುತ್ತದೆ. ಇದಕ್ಕೆ ಕರ್ನಾಟಕದ ಖ್ಯಾತ-ಕುಖ್ಯಾತ ಐಪಿಎಸ್ ಅಧಿಕಾರಿ ಕೆಂಪಯ್ಯನವರ ಜೀವನದಲ್ಲಾಗಿರುವ ಏರುಪೇರುಗಳೇ ಸಾಕ್ಷಿ!

ತಮ್ಮ ವೃತ್ತಿ ಜೀವನದಲ್ಲಿ ಕೆಂಪಯ್ಯನವರು ಒಂದೆಡೆ ಪ್ರಶಸ್ತಿ ಪಡೆದಿದ್ದರೆ, ಇನ್ನೊಂದೆಡೆ ಘೋರ ಆರೋಪಗಳಿಗೂ ತುತ್ತಾಗಿದ್ದಾರೆ. ಈಗ ಅವರಂತೆಯೇ ಅವರ ಏಕೈಕ ಅಳಿಯ, ಕೋಲಾರ ಜಿಲ್ಲೆಯ ಎಂ.ಎನ್. ದಿನೇಶ್‌ಕುಮಾರ್ ಕೂಡ ಒಂದೆಡೆ ದಕ್ಷ ಅಧಿಕಾರಿ ಅನ್ನಿಸಿಕೊಳ್ಳುತ್ತಲೇ, ಇನ್ನೊಂದು ಕಡೆ ಕೊಲೆಯಂತಹ ಪಾತಕ ಕೃತ್ಯದಲ್ಲಿ ಪಾಲ್ಗೊಂಡಿದ್ದಾನೆಂಬ ಆರೋಪ ಹೊತ್ತು ಈಗ ಬಂಧನಕ್ಕೆ ಒಳಗಾಗಿದ್ದಾನೆ.

ತಾನಾಗೇ ಬರುವ ಅದೃಷ್ಟ ಮತ್ತು ತಾವಾಗಿಯೇ ಆಹ್ವಾನಿಸಿಕೊಳ್ಳುವ ದುರಾದೃಷ್ಟ ಎಂದರೆ ಇದೇ ಅಲ್ಲವೇ?

ಸ್ವತಃ ಕಿತ್ತು ತಿನ್ನುವ ಬಡತನದಲ್ಲಿ ಬೆಳೆದ ಕೆಂಪಯ್ಯ ಚಿಕ್ಕವರಾಗಿದ್ದಾಗ ಹೋಟೆಲ್‌ಗಳಲ್ಲಿ ಮುಸುರೆ ತೊಳೆಯುತ್ತಾ ಓದಿದವರು. ಯಾರದೋ ನೆರವು, ಇನ್ಯಾರದ್ದೋ ಸಹಾಯ ಪಡೆಯುತ್ತಾ ಸ್ವಂತ ಛಲದಿಂದ UPSC ಪರೀಕ್ಷೆ ಪಾಸ್ ಮಾಡಿ ಐಪಿಎಸ್ ಅಧಿಕಾರಿ ಆದವರು. ಹಿಂದುಳಿದ ವರ್ಗದಿಂದ ಬಂದಿದ್ದ ಕೆಂಪಯ್ಯ ನವರು ತಮ್ಮ ಸಾಧನೆಯಿಂದ ಮತ್ತು ದಕ್ಷತೆಯಿಂದ ಜನರ ಮೆಚ್ಚುಗೆ ಪಡೆದವರು. ಇದೆಲ್ಲದಕ್ಕೆ ಕಲಶವಿಟ್ಟಂತಿತ್ತು ರಾಜೀವ್ ಗಾಂಧಿಯನ್ನು ಹತ್ಯೆಗೈದಿದ್ದ ಎಲ್‌ಟಿಟಿಇ ಶಿವರಸನ್ ಮತ್ತು ಶುಭಾರನ್ನು ಬೆಂಗಳೂರಿನ ಸಮೀಪದ ಕೋಣನಕುಂಟೆಯಲ್ಲಿ ಕೆಂಪಯ್ಯ ಸೆರೆ ಹಿಡಿದದ್ದು.


ಆದರೆ ಅಲ್ಲಿಯವರೆಗೂ ಅವಿತು ಕೊಂಡಿದ್ದ ಅವರ ಜೀವನದಲ್ಲಿನ ಶನಿ ಎಚ್ಚರಗೊಂಡು ದಾಳಿ ಇಟ್ಟಿದ್ದೇ ಆವಾಗ. ತಮ್ಮ ಆದಾಯಕ್ಕೂ ಮೀರಿ ಹೆಚ್ಚಿನ ಆಸ್ತಿಯನ್ನು ಸಂಪಾದಿಸಿದ್ದಾರೆ ಎಂಬ ಆರೋಪದ ಮೇಲೆ ಲೋಕಾಯುಕ್ತರು ಕೆಂಪಯ್ಯನ ಮನೆ ಮೇಲೆ ದಾಳಿ ಇಟ್ಟರು. ಅದೇ ಹೊತ್ತಿಗೆ ಕೆಂಪಯ್ಯ ಹಿಂದುಳಿದ ವರ್ಗದ ಕುರುಬ ಸಮುದಾಯದಿಂದ ಬಂದಿದ್ದರೂ UPSC ಪರೀಕ್ಷೆ ತೆಗೆದುಕೊಳ್ಳುವಾಗ ತಾವು ಪರಿಶಿಷ್ಟ ವರ್ಗವಾದ ಜೇನು ಕುರುಬ ಸಮುದಾಯಕ್ಕೆ ಸೇರಿದ್ದೇನೆಂದು ಸುಳ್ಳು ಪ್ರಮಾಣಪತ್ರ ನೀಡಿದ್ದರೆಂದು ಯಾರೋ ಆರೋಪ ಕೂಡ ಮಾಡಿದರು.

ಒಂದೆಡೆ ಭ್ರಷ್ಟಾಚಾರದ ಆರೋಪದ ಮೇಲೆ ಲೋಕಾಯುಕ್ತರ ದಾಳಿ, ಇನ್ನೊಂದೆಡೆ ಸುಳ್ಳು ಜಾತಿಪತ್ರ ನೀಡಿದ್ದಾರೆಂಬ ಗುರುತರ ಆರೋಪ....

ಇದೆಲ್ಲವನ್ನು ಅದು ಹೇಗೊ ನಿಭಾಯಿಸಿದರು ಕೆಂಪಯ್ಯ. ಸುಮಾರು ಇದೇ ಹೊತ್ತಿಗೆ ಅವರ ಹೆಸರಿನಲ್ಲೇ ನಿರ್ಮಾಣಗೊಂಡ 'ಐಪಿಎಸ್ ಕೆಂಪಯ್ಯ' ಎಂಬ ಸಿನಿಮಾ ಬಂದು ಸಾರ್ವಜನಿಕರ ಮುಂದೆ ಅವರ ಮಾನವನ್ನು ಒಂದಿಷ್ಟು ಕಾಪಾಡಿತ್ತು.

ಈ ಎಲ್ಲ ವಾದ-ವಿವಾದಗಳ ನಡುವೆಯೂ ಕೆಂಪಯ್ಯ ಯಾವುದೇ ಹಿಂಬಡ್ತಿ ಅಥವಾ 'ಶಿಕ್ಷೆ ವರ್ಗಾವಣೆ'ಯನ್ನು ಅನುಭವಿಸದೇ ಪ್ರಮುಖ ಹುದ್ದೆಗಳನ್ನೇ ಅಲಂಕರಿಸುತ್ತಾ ಬಂದರು. ಇದರಲ್ಲಿ ಅವರಿಗೆ ರಾಜಕೀಯವಾಗಿ ನೆರವಾದವರು ಮಾಜಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಾಂಸ್ಕೃತಿಕವಾಗಿ ನೆರವಾದವರು ವರನಟ ರಾಜ್‌ಕುಮಾರ್ ಮತ್ತು ಅವರ ಸಂಸಾರದವರು. ಎಷ್ಟರಮಟ್ಟಿಗೆ ಎಂದರೆ ಸಿದ್ದರಾಮಯ್ಯನವರು ಕೆಂಪಯ್ಯನವರಿಗೆ ಮೈಸೂರಿನ ಪೊಲೀಸ್ ಕಮೀಷನರ್ ಹುದ್ದೆ ದಯಪಾಲಿಸಿದರೆ, ರಾಜ್ ಮನೆಯವರ ನಿಕಟ ಸಂಪರ್ಕ ಹೊಂದಿದ್ದ ಕೆಂಪಯ್ಯ ರಾಜ್ ಹೆಸರಿನಲ್ಲೇ ಮೈಸೂರಿನಲ್ಲಿ ಒಂದು ಸಂಸ್ಥೆಯನ್ನು ಕಟ್ಟಿದರು. ಆ ಸಂಸ್ಥೆಯನ್ನು ಸ್ಥಾಪಿಸಲು ಬೇಕಿದ್ದ ಹಣವನ್ನು ಸಂಗ್ರಹಿಸಲು ಸ್ವತಃ ರಾಜ್‌ಕುಮಾರ್‌ರವರೇ ಒಂದು ಮನರಂಜನಾ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಇಂತಹ ಕೆಂಪಯ್ಯನವರ ಬದುಕು ಇವತ್ತು ಮತ್ತೊಂದು ಬಿಕ್ಕಟ್ಟಿನ ಸಂದರ್ಭದಲ್ಲಿ ಸಿಲುಕಿದೆ. ಅದಕ್ಕೆ ಕಾರಣವಾಗಿರುವವನು ಅವರ ಏಕೈಕ ಮಗಳ ಕೈಹಿಡಿದಿರುವ ಎಂ.ಎನ್. ದಿನೇಶ್‌ಕುಮಾರ್ ಎಂಬ ಐಪಿಎಸ್ ಅಧಿಕಾರಿ.



ದಿನೇಶ್ ಕುಮಾರ್


ಎಲ್ಲಕ್ಕಿಂತಲೂ ಘೋರವಾದದ್ದು ಎನೆಂದರೆ ಇವತ್ತು ದಿನೇಶ್‌ಕುಮಾರ್ ಕೊಲೆ ಆರೋಪವನ್ನು ಎದುರಿಸುತ್ತಿದ್ದಾನಲ್ಲದೆ, ಈಗ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಆತನನ್ನು ಬಂಧನದಲ್ಲಿರಿಸಿದೆ.

ಇದನ್ನು ಕೇಳಿ ತಕ್ಷಣವೇ ಗುಜರಾತಿಗೆ ಹಾರಿ ಹೋಗಿರುವ ಕೆಂಪಯ್ಯನವರ ಜೀವನ ಎಂಬ ಜೋಕಾಲಿ ಅತ್ತಇತ್ತ ತೂಗಾಡುತ್ತಲೇ ಇದೆ.

ನಕಲಿ ಎನ್‌ಕೌಂಟರ್ ಹಿನ್ನೆಲೆ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ದಿನೇಶ್ ರಾಜಸ್ಥಾನದ ಆಲ್ವಾರ್ ಜಿಲ್ಲೆಯ ಎಸ್‌ಪಿ ಆಗಿ ಕೆಲಸ ಮಾಡುತ್ತಿದ್ದ. ಈಗ ದೇಶಾದ್ಯಂತ sensational fake encounter ಪ್ರಕರಣವಾಗಿ ಭಾರಿ ಗದ್ದಲವೆಬ್ಬಿಸಿರುವ, ಸ್ವತಃ ಸುಪ್ರೀಂಕೋರ್ಟ್ ಮಧ್ಯಪ್ರವೇಶಿಸಿರುವ ನಕಲಿ ಎನ್‌ಕೌಂಟರ್ ಹತ್ಯೆಯಲ್ಲಿ ಬಲಿಯಾದವನು ಸೊಹ್ರಾಬುದ್ದೀನ್ ಶೇಖ್ ಎಂಬಾತ.

ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ ರಾಜ್ಯಗಳಲ್ಲಿ ಹಲವಾರು ಕ್ರಿಮಿನಲ್ ಚಟುವಟಿಕೆ ನಡೆಸುತ್ತಾ ಪೊಲೀಸರ ವಾಂಟೆಡ್ ಲಿಸ್ಟ್‌ನಲ್ಲಿದ್ದ ಸೊಹ್ರಾಬುದ್ದಿನ್ 2005 ರ ನವೆಂಬರ್ 26 ರಂದು ಪೊಲೀಸರ ಗುಂಡಿಗೆ ಬಲಿಯಾಗಿದ್ದ. ಅವತ್ತಿನ ಈ ಎನ್‌ಕೌಂಟರ್‌ನಲ್ಲಿ ರಾಜಸ್ಥಾನದ ಪೊಲೀಸ್ ಅಧಿಕಾರಿ ದಿನೇಶ್‌ಕುಮಾರ್ ಜೊತೆಗೆ ಗುಜರಾತಿನ ಇನ್ನಿಬ್ಬರು ಉನ್ನತ ಪೊಲೀಸ್ ಅಧಿಕಾರಿಗಳಾದ ವಂಜೀರಾ ಹಾಗೂ ಪಾಂಡಿಯನ್ ಕೂಡಾ ಇದ್ದರು. ಅವತ್ತಿನ ಮಟ್ಟಿಗೆ ಈ ಎನ್‌ಕೌಂಟರ್ ಘಟನೆ ಪೊಲೀಸರ ಧೈರ್ಯ, ಸಾಹಸ ಹಾಗೂ ಚಾಕಚಕ್ಯತೆಯ ಪ್ರತೀಕವೆಂಬಂತೆ ಭಾರಿ ಪ್ರಚಾರ ಪಡೆದುಕೊಂಡಿತ್ತು. ಸತ್ತ ಸೊಹ್ರಾಬುದ್ದೀನ್ ಒಬ್ಬ ಲಷ್ಕರ್ ತೊಯ್‌ಬಾ ಉಗ್ರಗಾಮಿಯೆಂತಲೂ, ಅವನು ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು



ವಂಜೇರಾ ಮತ್ತು ಪಾಂಡಿಯನ್

ಕೊಲ್ಲುವ ಪ್ಲಾನ್ ಮಾಡಿಕೊಂಡು ಓಡಾಡು ತ್ತಿದ್ದಾಗ ಈ ಪೊಲೀಸ್ ಆಫೀಸರ್‌ಗಳು ಅಹಮದಾಬಾದಿನಲ್ಲಿ ಅವನನ್ನು ಪತ್ತೆಹಚ್ಚಿ ನಂತರ ಗುಂಡಿನ ಚಕಮಕಿಯಲ್ಲಿ ಶೇಖ್ ಸತ್ತನೆಂದೂ ಕತೆ ಕಟ್ಟಲಾಗಿತ್ತು.

ಆದರೆ ಈ ಎನ್‌ಕೌಂಟರ್‌ನ ಅಸಲಿ ಘಟನಾವಳಿಗಳೆಲ್ಲಾ ಈಗ ಬಯಲಿಗೆ ಬರತೊಡಗಿವೆ.

ಈ ಶೇಖ್ ಅರೆಸ್ಟಾಗಿದ್ದು ಕರ್ನಾಟಕದ ಬೆಳಗಾಂನಲ್ಲಿ. 2005 ರ ನವೆಂಬರ್ 22 ರಂದು. ಅವತ್ತು ಆತನ ಹೆಂಡತಿ ಕೌಸರ್ ಬಿ ಹಾಗೂ ಇನ್ನೊಬ್ಬ ಪ್ರಜಾಪತಿ ಎಂಬ ಗೆಳೆಯ ಶೇಖ್‌ನೊಂದಿಗಿದ್ದರು. ಇದಾದ ಮೂರು ದಿನದ ನಂತರ ಗುಂಡೇಟಿನಿಂದ ಛಿದ್ರವಾಗಿದ್ದ ಶೇಖ್‌ನ ಹೆಣ ಅಹ್ಮದಾಬಾದಿನ ವಿಶಾಲ ಕ್ರಾಸಿಂಗ್ ಬಳಿ ಬಿದ್ದಿತ್ತು. ಆದರೆ ಅವನ ಹೆಂಡತಿ ಕೌಸರ್ ಬಿ ನಾಪತ್ತೆಯಾ ಗಿದ್ದಳು. ಈಗ ತಾನೇ ಗುಜರಾತ್ ಸರ್ಕಾರ ಸುಪ್ರೀಂಕೋರ್ಟಿಗೆ ಒಂದು ವರದಿ ಸಲ್ಲಿಸಿ ಕೌಸರ್‌ಳನ್ನು ಕೂಡ ಪೊಲೀಸರು ಕೊಂದು ಹಾಕಿರಬಹುದೆಂದು ತಿಳಿಸಿದೆ. ಅವಳ ದೇಹ ಇದು ವರೆಗೂ ಪತ್ತೆಯಾಗಿಲ್ಲ. ಆದರೆ ವಾಸ್ತವವಾಗಿ ಕೌಸರ

ಬಳಿದಾಳಿ ಈಶ

ಮೇಲೆ ಅತ್ಯಾಚಾರ ನಡೆಸಿ ಕೊಂದು ನಂತರ ನಿರ್ಜನ ಬೆಟ್ಟ ಪ್ರದೇಶವೊಂದರಲ್ಲಿ ಸುಟ್ಟು ಹಾಕಲಾಗಿದೆ ಎನ್ನಲಾಗಿದೆ.

ಮೂರು ಮಂದಿ ಐಪಿಎಸ್ ಅಧಿಕಾರಿಗಳು ಸೇರಿಕೊಂಡು ನಡೆಸಿರುವ ಈ ಕ್ರಿಮಿನಲ್ ಕೃತ್ಯಕ್ಕೆ ಪ್ರೇರಣೆ ಏನು ಗೊತ್ತೆ?

ಪ್ರಮೋಷನ್, ಪ್ರಶಸ್ತಿ, ಪದಕ, ಬಹುಮಾನಗಳು ಹಾಗೂ ಪೊಲೀಸರೆ ನ್ಯಾಯಾಧೀಶರೆಂಬಂತೆ ಸ್ಥಳದಲ್ಲೆ ತೀರ್ಪು ನೀಡಲು ಹೊರಡುವ ದಾರ್ಷ್ಟ್ಯ.

ಕರ್ನಾಟಕದ ಯುವ ಪೊಲೀಸ್ ಅಧಿಕಾ ದಿನೇಶ್‌ಕುಮಾರನು ಇಂಥ ನೀಚ ಕೃತ್ಯದಲ್ಲಿ ಭಾಗಿಯಾ ಬಂಧನಕ್ಕೊಳಗಾಗಿರುವುದನ್ನು ರಾಜ್ಯ ಪೊಲೀಸರು ಗಂಭೀರವಾಗಿ ನೋಡಬೇಕಿದೆ. ಏಕೆಂದರೆ ಬಜೆ ನಾಯಕರನ್ನು ಖುಷಿಪಡಿಸಲು ಮೂಲ್ಕಿ ರಫೀಕನನ್ನು ಕರಾವಳಿ ಪೊಲೀಸರು ಮುಗಿಸಿದ್ದು ಇದೇ ತರ ನಕಲಿ ಎನ್‌ಕೌಂಟರ್‌ನಲ್ಲೇ.

ಮುಂದೆಂದಾದರೂ ರಫೀಕ್ ಹತ್ಯೆ ವಿಚಾ ತನಿಖೆಯಾದಲ್ಲಿ ದಿನೇಶ್‌ಗಾದ ಗತಿಯೇ ಅವರಿಗು ಆಗುವುದು ಖಚಿತ.

ಯಾರಿವನು ಸೊಹ್ರಾಬುದ್ದೀನ್?

ಮಧ್ಯಪ್ರದೇಶ ರಾಜ್ಯದ ಉಜ್ಜಯಿನಿಯವನಾ ಸೊಹ್ರಾಬುದ್ದೀನ್ ಶೇಖ್ ಮೂಲತಃ ಒಬ್ಬ ಕ್ರಿಮಿನಲ್ ರಾಜಸ್ಥಾನ್ ರಾಜ್ಯದಲ್ಲಿ ಇವನು ವ್ಯಾಪಾರಿಗಳಿಂದ ಹಫ ವಸೂಲಿ, ಕಿಡ್‌ನ್ಯಾಪ್ ದಂಧೆ ನಡೆಸಿಕೊಂಡಿದ್ದ. ಈ 10 ವರ್ಷಗಳ ಹಿಂದೆ ಅವನ ಉಜ್ಜಯಿನಿ ಮನೆಯ ಪೊಲೀಸರಿಗೆ ಕೆಲ ವೆಪನ್ಸ್ ಕೂಡಾ ಸಿಕ್ಕಿದ್ದವು. ಇವ

ಪಟಳ ಜಾಸ್ತಿಯಾದಂತೆ ರಾಜಸ್ಥಾನಿನ ಕೆಲ ದೊಡ್ಡ
ವ್ಯಾಪಾರಿಗಳು ಪೊಲೀಸರ ಮೇಲೆ ಒತ್ತಡ ತಂದು
ಹೇಗಾದರೂ ಮಾಡಿ ಸೊಹ್ರಾಬುದ್ದೀನ್ ಕಾಟದಿಂದ
ದೂರುಮಾಡಿ' ಎನ್ನುತ್ತಿದ್ದರಂತೆ.

ಕೊನೆಗೆ ಪೊಲೀಸು-ವ್ಯಾಪಾರಿಗಳ ನಡುವೆ ಯಾವ
ಡೀಲು ಕುದುರಿತೋ ಏನೋ ಅಂತೂ ಸೊಹ್ರಾಬುದ್ದೀನ್
ಬೇಟೆ ಶುರುವಾಯಿತು. ಕನ್ನಡಿಗ ದಿನೇಶ್‌ಕುಮಾರ್
ಆಗ ಉದಯ್‌ಪುರ್‌ನ ಎಸ್ಪಿಯಾಗಿದ್ದರು. ಈಗ ಅರೆ
ಸ್ಟಾಗಿರುವ ಡಿ.ಜಿ. ವಂಜೀರಾ ಗುಜರಾತ್‌ನ ಬಾರ್ಡರ್
ರೇಂಜ್‌ನ ಐಜಿಯಾಗಿದ್ದರೆ ಇನ್ನೊಬ್ಬ ಆರೋಪಿ
ಪಾಂಡಿಯನ್ ಗುಜರಾತ್ ಗೂಢಚರ್ಯೆ ವಿಂಗ್‌ನ
ಎಸ್ಪಿಯಾಗಿದ್ದ. ಜೊತೆಗೆ ಇವರೆಲ್ಲಾ ಆಯಾ ರಾಜ್ಯಗಳ
Anti Terrorist Wing ಗಳಲ್ಲೂ ಸಕ್ರಿಯರಾಗಿದ್ದರು.

ವಂಜೀರಾಗೆ ಹಲವಾರು ಮಾಹಿತಿದಾರರ ಜಾಲವೇ
ಇದ್ದು ಅವರುಗಳು ಎಷ್ಟೋ ವಿಚಾರಗಳನ್ನು ತಿಳಿಸುತ್ತಿದ್ದರು. ಸೊಹ್ರಾಬುದ್ದೀನ್‌ನ ಗೆಣೆಕಾರನಾಗಿದ್ದ ತುಳಸಿರಾಂ
ಪ್ರಜಾಪತಿಯೂ ಅಂತಹ ಮಾಹಿತಿದಾರಲ್ಲೊಬ್ಬನಾಗಿದ್ದ.
ಸೊಹ್ರಾಬುದ್ದೀನ್‌ಗೆ ಇದು ಗೊತ್ತಿರಲಿಲ್ಲ. ತಾವು
ಹುಡುಕಲು ಶುರು ಮಾಡಿದ್ದ ಸೊಹ್ರಾಬುದ್ದೀನ್
ಹೈದರಾಬಾದಿನಿಂದ ಮಹಾರಾಷ್ಟ್ರದ ಸಾಂಗ್ಲಿಗೆ ಹೆಂಡತಿ



ಹೆಂಡತಿಯೊಂದಿಗೆ ಸೊಹ್ರಾಬುದ್ದೀನ್

ಕೌಸರ್ ಬಿ ಜೊತೆ 2005 ನವೆಂಬರ್ 22 ರಂದು
ಪ್ರಯಾಣಿಸುತ್ತಿದ್ದಾನೆಂದು ಐಜಿ ವಂಜೀರಾಗೆ ಒಂದು
ಸ್ಪಷ್ಟ ಮಾಹಿತಿ ಸಿಗುತ್ತದೆ. ಇದನ್ನು ತಿಳಿಸಿದ್ದೇ ಪ್ರಜಾಪತಿ.
ಆತನೂ ಅವತ್ತು ಅವರಿಬ್ಬರ ಜೊತೆ ಬಸ್‌ನಲ್ಲೇ
ಪ್ರಯಾಣಿಸಿದ್ದ. ಮೊದಲೇ ತೀರ್ಮಾನಿಸಿಕೊಂಡಿದ್ದಂತೆ
ನವೆಂಬರ್ 22 ರ ರಾತ್ರಿ 1.30 ರ ಸುಮಾರಿಗೆ ಬೆಳಗಾಂ
ಮೂಲಕ ಸಾಗಿ ಹೋಗುತ್ತಿದ್ದ ಬಸ್ ನಿಲ್ಲಿಸಿ ಸೊಹ್ರಾಬುದ್ದೀನ್,
ಆತನ ಕೌಸರ್ ಬಿ ಹಾಗೂ ಪ್ರಜಾಪತಿಯನ್ನು ಕೆಳಗಿಳಿಸಿ,
ನಂಬರ್ ಪ್ಲೇಟ್ ಬದಲಿಸಿದ್ದ ಕ್ವಾಲೀಸ್ ಜೀಪ್‌ಗೇರಿಸಿ
ಕೊಂಡು ನೇರ ಅಹಮದಾಬಾದಿಗೆ ಎಳೆತಂದಿದ್ದಾರೆ.

ಅದಾದ ಎರಡು ದಿನಕ್ಕೆ 'ಪಾಕಿಸ್ತಾನದ ಐಎಸ್‌ಐ
ಏಜೆಂಟ್ ಸೊಹ್ರಾಬುದ್ದೀನ್ ಎನ್‌ಕೌಂಟರ್‌ನಲ್ಲಿ ಹತ್ಯೆ'
ಎಂಬ ಸುದ್ದಿ ಕೇಳಿಬರುತ್ತದೆ.

ನಿಜಕ್ಕೂ ನಡೆದದ್ದೇನು

ಅವತ್ತು ನವೆಂಬರ್ 22 ರ ರಾತ್ರಿ ವಂಜೀರಾ
ಮತ್ತು ಆತನ ನಾಲ್ವರು ಮಫ್ತಿ ಪೊಲೀಸರು ಕೈಲಿ ಪಿಸ್ತೂಲ್
ಹಿಡಿದು ಬಸ್ ಏರಿ ಸೊಹ್ರಾಬ್, ಕೌಸರ್ ಹಾಗೂ
ಪ್ರಜಾಪತಿಯನ್ನು ಪಿಕ್‌ಅಪ್ ಮಾಡಿಕೊಂಡು ನೇರ
ಅಹಮದಾಬಾದಿಗೆ ಹತ್ತಿರದ ಜಮಾಯಿತಿಪುರ ಬಳಿಯ
ಫಾರಂಹೌಸ್ ಒಂದರಲ್ಲಿ ಇಟ್ಟಿದ್ದಾರೆ. ಇನ್‌ಫಾರ್ಮರ್
ಪ್ರಜಾಪತಿ ಅಷ್ಟರಲ್ಲಿ ಸೇಫಾಗಿ ನಾಪತ್ತೆಯಾಗಿದ್ದ.

ನವೆಂಬರ್ 25 ರಂದು ಸ್ಥಳೀಯ ಪೊಲೀಸ್
ಇನ್ಸ್‌ಪೆಕ್ಟರ್ ದಾಬಿ ಎಂಬುವನು ಇನ್ನೊಬ್ಬ ಇನ್ಸ್‌ಪೆಕ್ಟರ್
ಘರ್ಯಾರ್‌ಗೆ ಫೋನ್ ಮಾಡಿ 'ನಿನ್ನ ಸುಪರ್ದಿನಲ್ಲಿರುವ
(ವಶಪಡಿಸಿಕೊಂಡ) ಯಾವುದಾದರೂ ಮೋಟಾರ್ ಬೈಕ್
ಅನ್ನು ತೆಗೆದುಕೊಂಡು ವಿಶಾಲಾ ಕ್ರಾಸಿಂಗ್‌ಗೆ ಬಾ'
ಎಂದು ಆದೇಶ ನೀಡುತ್ತಾನೆ. ಅದರಂತೆ ಘರ್ಯಾರ್
ಬೈಕ್ ಅರೇಂಜ್ ಮಾಡಿಕೊಂಡು ಸ್ಥಳಕ್ಕೆ ಹೋದಾಗ
ಅಲ್ಲಿ ಐಪಿಎಸ್ ಕೆಂಪಯ್ಯನ ಅಳಿಯ ಎಸ್ಪಿ ದಿನೇಶ್
ಕುಮಾರ್, ವಂಜೀರಾ ಹಾಗೂ ಪಾಂಡಿಯನ್ ನಿಂತಿರು
ತ್ತಾರೆ. ಅವರಲ್ಲೊಬ್ಬ ಬೈಕ್‌ಗೆ ಕಿಕ್ ಒದೆದು ಗೇರ್‌ಗೆ
ಹಾಕಿ ಮುಂದಕ್ಕೆ ಹೋಗಲು ಬಿಟ್ಟು ಬೀಳಿಸುತ್ತಾನೆ.
ಆಗ ನಡುರಾತ್ರಿ ಸಮಯ. ಅಷ್ಟರಲ್ಲಿ ಎಸ್‌ಐ ದಾಬಿ
ಒಂದು ಬಿಳಿ ಮಾರುತಿ ವ್ಯಾನಿನಲ್ಲಿ ಬಂದವನೇ ಒಳಗಿದ್ದ
ಸೊಹ್ರಾಬುದ್ದೀನ್‌ನನ್ನು ಆಚೆ ತಳ್ಳಿದ. ನಮ್ಮ ಧೀರೋದ್ದಾತ
ಪೊಲೀಸ್ ಆಫೀಸರ್‌ಗಳಾದ ದಿನೇಶ್, ವಂಜೀರಾ
ಹಾಗೂ ಪಾಂಡಿಯನ್ ತಮ್ಮ ಪಿಸ್ತೂಲುಗಳಿಂದ ಫೈರ್
ಮಾಡಿ ಸೊಹ್ರಾಬ್‌ನನ್ನು ಕೊಲ್ಲುತ್ತಾರೆ.

ರಾಜಸ್ಥಾನದ ವ್ಯಾಪಾರಿಗಳಿಗೆಲ್ಲಾ ನೆಮ್ಮದಿ ತಂದ
ರಾತ್ರಿ ಅದಾಗಿತ್ತೇನೊ. ಅಂತೂ ಪೊಲೀಸರು ತೆಗೆದು
ಕೊಂಡಿದ್ದ ಡೀಲು ಯಶಸ್ವಿಯಾಗಿ ಮುಗಿದಿತ್ತು. ವಿಚಿತ್ರ
ಏನೆಂದರೆ ಮಾರನೇ ದಿನದಿಂದ ಟಿವಿ-ಪತ್ರಿಕೆಗಳಲ್ಲೆಲ್ಲಾ
ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ ಹತ್ಯೆಗೆ
ಬಂದಿದ್ದ ಲಷ್ಕರ್ ತೋಯಿಬಾದ ಭಯೋತ್ಪಾದಕ
ಸೊಹ್ರಾಬುದ್ದೀನ್ ಶೇಖ್ ಎನ್‌ಕೌಂಟರ್‌ನಲ್ಲಿ ಹತ್ಯೆ
ಎಂಬ ಸೆನ್ಸೇಷನಲ್ ಸುದ್ದಿಗಳೋ ಸುದ್ದಿಗಳು.

ಇದನ್ನೆಲ್ಲಾ ಗಮನಿಸಿ ಆತಂಕಗೊಂಡ ಸೊಹ್ರಾ
ಬುದ್ದೀನ್‌ನ ತಮ್ಮ ರುಬಾಬುದ್ದೀನ್ ತನ್ನ ಅಣ್ಣ ಹಾಗೂ
ಅತ್ತಿಗೆ ಕೌಸರ್ ಬಿ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು
ಯತ್ನಿಸಿ ವಿಫಲನಾಗುತ್ತಾನೆ. ಕೊನೆಗೆ ಬೇರೆ ದಾರಿ
ಕಾಣದೆ ನೇರ ಸುಪ್ರೀಂಕೋರ್ಟಿನಲ್ಲಿ ಹೇಬಿಯಸ್
ಕಾರ್ಪಸ್ ಅರ್ಜಿ ಸಲ್ಲಿಸಿದಾಗ ಕೋರ್ಟ್ ಈ ಹತ್ಯೆ
ಬಗ್ಗೆ ಹಾಗೂ ಕೌಸರ್ ನಾಪತ್ತೆ ಬಗ್ಗೆ ತನಿಖೆ ನಡೆಸಿ
ವರದಿ ನೀಡುವಂತೆ ಗುಜರಾತ್ ಸರ್ಕಾರಕ್ಕೆ ಆದೇಶಿಸುತ್ತದೆ.

ಈ ಮೇಲೆ ಹೇಳಿದ ಸಂಗತಿಗಳೆಲ್ಲವೂ ಗುಜರಾತಿನ
ಸಿಐಡಿ ತನಿಖೆಯಿಂದ ಹೊರಬಂದಿರುವ ಸತ್ಯಾಂಶಗಳಾಗಿವೆ.

ಅತ್ಯಂತ ದುರಂತದ ಸಂಗತಿ ಏನೆಂದರೆ ಯಾವುದೇ
ಅಪರಾಧವೆಸಗದಿದ್ದ ಕೌಸರ್ ಬಿಳನ್ನು ನರೇಂದ್ರ
ಮೋದಿಯ ಆಪ್ತ ವಲಯದ ಪೊಲೀಸ್ ಅಧಿಕಾರಿ
ವಂಜೀರಾ ರೇಪ್ ಮಾಡಿ ಕೊಂದು ನಂತರ ಅವಳ
ಹೆಣ ಸುಟ್ಟು ಹಾಕಿರುವುದು. ಇದನ್ನು
ಈಗ ಬಯಲುಗೊಳಿಸಿರುವುದು ಬೇರೆ
ಯಾರೂ ಅಲ್ಲ, ಭಯೋತ್ಪಾದಕನಿಗ್ರಹ
ದಳದಲ್ಲಿದ್ದ ಪೊಲೀಸ್ ಸಿಬ್ಬಂದಿ.
ಸುಪ್ರೀಂಕೋರ್ಟ್ ಆದೇಶದಂತೆ ಈ
ಎನ್‌ಕೌಂಟರ್ ಬಗ್ಗೆ ತನಿಖೆಗೆ ಮೋದಿ
ಸರ್ಕಾರವೇ ಗೀತಾ ಎಂಬ
ಅಧಿಕಾರಿಣಿಯನ್ನು ನೇಮಿಸಿತ್ತು. ಆಕೆ
ಇದು ನಕಲಿ ಎನ್‌ಕೌಂಟರ್ ಎಂದು
ಮಧ್ಯಂತರ ವರದಿ ನೀಡಿದಳೆಂದು
ಸಿಟ್ಟಿನಿಂದ ಆಕೆಯನ್ನು ಬದಲಾಯಿಸಿ
ಇನ್ನೊಬ್ಬ ತನಿಖಾಧಿಕಾರಿಯನ್ನು
ನೇಮಿಸಲಾಗಿತ್ತು. ಆದರೆ ಆತನೂ ನಕಲಿ
ಎನ್‌ಕೌಂಟರ್ ಎಂದು ದೃಢಪಡಿಸಿ ಈಗ
ಕೋರ್ಟಿಗೂ ವರದಿ ನೀಡಿದ್ದಾನೆ.

ಕೋರ್ಟ್ ಈ ಪ್ರಕರಣವನ್ನು ಗಂಭೀರವಾಗಿ
ಪರಿಗಣಿಸಿದೆ. ಹಾಗಾಗಿ ದಿನೇಶ್, ವಂಜೀರಾ, ಪಾಂಡಿ
ಯನ್‌ರನ್ನು ಕೋರ್ಟು ಆದೇಶದಂತೆ ಬಂಧಿಸಿ ಈಗ
ಮೇ 1 ರವರೆಗೂ ಪೊಲೀಸ್ ಕಸ್ಟಡಿಗೆ ಕೊಡಲಾಗಿದೆ.

ಇಷ್ಟಕ್ಕೂ ಈ ಭ್ರಷ್ಟ ಪೊಲೀಸರು ಈ ನಕಲಿ
ಎನ್‌ಕೌಂಟರ್ ನಡೆಸಲು ಮೂರು
ಪ್ರಮುಖ ಕಾರಣಗಳಿದ್ದವು.



ಕೌಸರ್ ಬಿ

ಒಂದು ರಾಜಸ್ಥಾನದ
ವ್ಯಾಪಾರಿಗಳೊಂದಿಗೆ ಕುದುರಿಸಿದ್ದ
ಡೀಲ್.

ಇನ್ನೊಂದು ಮುಖ್ಯಮಂತ್ರಿ
ನರೇಂದ್ರ ಮೋದಿಯನ್ನು ಸದಾ
ಆಪತ್ತಿನಲ್ಲಿರುವ ಹಾಗೂ
ಟೆರರಿಸ್ಟ್‌ಗಳೊಂದಿಗೆ
ಹೋರಾಡುತ್ತಿರುವ ನಾಯಕ
ಎಂದು ಜನರಿಗೆ
ಬಿಂಬಿಸುವುದಾಗಿತ್ತು.
ಮೂರನೆಯದು ಅಂತಾದ್ದನ್ನು
ತಪ್ಪಿಸಿದ ಧೀರ ಪೊಲೀಸರೆಂಬ ಕೀರ್ತಿ, ಪದಕ, ಬಡ್ತಿ
ಇತ್ಯಾದಿಗಳನ್ನು ಪಡೆಯುವುದಾಗಿತ್ತು. ಹೀಗೆ ತಮ್ಮ
ಮೂರೂ ಕೆಲಸಗಳು ಈಡೇರುತ್ತವೆಂದು ಯೋಚಿಸಿ
ದಿನೇಶ್ ಮತ್ತಿತರ ಹಿರಿಯ ಪೊಲೀಸ್ ಅಧಿಕಾರಿಗಳು
ಹಫ್ತಾ ವಸೂಲಿ ದಂಧೆಯ ಸೊಹ್ರಾಬುದ್ದೀನ್‌ಗೆ
ಟೆರರಿಸ್ಟ್ ಹಣೆಪಟ್ಟಿ ಹಚ್ಚಿ ಗುಂಡಿಟ್ಟು ಸಾಯಿಸಿ
ಅವನ ಪತ್ನಿ
ಹೊರಗಡೆ ಬಂದು ಬಾಯಿ ಬಿಟ್ಟರೆ ಗತಿ
ಏನೆಂದು ಅವಳನ್ನು ಕೊಂದು... ಅದೂ
ಅತ್ಯಾಚಾರವೆಸಗಿ ಕೊಂದು ಹೆಣ ಸಹ
ಸಿಗದಂತೆ ಸುಟ್ಟು ಹಾಕಿದ್ದಾರೆ.

ಇವರೆಲ್ಲರ ನೀಚತನ ಯಾವ ಮಟ್ಟಕ್ಕಿದೆ
ಎಂದರೆ ತಮಗೆ ಮಾಹಿತಿ ನೀಡುತ್ತಿದ್ದ
ಸೊಹ್ರಾಬುದ್ದೀನ್ ದೋಸ್ತ್ ತುಳಸಿರಾಂ
ಪ್ರಜಾಪತಿಯನ್ನೂ ಈ ಪೊಲೀಸರ ಗ್ಯಾಂಗ್
ನಾಪತ್ತೆ ಮಾಡಿಬಿಟ್ಟಿದೆ. ಬಹುಶಃ eye
witness ಯಾರು ಇರದಿರಲಿ ಎಂದು
ಅವನನ್ನೂ ಕೊಂದಿರಬಹುದು.

ಪೊಲೀಸರು ಸೃಷ್ಟಿಸುವ ಎನ್‌ಕೌಂಟರ್
ಘಟನೆಗಳು ನಂಬಲಿಕ್ಕೆ ಅರ್ಹವಾಗಿರುವುದಿಲ್ಲ
ಎಂಬುದಕ್ಕೆ ಇದೂ ಒಂದು ಸಾಕ್ಷಿ.

ಸುಪ್ರೀಂಕೋರ್ಟ್ ಈ ಘಟನೆ ಬಗ್ಗೆ ತೀವ್ರ
ನಿಗಾ ಇಟ್ಟು ಮಾಹಿತಿ ತರಿಸುತ್ತಿದೆ. ಬಹುಶಃ
ಕೆಂಪಯ್ಯನ ಅಳಿಯ ದಿನೇಶ್
ಇದರಿಂದ ಬಚಾವಾಗಲಾರ.
ರಾಜಸ್ಥಾನ್ ಸರ್ಕಾರ ಪೂರ್ತಿ ಈಗ
ದಿನೇಶ್ ಬೆಂಬಲಕ್ಕೆ ನಿಂತಿದೆ.
ಆದರೂ ದಿನೇಶ್ ಅಪರಾಧಿ
ಎಂದು ಗುಜರಾತ್ ಪೊಲೀಸರೂ
ಕೋರ್ಟಿನಲ್ಲಿ ಹೇಳಿದ್ದಾರೆ. ಈಗ
ಆತ ಅಪರಾಧಿಯೋ ಅಲ್ಲವೋ
ಎಂದು ನ್ಯಾಯಾಲಯವೇ ತೀರ್ಪು
ನೀಡಬೇಕು.

ದಿನೇಶ್ ಎಂತಹವನು?

ಈಗ ಕೊಲೆ ಆರೋಪವನ್ನು
ಹೊತ್ತು ಪೊಲೀಸರ ಬಂಧನದಲ್ಲಿರುವ
ಈ ದಿನೇಶ್‌ಕುಮಾರ್ ಎಂತಹವನು? ಕೋಲಾರ
ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ಬೆಳೆದ ದಿನೇಶ್
ತಹಶೀಲ್ದಾರರಾಗಿದ್ದ ನಾರಾಯಣಸ್ವಾಮಿ ಎಂಬುವವರ
ಪುತ್ರ. ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್
ಕಾಲೇಜ್‌ನಲ್ಲಿ ಪಿಯುಸಿ ಮುಗಿಸಿದ ದಿನೇಶ್ ಅನಂತರ
ಓದಿದ್ದು ಇಂಜಿನಿಯರಿಂಗ್. ಆದರೆ ಆತನಿಗೆ ಐಎಎಸ್
ಅಧಿಕಾರಿ ಆಗುವ ಆಸೆ ಇತ್ತು. ಆದ್ದರಿಂದಲೇ ಕನ್ನಡ
ಮತ್ತು ಇಂಜಿನಿಯರಿಂಗ್ ವಿಷಯಗಳನ್ನು ಆಯ್ಕೆ
ಮಾಡಿಕೊಂಡು UPSC ಪರೀಕ್ಷೆ ಬರೆದ. ಆದರೆ 1995
ರಲ್ಲಿ IAS ಸಿಗದೇ IPS ಅಧಿಕಾರಿ ಆಗಿ ರಾಜಸ್ಥಾನ
ರಾಜ್ಯದಲ್ಲಿ ಸೇವೆ ಸಲ್ಲಿಸಲಾರಂಭಿಸಿದ.

ಕುರುಬರ ಹುಡುಗನೊಬ್ಬ ಐಪಿಎಸ್ ಅಧಿಕಾರಿ
ಆಗಿರುವ ಸುದ್ದಿ ಹರಡಲು ಬಹಳ ದಿನ ಬೇಕಾಗಿರಲಿಲ್ಲ.
ಕೆಲವೇ ದಿನಗಳಲ್ಲಿ ಅದು ಕೆಂಪಯ್ಯನವರ ಕಿವಿಗೂ
ಬಿತ್ತು. ಕೊನೆಗೆ 1999 ರಲ್ಲಿ ತಮ್ಮ ಮಗಳನ್ನು ದಿನೇಶ್‌ಗೆ
ಕೊಟ್ಟು ಮದುವೆ ಮಾಡಿದರು.

ರಾಜಸ್ಥಾನದಲ್ಲಿ ಏಕೈಕ ಕನ್ನಡಿಗ ಅಧಿಕಾರಿ ಆಗಿದ್ದ
33 ವರ್ಷ ವಯಸ್ಸಿನ ದಿನೇಶ್ ಆರಂಭದಲ್ಲಿ ಚಂಬಲ್
ಕಣಿವೆಯಲ್ಲಿನ ಢಕಾಯಿತರನ್ನು ಸದೆಬಡಿದು ಅಲ್ಲಿನ
ಜನರ ಮತ್ತು ಸರ್ಕಾರದ ಪ್ರಶಂಸೆಗೆ ಪಾತ್ರನಾದನಲ್ಲದೆ
ರಾಜಸ್ಥಾನದ ಸರ್ಕಾರ ಆತನಿಗೆ ಒಂದು ಪಿಸ್ತೂಲನ್ನು
ನೀಡಿ ಗೌರವಿಸಿತ್ತು.

ಇದೇ ದಿನೇಶ್ ರಣ್‌ತಂಬೋರಿನ ಹುಲಿ
ರಕ್ಷಣಾಲಯದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿ
WWF ನಿಂದ 'ಪಾಂಡಾ
ಪ್ರಶಸ್ತಿ'ಯನ್ನು ಗಳಿಸಿದ. ಅದಷ್ಟೇ
ಅಲ್ಲದೆ, ಸವಾಯ್ ಮಾಧೋಪುರದಲ್ಲಿ
ಈತ ಸಲ್ಲಿಸಿದ ಸೇವೆಯಿಂದ ಜನ
ಎಷ್ಟು ಸಂತೋಷಗೊಂಡಿದ್ದರೆಂದರೆ,
ಸರ್ಕಾರ ಈತನನ್ನು ಅಲ್ಲಿಂದ
ವರ್ಗಾಯಿಸಿದಾಗ ಜನರೇ ಪ್ರತಿಭಟಿಸಿ
ಅವನನ್ನು ಮತ್ತೆ ಅದೇ ಜಾಗಕ್ಕೆ
ಹಿಂದಿರುಗುವಂತೆ ಮಾಡಿದ್ದರು.



ಪೊಲೀಸ್ ಬಂಧನದಲ್ಲಿ ದಿನೇಶ್ ಮತ್ತಿತರರು

ಆದರೆ ಇದೇ ದಿನೇಶ್ ಇವತ್ತು
ಕೊಲೆ ಆರೋಪವನ್ನು ಹೊತ್ತು
ಬಂಧನಕ್ಕೊಳಗಾಗಿದ್ದಾನೆ. ಅವನ
ವಿರುದ್ಧ ಆರೋಪ ಸಾಬೀತಾದರೆ
ಆತನಿಗೆ ಕಠಿಣ ಶಿಕ್ಷೆ ಗ್ಯಾರಂಟಿ...

ಜೀವನವೆಂಬ ಜೋಕಾಲಿ ಅತ್ತ ಇತ್ತ
ತೂಗಾಡುತ್ತಲೇ ಇದೆ...

ಅಳಿಯನಿಗೆ ಕಷ್ಟ, ಕೆಂಪಯ್ಯಗೂ ನಷ್ಟ

1995 ರ ಬ್ಯಾಚ್‌ನಲ್ಲಿ ತುಂಬ ಚಿಕ್ಕ ವಯಸ್ಸಿನಲ್ಲೇ ಐಪಿಎಸ್ ಅಧಿಕಾರಿ ಆದ ದಿನೇಶ್ ರಾಜಸ್ಥಾನ್ ಕೇಡರ್ ಸೇರಿ ಅಲ್ಲಿಗೆ ಹೋದ ಶುರುವಿನಲ್ಲೇ ಉತ್ಸಾಹದಿಂದ ಚೆನ್ನಾಗಿ ಕೆಲಸ ಮಾಡಿ ದಕ್ಷ, ಪ್ರಾಮಾಣಿಕ ಅಧಿಕಾರಿ ಎನಿಸಿಕೊಂಡಿದ್ದ. ತಾನಿದ್ದ ಜಿಲ್ಲೆಯಲ್ಲಿ ಮೆರೆಯುತ್ತಿದ್ದ ಢಕಾಯಿತರನ್ನು ಮಟ್ಟಹಾಕಿ, ಹುಲಿ



ಸಂರಕ್ಷಣಾ ಯೋಜನೆ ಕಾಡಿನೊಳಗೆ ಅಕ್ರಮ ಶಿಕಾರಿ ನಡೆಸುತ್ತಿದ್ದ ಬೇಟೆಗಾರರನ್ನು ಬೆಂಡೆತ್ತಿ ಭಾರಿ ಹೆಸರು ಪಡೆದಿದ್ದ. ಸ್ವತಃ ಕೆಂಪಯ್ಯ ವೀರಪ್ಪನ್ ಕಾರ್ಯಾಚರಣೆಯಲ್ಲಿದ್ದಾಗ ಇವರಿಬ್ಬರೂ ಭೇಟಿಯಾದಾಗೆಲ್ಲಾ ತಮ್ಮ ತಮ್ಮ ಅನುಭವಗಳನ್ನು ವಿನಿಮಯ ಮಾಡಿಕೊಂಡು ಸಲಹೆ ನೀಡುತ್ತಿದ್ದದ್ದೂ ಉಂಟು. ಅಂತಾ ದಿನೇಶ್ ಈಗ ತಾನೇ ಕಾನೂನನ್ನು ಕೈಗೆ ತೆಗೆದುಕೊಂಡು ಕೊಲೆ ಆರೋಪದ ಮೇಲೆ ಜೈಲು ಸೇರಿ ವಿಚಾರಣೆ ಎದುರಿಸಬೇಕಾಗಿ ಬಂದಿದೆ.

ಅತ್ತ ಗುಜರಾತಿನಲ್ಲಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ತನ್ನ ರಾಜ್ಯದ ಪೊಲೀಸ್ ಅಧಿಕಾರಿಗಳಾದ ವಂಜೀರಾ ಹಾಗೂ ಪಾಂಡಿಯನ್ ರಕ್ಷಣೆಗೆ ವಿಶೇಷ ಕಾಳಜಿಯನ್ನೇನೂ ತೋರಿಸುತ್ತಿಲ್ಲ. ಬದಲಾಗಿ ನಕಲಿ ಎನ್‌ಕೌಂಟರ್ ನಡೆದಿರುವುದು ನಿಜ ಎಂದೇ ಒಪ್ಪಿಕೊಂಡಿದೆ. ಆದರೆ ಇತ್ತ ರಾಜಸ್ಥಾನದ ವಸುಂಧರಾ ರಾಜೆಯ ಬಿಜೆಪಿ ಸರ್ಕಾರದ ಗೃಹ ಸಚಿವ ಗುಲಾಬ್ ಚಂದ್ ಕಟಾರಿಯಾ ಸೀದಾ ಗುಜರಾತ್‌ಗೆ ಹೋಗಿ ದಿನೇಶ್ ಕುಮಾರ್ ಬಂಧನವನ್ನು ಖಂಡಿಸಿದ್ದಾನೆ. ಕೋರ್ಟ್ ಇಂಥದ್ದನ್ನೆಲ್ಲಾ ಕೇರ್ ಮಾಡುವುದಿಲ್ಲ ಬಿಡಿ.

ಮೋದಿ ಅಧಿಕಾರಕ್ಕೆ ಬಂದ ನಂತರ ಗುಜರಾತಿನಲ್ಲಿ ತಿಂಗಳಿಗೊಂದು ಬಾರಿ ಮುಸ್ಲಿಮರನ್ನು ಎನ್‌ಕೌಂಟರ್ ನೆಪದಲ್ಲಿ ಕೊಲ್ಲುವುದು ಪೊಲೀಸರಿಗೆ ಅಭ್ಯಾಸವಾಗಿ ಹೋಗಿದೆ. ಅವನು ಐಎಸ್‌ಐ, ಲಷ್ಕರ್ ತೋಯಿಬಾ ಎಂದು 'ಹಣೆಪಟ್ಟಿ' ಹಚ್ಚುವುದು, ಮೋದಿ ಕೊಲೆಗೆ ಸಂಚು ಹೂಡಿದ್ದರೆಂದು ಹೇಳಿಕೆ ನೀಡಿ ತಿಪ್ಪೆ ಸಾರಿಸುವುದು ಅಲ್ಲಿ ನಿರಂತರವಾಗಿ ನಡೆದಿತ್ತು. ವಂಜೀರಾನೇ ಇದುವರೆಗೂ ಒಂಭತ್ತು ಎನ್‌ಕೌಂಟರ್ ನಡೆಸಿ 15 ಜನರನ್ನು ಹತ್ಯೆ ಮಾಡಿದ್ದಾನೆ.

ಇವೆಲ್ಲಕ್ಕೂ ಈ ಅಧಿಕಾರಿಗಳೀಗ ಉತ್ತರ ಕೊಡಬೇಕಾಗಿ ಬಂದಿದೆ.

ಅತ್ತ ದಿನೇಶ್‌ಗೆ ಈ ದುರ್ಗತಿ ಬಂದಿದ್ದರೆ ಇತ್ತ ಕೆಂಪಯ್ಯ ಲೋಕಾಯುಕ್ತ ತನಿಖೆಯಿಂದ ಭ್ರಷ್ಟಾಚಾರದ ಆರೋಪದಿಂದ ಹೇಗೊ ಬಚಾವಾಗಿದ್ದಾರಾದರೂ ಅವರು ಬಹಳ ದಿನಗಳಿಂದ ನಿರೀಕ್ಷಿಸುತ್ತಿರುವ ಎಡಿಜಿಪಿ ಹುದ್ದೆಗೆ ಬಡ್ತಿ ಸಿಗುತ್ತಿಲ್ಲ. ಸ್ವತಃ ದೇವೇಗೌಡರಿಗೂ ಕೆಂಪಯ್ಯಗೆ ಬಡ್ತಿ ಕೊಡಿಸಿ ಬೆಂಗಳೂರು ಪೊಲೀಸ್ ಕಮೀಷನರ್ ಆಗಿ ತರುವ ಆಸೆ ಇದೆ. ಕೆಂಪಯ್ಯಗಿರುವುದು ಇನ್ನು ಕೇವಲ ಎರಡು ವರ್ಷ ಸರ್ವೀಸ್. ಅಷ್ಟರೊಳಗೆ ಏನೇ ಆಗಲಿ ಬಡ್ತಿ ಸಿಗದಂತೆ ಮಾಡಬೇಕೆಂಬ ಲಾಬಿಯೊಂದಿದೆ. ಕರ್ನಾಟಕದ ಕೆಲ ಹಿರಿಯ ಐಎಎಸ್ ಅಧಿಕಾರಿಗಳು ಇದರ ಹಿಂದಿದ್ದಾರೆ.

ಕೆಂಪಯ್ಯಗೀಗ ಚಟಪಡಿಕೆ. ಒಂದೆಡೆ ತನ್ನ ಕೆರಿಯರ್ ಮುಂದಕ್ಕೋಗಲೊಲ್ಲದು. ಇನ್ನೊಂದೆಡೆ ಭಾರಿ ಆಕಾಂಕ್ಷೆಗಳನ್ನು ಹುಟ್ಟಿಸಿದ್ದ ಅಳಿಯ ದಿನೇಶ್‌ನ ಸ್ಥಿತಿ ಹೀಗಾಗಿದೆ.

ದಾವಣಗೆರೆ

ನಗರಪಾಲಿಕೆ ಆಯುಕ್ತ ಪ್ರಾಣಲಿಂಗ ಶಿವಸಾಲಿಯ ರಕ್ಷಣೆಗೆ ಕಸರತ್ತು

ದಾವಣಗೆರೆ ಮಹಾನಗರ ಪಾಲಿಕೆಗೆ ಆಯುಕ್ತನಾಗಿ ಅಂಟಿಕೊಂಡಿರುವ ಪ್ರಾಣಲಿಂಗ ಶಿವಸಾಲಿ ನೋಡುವುದಕ್ಕೆ ಮಹಾ ಸ್ಟ್ರಿಕ್ಟಾಗಿ ಕಾಣುತ್ತಾನೆ. ಆದರೆ ತಿನ್ನಲು ಸಿಕ್ಕರೆ ಸಾಕು ಇವನು ತಂದಿಯಂತೆ ಬಾಚಿ ಮುಕ್ಕುತ್ತಾನೆ. ಈ ಹಿಂದೆ ದಾವಣಗೆರೆ ನಗರಸಭೆಯಲ್ಲಿಯೇ ಕೆಲಸ ಮಾಡಿದ್ದ ಇವನು ತುಮಕೂರಿಗೆ ವರ್ಗಾವಣೆಯಾಗಿ ಹೋಗಿದ್ದ. ಅಲ್ಲಿ ನವರಂಧ್ರಗಳಿಂದಲೂ ಮುಕ್ಕಲು ಪ್ರಾರಂಭಿಸಿದ್ದಲ್ಲದೆ ಇನ್ನಿಲ್ಲದ ಉಡಾಫೆಗಳನ್ನು ಮಾಡಿದ್ದರಿಂದ ಸರಿಯಾಗಿ ಗೂಸಾ ತಿಂದು ಮತ್ತೆ ದಾವಣಗೆರೆ ಮಹಾನಗರ ಪಾಲಿಕೆಗೆ ವಕ್ಕರಿಸಿಕೊಂಡಿದ್ದಾನೆ.

ಇಲ್ಲಿಗೆ ವರ್ಗವಾಗಿ ಬಂದಾಗ ಇವನು ನಗರಪಾಲಿಕೆಯ ನೌಕರರನ್ನು ಅದ್ಯಾವ ಪರಿ ಥರಗುಟ್ಟಿಸಿದನೆಂದರೆ ಅವರು ತಮ್ಮ ಚಡ್ಡಿಗಳಲ್ಲೇ ಒಂದು-ಎರಡು ಮಾಡಿಕೊಳ್ಳುವುದಷ್ಟೇ ಬಾಕಿ! ಇವನ ಪೂರ್ವಾಪರ ಗೊತ್ತಿಲ್ಲದ ಜನ ಇವನ ಬಗ್ಗೆ "ಭಾರಿ ಸ್ಟ್ರಿಕ್ಟು" ಎಂದರೆ, ಇವನ ವರಸೆಗಳೆಲ್ಲಾ ಗೊತ್ತಿದ್ದವರು "ವಸೂಲಿಗೆ ಬುನಾದಿ ಹಾಕ್ತದಾನೆ" ಎಂದಿದ್ದರು. ಇದೇ ಈಗ ನಿಜವಾಗಿದೆ. ಕಮಿಷನರ್ ಪ್ರಾಣಲಿಂಗ ಶಿವಸಾಲಿಯ ಎಲ್ಲ ಕಂತ್ರಿ ಕೆಲಸಗಳಿಗೆ ತಮ್ಮದೇ ಜಾತಿಯ ಮಂತ್ರಿ ಮತ್ತು ಶಾಸಕರನ್ನೊಳಗೊಂಡು ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿಯೂ ಬೆಂಬಲ ನೀಡಿ ಉಳಿಸಿಕೊಳ್ಳುತ್ತಿರುವುದರಿಂದ ಶಿವಸಾಲಿಯ ಠೇಂಕಾರಗಳಿಗೆ ರೆಕ್ಕೆಪುಕ್ಕ ಮೂಡುತ್ತಿವೆ.

ಶಿವಸಾಲಿಯ ಎತ್ತಂಗಡಿ ಆದೇಶ ನೆಗೆದು ಬಿದ್ದದ್ದು

ದಾವಣಗೆರೆ ಲೋಕಸಭಾ ಸದಸ್ಯ ಸಿದ್ದೇಶ್ ಮತ್ತು ಸಕ್ಕರೆ ಮಂತ್ರಿ ರವೀಂದ್ರನಾಥ್ ಇಬ್ಬರೂ ಸೇರಿ ಮಹಾನಗರ ಪಾಲಿಕೆಯ ಆಯುಕ್ತ ಪ್ರಾಣಲಿಂಗ ಶಿವಸಾಲಿಯನ್ನು ಎತ್ತಂಗಡಿ ಮಾಡಿಸಲು ಸರ್ಕಾರದ ಮೇಲೆ ಒತ್ತಡವನ್ನು ತಂದದ್ದರಿಂದಲೇ ಸರ್ಕಾರದ ಅಧೀನ ಕಾರ್ಯದರ್ಶಿಯಿಂದ ಶಿವಸಾಲಿಯ ವರ್ಗಾವಣೆಯ ಆದೇಶವು ಹೊರಬಿತ್ತು. ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ತೂರಿಬಂದಿದ್ದಾನೆ ಶಿವಸಾಲಿ. ಇಲ್ಲಿ ಆಗಿರುವುದೇನೆಂದರೆ ಶಿವಸಾಲಿಯನ್ನು ವರ್ಗಾವಣೆ ಮಾಡಬೇಕೆಂದು ಈ ಹಿಂದೆ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದ್ದ ಮಂತ್ರಿ ರವೀಂದ್ರನಾಥ್ ಈಗ ಶಿವಸಾಲಿಯ ವರ್ಗಾವಣೆ ರದ್ದುಗೊಳಿಸಿ ದಾವಣಗೆರೆಯ ಮಹಾನಗರ ಪಾಲಿಕೆಯಲ್ಲಿ ಮುಂದುವರೆಸಲು ಪತ್ರ ಬರೆದಿದ್ದಾರೆ! ಈ ಪತ್ರದ ಆಧಾರದ ಮೇಲೆ ಸರ್ಕಾರದ ಅಧೀನ ಕಾರ್ಯದರ್ಶಿ ವರ್ಗಾವಣೆಯನ್ನು ರದ್ದುಗೊಳಿಸುವುದಕ್ಕಾಗಿ ಆದೇಶ ನೀಡಿದ್ದಾರೆ. ಅಧಿಕಾರಿಗಳ ಭ್ರಷ್ಟತೆಯ ರಕ್ಷಾಕವಚವಾಗಿ ರಾಜಕಾರಣಿಗಳು ನಿಂತು ಕಾವಲು ಕಾಯ್ದರೆ ಪ್ರಾಣಲಿಂಗ ಶಿವಸಾಲಿಯಂಥವರು ಚಿರಾಯುವಾಗುತ್ತಾರೆನ್ನುವುದಕ್ಕೆ ಮಂತ್ರಿ ರವೀಂದ್ರನಾಥ್ ಸಾಕ್ಷಿಯಾಗುತ್ತಾರೆ.


ದ್ಯಾಬೇರಿ

ಆಯುಕ್ತ ಪ್ರಾಣಲಿಂಗ ಶಿವಸಾಲಿಯ ಜಾಗಕ್ಕೆ ಗುರುಲಿಂಗಪ್ಪ (ಬೋವಿ ಜನಾಂಗ) ಬರುತ್ತಾನೆಂದು ಗೊತ್ತಾದ ತಕ್ಷಣ ಈಗಾಗಲೇ ಎಲ್ಲಾ ಪ್ರಧಾನ ಕಾಮಗಾರಿ ಗುತ್ತಿಗೆಗಳನ್ನು ಪಡೆದುಕೊಂಡಿರುವ ಮೇಲ್ಜಾತಿಯ ಬಿಜೆಪಿ ಶೂರರಿಗೆ ಮುಕುಳಿ ಉರಿಬಿದ್ದು 'ಶಿವಸಾಲಿಯನ್ನು ವರ್ಗಾಯಿಸುವುದು ಬೇಡ' ಎಂದು ಸಕ್ಕರೆಯ ಮಂತ್ರಿಯ ಮೂತಿಗೆ ಸಿಹಿಯನ್ನು ತಿಕ್ಕಿದ್ದಾರೆ. ಆದರೇನು? ಪ್ರಾಣಲಿಂಗ ಶಿವಸಾಲಿಯು ಮಾತ್ರ ನೋಟಿನ ಕಂತೆಗಳ ಮೂಲಕ ಸಿಹಿಯನ್ನು ನೆಕ್ಕಿಸಿದ್ದರಿಂದ 'ಕುಚ್ ಕಟ್ಟ-ಕುಚ್ ಮೀಠಿ'ಯಿಂದಾಗಿ ರೋಮಾಂಚನಗೊಂಡಿರುವ ಮಂತ್ರಿ ರವೀಂದ್ರನಾಥ್ ಶಿವಸಾಲಿಯನ್ನು ಬಗಲಲ್ಲಿ ಸೇರಿಸಿಕೊಂಡಿದ್ದಾರೆ.

ಶಿವಸಾಲಿ ಮತ್ತು ಧನದ [illegible]

ಪ್ರಾಣಲಿಂಗ ಶಿವಸಾಲಿ ಕೂಡ್ಲಿಗಿ ತಾಲ್ಲೂಕು ಕೊಟ್ಟೂರಿನ ಹತ್ತಿರದ ನಾಗರಕಟ್ಟೆಯವನು. ಜಾತಿ ಮತ್ತು ಹಣ-ಅಧಿಕಾರದ ಬಲದಿಂದ ಬಲಿತು ಹೋಗಿರುವ ಇವನು ಮಂತ್ರಿಮಾನ್ಯರುಗಳಿಗೆ ನೋಟುಗಳಿಂದ ಗಾಳಿ ಬೀಸಿ ತಣ್ಣಗಾಗಿಸುವವನಾಗಿದ್ದಾನೆ. ಹೀಗಾಗಿ ತುಮಕೂರಿನಲ್ಲಿ ನಗರಸಭೆಯ ಆಯುಕ್ತನಾಗಿದ್ದಾಗ ನಡೆಸಿದ ಹಗರಣಗಳೆಲ್ಲ ಗಾಳಿಯಲ್ಲಿ ತೇಲಿಹೋಗಿವೆ. ಈಗ ಶಿವಸಾಲಿ ದಾವಣಗೆರೆಯಲ್ಲಿ ಕುಂತು, ನಗರಸಭೆಯ ಅಂಗುಲಂಗುಲವನ್ನೂ ಗೋರಿಕೊಂಡು ತಿನ್ನುತ್ತಿದ್ದಾನೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ನಗರಪಾಲಿಕೆಯ ಕ್ಯಾಂಟೀನ್‌ಗೆ ಸಂಬಂಧಿಸಿದ್ದು.

ನಗರಪಾಲಿಕೆಯ ಕಾಂಪೌಂಡ್‌ನಲ್ಲೇ ಇರುವ ಕ್ಯಾಂಟಿನ್ ಈ ಹಿಂದೆ 31,000 ರೂ. ತಿಂಗಳ ಬಾಡಿಗೆಗೆ ಒಬ್ಬ ವ್ಯಕ್ತಿಗೆ ಬಹಿರಂಗ ಹರಾಜಾಗಿತ್ತು. ಆತ 25,000 ರೂ. ಮುಂಗಡ ಹಣವನ್ನು ಕಟ್ಟಿ ಪೂರ್ತಿ ಹಣವನ್ನು ಕಟ್ಟದಿದ್ದುದರಿಂದ ಆತನ 25,000 ರೂ.ಗಳನ್ನು ನಗರಪಾಲಿಕೆ ಮುಟ್ಟುಗೋಲು ಹಾಕಿಕೊಂಡಿತು. ನಂತರ ಮಾಡಬೇಕಾದುದ್ದೇನೆಂದರೆ ಪುನಃ ಬಹಿರಂಗ ಹರಾಜಿನಲ್ಲಿ ಕ್ಯಾಂಟೀನನ್ನು ಬಾಡಿಗೆಗೆ ಕೊಡಬೇಕಾಗಿತ್ತು. ಆದರೆ ಯಾವುದೇ ಹರಾಜನ್ನು ನಡೆಸದೆ ಆಯುಕ್ತ ಶಿವಸಾಲಿ ಕಳ್ಳದಾರಿಯಲ್ಲಿ ಕೇವಲ 6,400.00 ರೂ. ತಿಂಗಳ ಬಾಡಿಗೆಗೆ ಕ್ಯಾಂಟೀನನ್ನು ಬೇರೊಬ್ಬ ವ್ಯಕ್ತಿಗೆ ಕೊಟ್ಟುಬಿಟ್ಟಿದ್ದಾನೆ.

ಬಹಿರಂಗ ಹರಾಜಿನಲ್ಲಿ ಬಾಡಿಗೆಗೆ ಕೊಟ್ಟಿದ್ದರೆ ತಿಂಗಳಿಗೆ 15 ಸಾವಿರಕ್ಕೆ ಕಡಿಮೆ ಇಲ್ಲದಂತೆ ಕ್ಯಾಂಟೀನಿನ ಬಾಡಿಗೆ ಹಣ ಮಹಾನಗರ ಪಾಲಿಕೆಗೆ ಬರುತ್ತಿತ್ತು. ಆದರೆ ನಗರಸಭೆ-ನಗರಪಾಲಿಕೆಯ ಕೇಕನ್ನೇ (ಕೆಟ್ಟ ಪದದ ಬದಲು ಕೆಲವು ಕುಹಕಿಗಳು ಮುನಿಸಿಪಾಲಿಟಿ ಕೇಕ್ ಎನ್ನುತ್ತಾರೆ!) ಪ್ರಾರಂಭದಿಂದಲೂ ತಿಂದು ರೂಢಿಸಿಕೊಂಡಿರುವ ಶಿವಶಾಲಿ ನಗರಸಭೆಯ ಮಾಜಿ ಅಧ್ಯಕ್ಷ ಕೆ.ಜಿ.ಶಿವಕುಮಾರನನ್ನು ಮಧ್ಯವರ್ತಿಯನ್ನಾಗಿಟ್ಟುಕೊಂಡು ಒಂದು ಲಕ್ಷ ರೂ. ಡೀಲು ಕುದುರಿಸಿಕೊಂಡ ನಂತರವೇ ಕ್ಯಾಂಟೀನ್ ಬಾಡಿಗೆಗೆ ಬಿಕರಿಯಾಗಿದೆ.

ಅಂದಹಾಗೆ ಈ ಕೆ.ಜಿ. ಶಿವಕುಮಾರ ನಗರಪಾಲಿಕೆಯ ಅಧಿಕಾರಿಗಳು ನಡೆಸುವ ಡೀಲಿಂಗುಗಳಲ್ಲಿ ಯಾವಾಗಲೂ ಪ್ರಮುಖ ಪಾತ್ರ ವಹಿಸುತ್ತಾನೆ. ಅಧಿಕಾರಿಗಳು ಯಾವುದೇ ಡೀಲಿಂಗು ನಡೆಸುವಾಗಲೂ ಶಿವಕುಮಾರನಿಗೆ ಮಹಾರಾಜ ಚೇರು ಹಾಕಿ ಕೂರಿಸುತ್ತಾರೆನ್ನುವುದು ದಾವಣಗೆರೆಯ ದುಗ್ಗಮ್ಮನಾಣೆಗೂ ಸತ್ಯ!

ಎರಡನೆಯ ಉದಾಹರಣೆ ಎಂದರೆ ನಗರಸಭೆಯ ಪಕ್ಕದ ಬಲಭಾಗದ ರಸ್ತೆಯಲ್ಲಿ ನಗರಪಾಲಿಕೆಯಿಂದ 13 ದೊಡ್ಡ ಸಾಲು ಮಳಿಗೆಗಳನ್ನು ನಿರ್ಮಿಸಿ ಒಂದು ವರ್ಷವೇ ಕಳೆದುಹೋಗಿದೆ. ಇವುಗಳಲ್ಲಿ ನಾಲ್ಕು ಮಳಿಗೆಗಳು ಮಾತ್ರ ಪ್ರಾರಂಭವಾಗಿ ನಗರಪಾಲಿಕೆಗೆ ಇವುಗಳಿಂದ ಬಾಡಿಗೆ ಬರುತ್ತದೆ. ಉಳಿದ 9 ಮಳಿಗೆಗಳು ಮುಚ್ಚಿದಹಾಗೆಯೇ ಇವೆ! ಕಾರಣವೇನೆಂದರೆ ನಗರಸಭೆಯ ಮಾಜಿ ಅಧ್ಯಕ್ಷರುಗಳಾದ ಕೆ.ಜಿ.ಶಿವಕುಮಾರ, ದಿನೇಶ್ ಶೆಟ್ಟಿ, ಡಿ.ಬಸವರಾಜ ಮತ್ತು ಕೆಲವು ಕೌನ್ಸಿಲರುಗಳು ಬೇರೆಯವರ ಹೆಸರುಗಳಲ್ಲಿ ಇವುಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಕಳ್ಳದಾರಿಯಲ್ಲಿ ಈ ಮಳಿಗೆಗಳನ್ನು ಯಾರಿಗಾದರೂ ಆನ್‌ನಲ್ಲಿ ಕೊಟ್ಟು ಹಣ ಬಾಚಿಕೊಳ್ಳಲು ಇವರು ಕಾಯುತ್ತಾ ಕುಂತಿದ್ದಾರೆ.

ಪೂರ್ತಿ ಹಣವನ್ನು ಕಟ್ಟಿ ಮೂರು ತಿಂಗಳೊಳಗೆ ಸಂಬಂಧಿಸಿದ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು ಇಲ್ಲದಿದ್ದರೆ ನಗರಪಾಲಿಕೆ ಅಂತಹ ಕಟ್ಟಡಗಳನ್ನು ಪುನಃ ಹರಾಜು ಹಾಕಿ ಬೇರೆಯವರಿಗೆ ಬಾಡಿಗೆ ಕೊಡಬೇಕೆಂಬ ನಿಯಮವಿದೆ. ಸ್ವಲ್ಪ ಮುಂಗಡ ಹಣ ಕಟ್ಟಿ ಮುಗುಂ ಆಗಿರುವವರ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂತಲೂ ಈ ನಿಯಮ ಸೂಚಿಸುತ್ತದೆ. ಆದರೆ ಈ ಮಾಜಿ ಅಧ್ಯಕ್ಷರುಗಳು ಒಂದು ಲಕ್ಷ ರೂ.ವನ್ನು ಮಾತ್ರ ಕಟ್ಟಿ ಉಳಿದ ಎರಡು ಲಕ್ಷವನ್ನು ಬಾಕಿ ಉಳಿಸಿಕೊಂಡು ವರ್ಷವಾಗುತ್ತಾ ಬಂದರೂ ಮುಚ್ಚಿದ ಮಳಿಗೆಗಳಿಗೆ ಮೋಕ್ಷವನ್ನು ನೀಡಲು ಶಿವಸಾಲಿ ಇಷ್ಟ ಪಡುತ್ತಿಲ್ಲ.

ಕಾರಣವೇನೆಂದರೆ ಇವರನ್ನು ಎದುರು ಹಾಕಿಕೊಂಡರೆ ತನ್ನ ಲಂಚದ ಒರತೆಗಳಿಗೆ ಅಡ್ಡಿಯನ್ನುಂಟು ಮಾಡುತ್ತಾರೆಂಬ ಲೆಕ್ಕಾಚಾರ ಪ್ರಾಣಲಿಂಗ ಶಿವಸಾಲಿಯದು. ಕೌನ್ಸಿಲರ್ ಎಂ.ಹೆಚ್. ಬಕ್ಕೇಶ್ ಗಲಾಟೆ ಎಬ್ಬಿಸಿ ನಾಲ್ಕು ಮಳಿಗೆಗಳನ್ನು ಹರಾಜು ಮಾಡಿಸಿದ್ದರಿಂದ ತಿಂಗಳಿಗೆ 24,000 ರೂ. ನಗರಪಾಲಿಕೆಗೆ ಬಾಡಿಗೆ ಬರುತ್ತಿದೆ. ಉಳಿದ 9 ಮಳಿಗೆಗಳಿಂದ ಬಾಡಿಗೆ ಬರದೆ ನಗರಪಾಲಿಕೆಗೆ ಪ್ರತಿ ತಿಂಗಳು 54,000 ರೂ. ನಷ್ಟವಾಗುತ್ತಿದೆ! ನಷ್ಟವಾಗುತ್ತಿರುವುದು ನಗರಪಾಲಿಕೆಗೆ ಮಾತ್ರ ತಾನೆ! ಇದರ ಆಯುಕ್ತ ಶಿವಸಾಲಿ ಮತ್ತು ಮಾಜಿ ಅಧ್ಯಕ್ಷರುಗಳು ಹಾಗೂ ಕೌನ್ಸಿಲರಿಗಲ್ಲವಲ್ಲ!

ಜಿಲ್ಲಾಧಿಕಾರಿ-ಕಮೀಷನರ್ ಭಾಯಿ! ಭಾಯಿ!

ಶಿವಸಾಲಿ ನಗರಪಾಲಿಕೆ ಅಧ್ಯಕ್ಷ ಮತ್ತು ಕೌನ್ಸಿಲರುಗಳನ್ನಷ್ಟೇ ಅಲ್ಲ, ತನ್ನನ್ನು ಒಳಗೊಂಡು ಜಿಲ್ಲೆಯನ್ನು ನಿಯಂತ್ರಿಸುವ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿಯನ್ನು ಕೂಡ ತೆಕ್ಕೆಯಲ್ಲಿಟ್ಟುಕೊಂಡಿದ್ದಾನೆ. ಇವರ ಈ ಸಂಬಂಧ ಈಗಿನದಲ್ಲ. ಈ ಹಿಂದೆ ಇವರೀರ್ವರು ತುಮಕೂರಿನಲ್ಲಿ ಇದೇ ಸ್ಥಾನಗಳಲ್ಲಿದ್ದು ಕಂಠಸ್ಥ-ಗಳಸ್ಯರಾಗಿ ದೋಚಿದ್ದರಿಂದಲೇ ಗಲಾಟೆಗಳಾಗಿ ಅಲ್ಲಿಂದ ಹೊರಬಂದಿದ್ದರು.

ಈಗ ಶಿವಸಾಲಿಯ ವರ್ಗಾವಣೆಯ ವಿಷಯ ತಿಳಿದ ತಕ್ಷಣ ಜಿಲ್ಲಾಧಿಕಾರಿ ದ್ಯಾಬೇರಿ ಬೆಳಕಿನ ವೇಗದಲ್ಲಿ ತನ್ನ ಜಾತಿಬಾಂಧವ ಎಂ.ಎಲ್.ಸಿ ಶಿವಶಂಕರ್ ಬೆನ್ನುಹತ್ತಿ ಎಲ್ಲ ಒತ್ತಡಗಳನ್ನು ಸೃಷ್ಟಿಸಿ ಶಿವಸಾಲಿಯ ವರ್ಗಾವಣೆಗೆ ತಡೆಯೊಡ್ಡುತ್ತಾನೆಂದರೆ ಅರ್ಥವೇನು? ಶಿವಸಾಲಿ ತನ್ನ ಜಾತ್ಯಸ್ಥನೆಂದೆ? ಅಥವಾ ಕಮಾಯಿ ಯಲ್ಲಿನ ಪಾಲುದಾರನೆಂದೆ? ಎನ್ನುವ ಅನುಮಾನಗಳು ಉದ್ಭವಿಸಿ ಅಮೇಧ್ಯ ಮುಕ್ಕುವ ವಿಷಯದಲ್ಲಿ ಈ ಇಬ್ಬರಲ್ಲಿ ಯಾರಿಗೆ ಯಾರೂ ಕಡಿಮೆಯಿಲ್ಲ ಎಂಬಲ್ಲಿ ಕೊನೆಗೊಳ್ಳುತ್ತವೆ.

ಸ್ವಲ್ಪ ವ್ಯತ್ಯಾಸವೇನೆಂದರೆ ಶಿವಸಾಲಿ ಎರಡೂ ಕೈಗಳಿಂದ ಬಾಚಿ ತಿಂದರೆ, ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ತನ್ನ ಕಾರ್ಯಕ್ಷೇತ್ರ ವಿಶಾಲವಾದ್ದರಿಂದ ಪರಿಸ್ಥಿತಿಗೆ ತಕ್ಕಂತೆ ಚಮಚಗಳಿಂದ ತಿನ್ನುತ್ತಾನೆ. ಹೇಗೆಂದರೆ: ಇತ್ತೀಚೆಗೆ ಕೆಲಸವೇ ಆಗಿರದಿದ್ದ ಆಲೂರು ಗೋಕಟ್ಟೆಗೆ 8 ಲಕ್ಷ ರೂ. ಬಿಲ್ಲು ಪಾಸು ಮಾಡಿರುವ ಬಗ್ಗೆ ರಾಜ್ಯ ಕಂದಾಯ ಇಲಾಖೆಯ ಕಾರ್ಯದರ್ಶಿ ಎಂ.ಎಮ್. ಜಾಮದಾರ್‌ರಿಂದ ತನಿಖೆ ನಡೆದು ಅವ್ಯವಹಾರ ಹೊರಗೆ ಬಿದ್ದಾಗ ಜೂನಿಯರ್ ಇಂಜಿನಿಯರ್ ರವಿ ಹಾಗೂ ಉಮಾದೇವಿ ಎಂಬ ಗ್ರಾಮ ಪಂಚಾಯ್ತಿಯ ಕಾರ್ಯದರ್ಶಿಯನ್ನು ಅಮಾನತುಗೊಳಿಸಲಾಯಿತು. ಇದನ್ನು ತೆರೆಯ ಹಿಂದೆ ನಿಂತು ನೋಡುತ್ತಿದ್ದವನೇ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ-ಇದು ಈತನ ನಸುಗುನ್ನಿ ವೈಖರಿ ಕೂಡ.

ಈ ವಿಷಯದಲ್ಲಿ ಶಿಕ್ಷೆ ಏನಾದರೂ ಆದರೆ ಯಾವುದೇ ತನಿಖೆಯನ್ನು ನಡೆಸದೆ ಕಮೀಷನ್ ಆಸೆಗಾಗಿ 8 ಲಕ್ಷ ರೂ. ಬಿಲ್ಲನ್ನು ಪಾಸು ಮಾಡಿದ ಜಿಲ್ಲಾಧಿಕಾರಿಗೆ ಆಗಬೇಕು. ಒಟ್ಟಿನಲ್ಲಿ ಕಮೀಷನರ್ ಶಿವಸಾಲಿ ಮ… ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ಈ ಇಬ್ಬರು ಬಾಯಿ… ಬಾಯಿ ಸೇರಿಸಿ ತಿನ್ನುವ ಮೂಲಕ ಭಾಯಿ- ಭಾ… ಯಾಗಿದ್ದಾರೆ.

ನಗರಸಭೆ-ನಗರಪಾಲಿಕೆಗಳ ಚುನಾವಣೆಗ… ಮುಂದೆ ಹೋಗಿರುವ ಕಾರಣಗಳನ್ನು ಬಳಸಿಕೊಂ… ಭದ್ರವಾಗಿ ನೆಲೆಯೂರುತ್ತಿದ್ದಾನೆ. ಶಿವಸಾಲಿ. ಆ… ಜಾತಿಪ್ರಜ್ಞೆಯೇ ಪ್ರಧಾನವೆನ್ನುವ ಮಂತ್ರಿಮಾನ್ಯ… ಕಮಾಯಿಯಲ್ಲಿನ ಪಾಲುದಾರರು, ಶಿವಸಾಲಿಯ… ದೂರ ಕಳುಹಿಸಲಾಗದ ಜಿಲ್ಲಾಧಿಕಾರಿ ದ್ಯಾಬೇರಿಯಿಂ… ರಿಂದಾಗಿ ಪ್ರಾಣಲಿಂಗ ತನ್ನ ಸ್ಥಾನವನ್ನು ಇಲ್ಲಿ… ಭದ್ರಮಾಡಿ ಕೊಂಡಿದ್ದಾನೆ. ಇದೆಲ್ಲದರಿಂದ ದಾವಣ… ಮಹಾನಗರ ಪಾಲಿಕೆಗೆ ಎಡಿಬಿಯಿಂದ ಮಂಜೂರ… ರುವ ರೂ.88 ಕೋಟಿ, ಕೇಂದ್ರ ಸರ್ಕಾರದಿ… ಮಂಜೂರಾಗಿರುವ ರೂ.65 ಕೋಟಿಗಳು ಜ… ಮೂಲಭೂತ ಅವಶ್ಯಕತೆ ಗಳನ್ನು ಪೂರೈಸುವು… ವೆಚ್ಚವಾಗದೇ ಶಿವಸಾಲಿ ಅಂಡ್ ಕಂಪನಿಯ ದ… ಕೂಟದ ಪಾಲಾಗುವುದಂತೂ ಖಂಡಿತವಾಗಿದೆ.

-ಚಂದ್ರಶೇಖರ್ ತೋರಣಘ…

ಅಂತಿಂಥವನಲ್ಲ ಈ ಪ್ರಾಣಲಿಂಗ!

ಪ್ರಾಣಲಿಂಗ ಶಿವಸಾಲಿ ಅದೆಷ್ಟು ಉಡಾಫೆ… ವನೆಂದರೆ ಸಾರ್ವಜನಿಕರು ಹಾಗೂ ತಳಮಟ್ಟ… ಜನಪ್ರತಿನಿಧಿಗಳು ಯಾವುದಾದರೂ ಕೆಲಸಕ್ಕಾಗಿ ಇ… ಹತ್ತಿರ ಹೋದರೆ ಶಿವಸಾಲಿ ಮುಖಕೊಟ್ಟು ಮಾತ… ಡುವುದಿಲ್ಲ, ನಗರಪಾಲಿಕೆ ಇವನಪ್ಪನ ಆಸ್ತಿ ಎಂಬಂ… ಕಚೇರಿಗೆ ಬಂದವರನ್ನು ಹೊರದಬ್ಬಲು ಹೇಳುತ್ತಾ… ತೀರಾ ಇತ್ತೀಚೆಗೆ CPIಪಕ್ಷದ ಆವರೆಗೆರೆ ಉಮೇ… ರೊಂದಿಗೆ ಇದೇ ರೀತಿ ವರ್ತಿಸಿದಾಗ ತಿರುಗಿಬ… ಉಮೇಶ್ ಶಿವಸಾಲಿಗೆ ನೀರಿಳಿಸಿದ್ದಾರೆ.

ಶಿವಸಾಲಿ ಹೊರಗಿನವರೊಂದಿಗೆ ಅಲ್ಲ, ತ… ಕೈಕೆಳಗಿನ ಉದ್ಯೋಗಿಗಳೊಂದಿಗೂ ತೀರಾ ಅಸಹ್ಯವಾ… ವರ್ತಿಸಿದ್ದಾನೆ. ಯಾವುದೋ ಫೈಲಿಗೆ ಸಹಿ ಮಾಡಲ… ಕೇಳಿದ್ದಕ್ಕೆ ಗೋವಿಂದನಾಯ್ಕ ಎಂಬ ಹೆಡ್‌ಗುಮಾ… ಕೆನ್ನೆಗೆ ಹೊಡಿಸಿಕೊಂಡಿದ್ದಾರೆ. ಇದೇ ರೀತಿ ಪ್ರ… ವಿಭಾಗದ ಗೋವಿಂದನಾಯ್ಕ ಶಿವಸಾಲಿಯಿಂದ … ತಿಂದಿದ್ದಾರೆ. ಧರಣೇಶ ಎನ್ನುವ ಇಂಜಿನಿಯರ್ ಮೇಲ… ಕೈ ಮಾಡಲು ಹೋದಾಗ ಅಲ್ಲಿದ್ದವರು ತಡೆ… ಸ್ವಲ್ಪ ಖಾರವಾಗಿ ಮಾತನಾಡಿದಾಗ ಶಿವಸಾಲಿ ಅದು… ಕೊಂಡಿದ್ದಾನೆ.

ಶಿವಸಾಲಿಗೆ ಬಿ.ಪಿ. ಇದ್ದರೆ ದಾವಣಗೆರೆಯ… ದಂಡಿಯಾಗಿರುವ ವೈದ್ಯರ ಹತ್ತಿರ ಹೋಗಿ ಮಾ… ತಿಂದು ಸೂಜಿ ಚುಚ್ಚಿಸಿಕೊಂಡರೆ ಬಿ.ಪಿ. ಇಳಿ… ಬಹುದು. ಅದು ಬಿಟ್ಟು ತನ್ನ ವರ್ತನೆಗಳನ್ನು ಇದೇರೀ… ಮುಂದುವರೆಸಿದರೆ ಮುಂದಿನ ದಿನಗಳಲ್ಲಿ ಸಾರ್ವಜನಿ… ರಿಂದ ಮೂತಿಗಿಕ್ಕಿಸಿಕೊಳ್ಳುವುದು ಗ್ಯಾರಂಟಿ!

ಸಾಹಿತಿ ಎನ್ನುವ ಆರೋಪ ಹೊತ್ತಿರುವ ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾದದ್ದಕ್ಕೆ ತುಳು, ಕೊಡವ ಮತ್ತು ಕೊಂಕಣಿ ಭಾಷೆಗಳ ಅಕಾಡೆಮಿಗಳು ಹುಟ್ಟಿಕೊಂಡದ್ದು ಹಳೆಯ ಮಾತು. ಈ ಅಕಾಡೆಮಿಗಳ ದೆಸೆಯಿಂದ ಈ ಪ್ರಾದೇಶಿಕ ಭಾಷೆ ಮತ್ತದರ ಸಂಸ್ಕೃತಿ ಎಷ್ಟರಮಟ್ಟಿಗೆ ಉದ್ಧಾರವಾಯಿತು ಎನ್ನುವುದನ್ನು ಬೇರೆಯೇ ಬರೆಯಬೇಕು. ಈಗ ಹೊಸ ಸುದ್ದಿಯೇನೆಂದರೆ, ಬ್ಯಾರಿ ಭಾಷೆಗೂ ಒಂದು ಸಾಹಿತ್ಯ ಅಕಾಡೆಮಿ ಬೇಕು ಎನ್ನುವ ಕೂಗು. ಬ್ಯಾರಿಗಳ ವಿವಿಧ ನಿಯೋಗಗಳು ಸರ್ಕಾರದ ಮೇಲೆ ಮಾಡಿದ ಹಕ್ಕೊತ್ತಾಯದ ಫಲವಾಗಿ ಸುವರ್ಣ ಕರ್ನಾಟಕ ವರ್ಷ ಮುಗಿಯುವುದರೊಳಗೆ ಬ್ಯಾರಿ ಅಕಾಡೆಮಿಯನ್ನು ಘೋಷಿಸಲಾಗುವುದು ಎನ್ನುವ ವಾಗ್ದಾನ ಮಂತ್ರಿ ಮಹದೇವಪ್ರಸಾದ್ ಕಡೆಯಿಂದ ದೊರೆತಿದೆ.

ಈಗ ವಿಷಯ ಅಕಾಡೆಮಿಯದ್ದಲ್ಲ ಅಧ್ಯಕ್ಷನದ್ದು. ಈ ಬ್ಯಾರಿ ಅಕಾಡೆಮಿಯ ಅಧ್ಯಕ್ಷನಾಗುವ ಲಾಬಿ-ಪೈಪೋಟಿಗಳು ಶುದ್ಧ ವ್ಯಾಪಾರವೇ ಆಗಿಬಿಟ್ಟಿದೆ. ಹಾಗೆ ನೋಡಿದರೆ 'ಬ್ಯಾರಿ' ಎನ್ನುವ ಶಬ್ದ ಸೂಸುವ ಅರ್ಥವೇ ವ್ಯಾಪಾರಿ. ತುಳು ಭಾಷೆಯಲ್ಲಿ ವ್ಯಾಪಾರಕ್ಕೆ ಬ್ಯಾರ ಎನ್ನುವ ಅರ್ಥವಿದೆ. ತುಳುವಿನಂತೆ ಬ್ಯಾರಿ ಭಾಷೆಗೂ ಲಿಪಿ ಇಲ್ಲ, ಬ್ಯಾರಿ ಭಾಷೆ ಕ್ಯಾಸೆಟ್ ಮೂಲಕ, ಮೌಖಿಕ ಸಾಹಿತ್ಯವಾಗುವ ಮೂಲಕ ಮತ ಪ್ರಸಂಗಗಳ ಮೂಲಕ ಜನಪ್ರಿಯವಾಗಿದೆ. ಯಾವತ್ತು ಬ್ಯಾರಿ ಸಾಹಿತ್ಯ ಸಮ್ಮೇಳನ, ಬ್ಯಾರಿ ಸಾಹಿತ್ಯ ಪರಿಷತ್ತುಗಳು ಹುಟ್ಟಿಕೊಂಡವೋ... ಬ್ಯಾರಿ ಭಾಷೆಯನ್ನು ಕನ್ನಡ ಲಿಪಿಯಲ್ಲಿ ಬರೆಯುವ ಸಾಹಿತಿ, ಕವಿಗಳು ಹುಟ್ಟಿಕೊಂಡರು.

ಬ್ಯಾರಿ ಸಾಹಿತ್ಯ ಅಕಾಡೆಮಿ ಎಂಬ ಕೂಗಿನ ಮೂ… ಬೆಂಗಳೂರಿನ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಷ… ಎಂಬ ಸಂಘ. ಇದು ಬ್ಯಾರಿ ಭಾಷೆಯ ಉದ್ಧಾರಕ್ಕೆಂ… ಹುಟ್ಟಿದ ಸಂಘವೇನಲ್ಲ, ಜೇಸಿ, ಲಯನ್ಸ್‌ಗಳ… ಬೆಂಗಳೂರಿನಲ್ಲಿ ನೆಲೆಸಿರುವ ಬ್ಯಾರಿ ಭಾಷಿಗರು ಸ… ಅಸೋಸಿಯೇಷನ್ ಕಟ್ಟಿ ಕೆಲವು ಚಟುವಟಿಕೆಗಳ… ನಿರತರಾಗಿದ್ದರು. ಅದು ತನ್ನ ದಶಮಾನೋತ್ಸ… ಸಂದರ್ಭದಲ್ಲಿ ಬ್ಯಾರಿಗಳ ಮೂಲ ದಕ್ಷಿಣ ಕನ್ನಡ ಜಿಲ್ಲೆ… ಬಂಧುಗಳಿಗೆ ಸದರಿ ಸಮಾರಂಭದಲ್ಲಿ ಸಾಂಸ್ಕೃ… ಕಾರ್ಯಕ್ರಮ ನಡೆಸಲು ಕೇಳಿಕೊಂಡರು. ಇ… ಬ್ಯಾರಿಗಳು ಸಂಘಟಿತರಾಗಿ ನಡೆಸಿದ ಮೊದಲ ಸಾಂಸ್ಕೃ… ಕಾರ್ಯಕ್ರಮ.

ಹೀಗೆ ಸಾಂಸ್ಕೃತಿಕ ಕಾರ್ಯಕ್ರಮ ನೆಪದಲ್ಲಿ ಒಟ್ಟಾ… ದಕ್ಷಿಣ ಕನ್ನಡ ಜಿಲ್ಲೆಯ 11 ಮಂದಿ ಬ್ಯಾರಿ ಮುಂದಾ… ಗಳು ಮಂಗಳೂರಿಗೆ ಬಂದು 1997 ರಲ್ಲಿ ಕಟ್ಟಿ… ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ. ಇ… ನೇತೃತ್ವದಲ್ಲಿ ಪ್ರಥಮವಾಗಿ ಮಂಗಳೂರಿನ ಪುರಭವನದ… ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರ… ಜರುಗಿತು. ಕರಾವಳಿಯ ಮಟ್ಟಿಗೆ ಬ್ಯಾರಿಗಳೆಂದ… ಮುಸ್ಲಿಮರು. ಈ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗ… ನಮಗೆ ಹೇಳಿದ್ದಲ್ಲ ಎನ್ನುವ ಟೀಕೆಗಳು ಕಟ್ಟಾ… ಸಂಪ್ರದಾಯವಾದಿಗಳ ಕಡೆಯಿಂದ ಬಂದಾಗ… ಕಾರ್ಯಕ್ರಮ ನಿರೀಕ್ಷೆ ಮೀರಿ ಯಶಸ್ವಿಯಾ… ಮುಂದೇನು ಎನ್ನುವ ಪ್ರಶ್ನೆ ಉದ್ಭವಿಸಿ ಸಾಹಿತ್ಯ ಸಮ್ಮೇ…

ಕಾಂಗ್ರೆಸ್‌ನವರು ಓಟು ಕೀಲೋಕ ಬಂದ್ರೆ ಕುಂದಿಗೆ ಹಾಕಿರಿ ಅಂತ ಮೊನ್ನೆ ಗಂಗಾವತಿಯಲ್ಲಿ ಸಯಾತ್ರೆ ಬಂದಾಗ ಬಿಜೆಪಿಗಳ ಕುಟುಕಿಗೆ ಗಪ್ ಕಾಂಗ್ರೆಸ್‌ನವರು ಈಗ ಅದೇ ಬಿಜೆಪಿ ಜೊತೆ ದ್ದಾರೆ. ಅಯ್ಯಪ್ಪಸ್ವಾಮಿಯ ಅನಧಿಕೃತ ಕಟ್ಟಡದ ಸ್‌ಮೆಂಟ್‌ನ್ನು ತಹಶೀಲ್ದಾರ್ ಕಿತ್ತೆಸೆದದ್ದನ್ನು ಬಳಸಿ ಡು ಶಾಂತವಾಗಿದ್ದ ಗಂಗಾವತಿಗೆ ಕಿಚ್ಚಿಡುತ್ತಿದ್ದಾರೆ. 'ಕಾಂಗ್ರೆಸ್ ಕಾ ಹಾಥ್, ಆಮ್ ಆದ್ಮಿಕೆ ಸಾಥ್' ಘೋಷಣೆಯನ್ನು ಬದಲಾಯಿಸಿಕೊಂಡು ಗ್ರೆಸ್ ಕಾ ಹಾಥ್, ಬಿಜೆಪಿ ಕೆ ಸಾಥ್' ಎನ್ನುತ್ತ ಟ್ಟುತ್ತಲೇ ಚೆಡ್ಡಿ ತೊಟ್ಟು ಬಂದವರಂತೆ ತ್ತಿರುವ ಮಾಜಿ ದ ಮಲ್ಲಿಕಾರ್ಜುನ ಪ್ಪ, ಎಂಎಲ್‌ಸಿ ಾಥ್, ಬ್ಲಾಕ್ ಗ್ರೆಸ್ ಅಧ್ಯಕ್ಷ ್ರಮಸ್ವಾಮಿ, ಮಾಭಾರತಿಯ ತಂಗಿಯಂತೆ ಆಡುತ್ತಿರುವ ಡಿಸಿಸಿ ಕ್ಷೆ ಆಂಧ್ರಮ್ಮ ಲಲಿತಾರಾಣಿ- ರನ್ನೆಲ್ಲ ನೋಡಿ ಸ್ವತಃ ಚೆಡ್ಡಿಗಳೇ ಾಗಿಹೋಗಿದ್ದಾರೆ.

ಗಂಗಾವತಿ

ಇಷ್ಟು ದಿನ ಕೊಪ್ಪಳ ಜಿಲ್ಲೆಯಲ್ಲಿ ೈಕ್ಯ ಬೆಸೆಯುವ ಕುಟುಂಬ ಎಂದೇ ರಾಗಿದ್ದ ಭಾವೈಕ್ಯ ನಿಧಿ ಎಂ.ಎಸ್. ್ಸಾರಿಯ ಮಗ ಇಕ್ಬಾಲ್ ಅನ್ಸಾರಿ ್ನು ಕೋಮುವಾದಿ ಎಂದು ಬಿಂಬ ್ತು ಬಿಜೆಪಿ. ಇದರಿಂದ ಆ ಪಕ್ಷ ಕೀಯ ಲಾಭ ಪಡೆದದ್ದನ್ನೂ ಕಂಡ ಗ್ರೆಸ್ ಕೂಡ ಈಗ ಸಾಫ್ಟ್ ಹಿಂದೂತ್ವ ್ನು ಪ್ರತಿಪಾದಿಸುತ್ತಿದೆ. ಹೀಗಾಗಿ ಕಾಂಗ್ರೆಸ್‌ನ ಂಪರಿಕ ಮತದಾರರು ಆತಂಕಕ್ಕೊಳಗಾಗಿದ್ದರೆ, ಾವತಿ ನಗರವಂತೂ ಒಂದು ವಾರದ ಹೊತ್ತು ಕದಲ್ಲಿ ಕುಂತಿದೆ. ಅನ್ಸಾರಿಯನ್ನು ಕೆಡವಬೇಕೆಂಬ ಿಗೆ ಅಯ್ಯಪ್ಪಸ್ವಾಮಿಯ ಅನಧಿಕೃತ ಕಟ್ಟಡದ ್‌ಮೆಂಟ್ ಧ್ವಂಸವೇ ಒಂದು ನೆಪವಾಗಿ ಬಿಟ್ಟಿದೆ.

ಆಗಿದ್ದೇನೆಂದರೆ ಆನೆಗೊಂದಿ ರಸ್ತೆಯ ಸಾಯಿನಗರ ೇ ನಂಬರ್ 35 ರಲ್ಲಿ 1.26 ಗುಂಟೆ ಜಾಗದಲ್ಲಿ 2 ರಲ್ಲಿ ಅಯ್ಯಪ್ಪಸ್ವಾಮಿ ದೇವಸ್ಥಾನ ಕಟ್ಟಡಕ್ಕೆ ಗಲ್ಲು ಹಾಕಿ ಬೇಸ್‌ಮಂಟ್‌ವರೆಗೆ ಕೆಲಸ ಮಾಡಲಾ ಹಾಗೆ ನೋಡಿದರೆ ಕಟ್ಟಡ ಕಟ್ಟಲು ತಹಶೀಲ್ದಾರ್ ್ಮಿಷನ್ ಕೊಟ್ಟಿರಲಿಲ್ಲ. ಆದರೂ ಇದೇ ಸರ್ಕಾರಿ ದಲ್ಲಿ ಅಡಿಗಲ್ಲು ಸಮಾರಂಭ ಮಾಡಿದ್ದು ಅಂದಿನ ತ್ರಿ ಮಲ್ಲಿಕಾರ್ಜನ ನಾಗಪ್ಪ. ಈಗ ಎರಡು ಗಳಿಂದ ಇದೇ ಸರ್ಕಾರಿ ಜಾಗದಲ್ಲಿ ಬೃಹತ್ತಾದ ವಿಧಾನಸೌಧ ನಿರ್ಮಾಣ ಮಾಡಲಾಗಿದೆ. ಕೆಲವೇ ಗಳಲ್ಲಿ ಇದರ ಉದ್ಘಾಟನೆಯೂ ನಡೆಯಲಿದೆ. ಈ ವಿಧಾನಸೌಧದ ಸುತ್ತಮುತ್ತ ಇದ್ದ ಅನಧಿಕೃತ ಸಲುಗಳನ್ನು ತೆರವುಗಳಿಸಿದಂತೆ ಏಪ್ರಿಲ್ 20 ಅಯ್ಯಪ್ಪಸ್ವಾಮಿ ದೇವಸ್ಥಾನದ ಬೇಸ್‌ಮೆಂಟ್‌ನ್ನು ್ರಗೊಳಿಸಲು ಡಿವೈಎಸ್‌ಪಿ ಕೃಷ್ಣಪ್ಪ ಮತ್ತು ಸಿಬ್ಬಂದಿ ಜೊತೆ ತಹಶೀಲ್ದಾರ್ ಹೊಸಮನಿ ಹೋಗಿದ್ದಾರೆ. ಆಗ ಭಕ್ತರೆನಿಸಿಕೊಂಡ ಕೆಲವರು ಅಡ್ಡಿಪಡಿಸಿದಾಗ ಅವರನ್ನು ಬಂಧಿಸಿದರೂ ಅವರ ಮೇಲೆ ಯಾವುದೇ ಕೇಸ್ ಹಾಕಲಿಲ್ಲ.

ಆಗಿದ್ದು ಮಾತ್ರ ಇಷ್ಟು. ಆದರೆ ಅನ್ಸಾರಿ ವಿರುದ್ಧ ಜನರನ್ನು ಜಾತಿ-ಧರ್ಮಗಳ ಹೆಸರಲ್ಲಿ ಎತ್ತಿಕಟ್ಟಲು ಕಾಯುತ್ತಿದ್ದ ಬಿಜೆಪಿಗೆ ಇದೇ ನೆಪವಾಗಿ ಬೇಸ್‌ಮೆಂಟ್ ಧ್ವಂಸಗೊಳಿಸುವಲ್ಲಿ ಅನ್ಸಾರಿ ಕೈವಾಡ ಎಂದು ಹುಯಿಲೆಬ್ಬಿಸಿದರು. ತಹಶೀಲ್ದಾರನನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಆತುರಗೆಟ್ಟಂತೆ "ಹೌದು ನಾನೇ ಹೇಳಿದ್ದೆ" ಎಂದು ಅನ್ಸಾರಿ ಎಂದಿದ್ದೇ ಅವರಿಗೆ ಮತ್ತಷ್ಟು ಇಂಬುಕೊಟ್ಟಂತಾಯಿತು.


ಇಕ್ಬಾಲ್ ಅನ್ಸಾರಿ

ಹಿಂದುಳಿದ ವರ್ಗಗಳ ಸಂಘಟನೆಗಳು, ಇಕ್ಬಾಲ್ ಅನ್ಸಾರಿ ಅಭಿಮಾನಿಗಳ ಸಂಘ, ಶಾಂತಿಪ್ರಿಯರು ಸೇರಿ 23 ರ ಬಂದ್ ಕೈ ಬಿಡುವಂತೆ ನಗರದ ತುಂಬೆಲ್ಲ ಸಂಚರಿಸಿ ಜನಕ್ಕೆ ಮನವಿ ಮಾಡಿಕೊಂಡರು. ಇದನ್ನು ಕಂಡು ಹೆದರಿದ ಕಾಂಗ್ರೆಸ್-ಬಿಜೆಪಿಗಳು ಹಳ್ಳಿಗಳಿಂದ ಜನರನ್ನು ತಂದು ಶಕ್ತಿ ಪ್ರದರ್ಶಿಸುವ ಕೆಲಸಕ್ಕೆ ಕೈ ಹಾಕಿದರು. ಬರಗಾಲ ಬಿದ್ದು ಲಕ್ಷಾಂತರ ಜನ ಗುಳೇ ಹೋದರೂ, ಬರಗಾಲ ಕಾಮಗಾರಿ ನಡೆಯದೇ ಇದ್ದರೂ ಎಂದೂ ಈ ಬಗ್ಗೆ ಉಸಿರೆತ್ತದ ಕಾಂಗ್ರೆಸ್ಸಿನವರ ಬೆಂಕಿಹಚ್ಚುವ ಕೆಲಸ ಕಂಡು ಓಡೋಡಿ ಬಂದ ಡಿಸಿ ನವೀನ್‌ರಾಜ್‌ಸಿಂಗ್ ಬಂದ್ ನಡೆಸುವುದು ಕಾನೂನು ಬಾಹಿರ, ತಂಟೆ ಮಾಡಿದರೆ ಒಳ ಹಾಕುವುದಾಗಿ ಗುಟುರು ಹಾಕಿದಾಗಲೇ ಸ್ವಲ್ಪ ತಣ್ಣಗಾದರು.

ಅಯ್ಯಯ್ಯಪ್ಪೋ ಏನೀ ವಿವಾದ
ಕಾಂಗ್ರೆಸ್ ಕಾ ಹಾಥ್ ಬಿಜೆಪಿ ಕೆ ಸಾಥ್!

ಏಪ್ರಿಲ್ 23 ರ ಸೋಮವಾರ ಗಂಗಾವತಿ ಬಂದ್‌ಗೆ ಅಂತಹ ಪ್ರತಿಕ್ರಿಯೆ ಬಂದಿಲ್ಲ. ಕೆಲವೆಡೆ ಅಂಗಡಿಗಳು ತೆರೆದಿದ್ದವು. ವಾಹನಗಳ ಓಡಾಟ ಎಂದಿನಂತೆ ಇತ್ತು. ಅಂಗಡಿಗಳನ್ನು ಒತ್ತಾಯದಿಂದ ಬಂದ್ ಮಾಡಿಸುವ ಸಂದರ್ಭದಲ್ಲಿ ಗಲಾಟೆಯಾಗಿ ನಾಲ್ಕಾರು ಕಲ್ಲು ತೂರಿ, ಅನ್ಸಾರಿಯನ್ನು ಬೈಯುತ್ತ ಆತನ ಧರ್ಮವನ್ನೂ ಹೀಯಾಳಿಸಲಾಯಿತು. ಮಲ್ಲಿಕಾರ್ಜುನ ನಾಗಪ್ಪನಂತೂ ಅನ್ಸಾರಿಗೆ ಐಎಸ್‌ಐ, ನಕ್ಸಲ್ ಜೊತೆ ನಂಟಿದೆ ಎಂದು ಬಡಬಡಿಸಿಬಿಟ್ಟಿದ್ದು ಬಿಟ್ಟರೆ ಬಿಜೆಪಿ-ಕಾಂಗ್ರೆಸ್ಸಿಗಳಿಗೆ ಸಿಕ್ಕಿದ್ದು ಅರ್ಧ ಸಕ್ಸಸ್, ಇನ್ನರ್ಧ ಮುಖಭಂಗ! ಸತತ ನಾಲ್ಕು ದಿನ ಆತಂಕದಲ್ಲಿ ನಿದ್ದೆ ಇಲ್ಲದೆ ಕಾಲ ಕಳೆದ ಗಂಗಾವತಿ ನಗರ ಅಯ್ಯಪ್ಪಸ್ವಾಮಿ ವಿವಾದ ಕಂಡು ಅಯ್ಯಯ್ಯಪ್ಪಾ..... ಎಂದು ನಿಟ್ಟುಸಿರು ಬಿಟ್ಟು ಸುಮ್ಮನಾಗಿದೆ.

ಕಾಂಗ್ರೆಸ್‌ನಿಂದ ಹೊರಬಂದು ಜೆಡಿಎಸ್‌ನಿಂದ ಶಾಸಕನಾಗಿ, ಮಂತ್ರಿಯೂ ಆಗಿಬಿಟ್ಟ ಅನ್ಸಾರಿ ಓರ್ವ ಮುಸ್ಲಿಂ ಎನ್ನುವ ಕಾರಣಕ್ಕೆ ಅತ್ತ ಕಾಂಗ್ರೆಸ್‌ನ ಜಾತಿವಾದಿಗಳು ಕುದಿಯುತ್ತಿದ್ದರು. ಅವರೂ ಇದೇ ಸಂದರ್ಭ ನೋಡಿ 'ಸಿಕ್ಕನಲೇ ಅನ್ಸಾರಿ ಹಾಕಿ ಜಡಿರಿ' ಅಂತ ಏಪ್ರಿಲ್ 21 ರಂದು ಕಾಂಗ್ರೆಸ್‌ನ ನಿರುದ್ಯೋಗಿ ರಾಜಕಾರಣಿಗಳಾದ ಮಲ್ಲಿಕಾರ್ಜುನ ನಾಗಪ್ಪ, ಲಲಿತಾ ರಾಣಿ, ಸಿದ್ಧರಾಮಸ್ವಾಮಿ, ಶ್ರೀನಾಥ, ಬಿಜೆಪಿ ಸೋಲಿನ ಸರದಾರಿ ಗಿರೇಗೌಡ, ರೈತದ್ರೋಹಿ ತಿಪ್ಪೇರುದ್ರಸ್ವಾಮಿ, ವಿಎಚ್‌ಪಿಯ ರಾಮನಾಥ ಭಂಡಾರಕರ್, ಬಿಎಸ್‌ಪಿಯ ಬದ್ಧತೆ ಇಲ್ಲದ ಆರತಿ ತಿಪ್ಪಣ್ಣ, ಸೇರಿ ಏಪ್ರಿಲ್ 23 ರಂದು ಗಂಗಾವತಿ ಬಂದ್‌ಗೆ ಕರೆ ನೀಡಿದರು. ಅಷ್ಟೇ ಅಲ್ಲದೆ ಅನ್ಸಾರಿಯ ATV ಯನ್ನು ಹಿಂದೂಗಳು ನೋಡತಕ್ಕದ್ದಲ್ಲ ಎಂದು ಫತ್ವಾ ಹೊರಡಿಸಿ ಅದರ, ಕೇಬಲ್ ಕನೆಕ್ಷನ್ ಕಿತ್ತು ಹಾಕಿರಿ "ನಾವೇ ಪರಣ್ಣ ಮುನವಳ್ಳಿ, ಶ್ರೀನಾಥ, ಮಲ್ಲಿಕಾರ್ಜುನ ನಾಗಪ್ಪ ಪಾರ್ಟ್‌ನರ್‌ಶಿಪ್‌ನಲ್ಲಿ ಹೊಸ ಕೇಬಲ್ ನೆಟ್‌ವರ್ಕ್ ಹಾಕಿ ನಮ್ಮ ತುತ್ತೂರಿ ನಾವೇ ಊದಿಕೊಳ್ಳೋಣ" ಎಂದು ತೀರ್ಮಾನಿಸಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಗಂಗಾವತಿಗೆ ಬೆಂಕಿ ಹಚ್ಚಲಿರುವ ಬಿಜೆಪಿ-ಕಾಂಗ್ರೆಸ್‌ನವರ ಬಂದ್‌ಗೆ ವಿರುದ್ಧವಾಗಿ ದಲಿತ,

ಧಾರ್ಮಿಕ ವಿವಾದಗಳಿಗೆ ಬೆಂಕಿ ಇಟ್ಟು ಚಳಿ ಕಾಯಿಸಿಕೊಳ್ಳುವ ಜಾಯಮಾನ ಬಿಜೆಪಿಯದು. ಆದರೆ ಜಾತ್ಯತೀತರು ಎಂದು ಹೇಳಿಕೊಳ್ಳುವ ಈ ಕಾಂಗ್ರೆಸ್ಸಿಗರೇಕೆ ಹೀಗಾಡಿದರು? ಏಕೆಂದರೆ ಡಿಸಿಸಿ ಅಧ್ಯಕ್ಷೆ ಲಲಿತಾ ರಾಣಿಯ ನಿಷ್ಕ್ರಿಯತೆ ಬಗ್ಗೆ ಈಗಾಗಲೇ ಕೆಪಿಸಿಸಿಗೆ ಪುಟಗಟ್ಟಲೆ ಕಂಪ್ಲೇಂಟ್ ಹೋಗಿವೆ. ಆಕೆಗೂ ಗಂಗಾವತಿ ಎಂಎಲ್‌ಎಯಾಗುವ ಆಸೆ. ಟಿಕೆಟ್ ಸಿಗುವ ಸಂಭವ ಕಾಣುತ್ತಿಲ್ಲ. ಹೀಗಾಗಿ ತಮ್ಮ ಸಂಬಂಧಿಕ ಅಚ್ಯುತದೇವ ರಾಯನ ಮುಖಾಂತರ ಬಿಜೆಪಿ ಸೇರಿ ಸ್ಪರ್ಧಿಸಲಿದ್ದಾಳೆ. ಅಂದುಕೊಂಡಂತೆಯಾದರೆ ಇನ್ನೆರಡು ತಿಂಗಳಲ್ಲಿ ಲಲಿತಾರಾಣಿ ಬಿಜೆಪಿಗೆ ಜಂಪ್ ಮಾಡಲಿದ್ದಾಳೆ. ಮೊನ್ನೆಯ ವಿಧಾನಸಭೆ ಚುನಾವಣೆಯಲ್ಲಿ ತನ್ನ ಪತಿಯ ಸೋಲಿನ ವಾಸನೆ ಬಡಿಯುತ್ತಲೇ ಕಡೆ ಪಕ್ಷ ಬಿಜೆಪಿಗಾದರೂ ಓಟು ಹಾಕಿ, ಅನ್ಸಾರಿಗೆ ಮಾತ್ರ ಹಾಕಬೇಡಿ ಎಂದು ಪ್ರಚಾರ ಮಾಡಿದ್ದಳು. ಮಲ್ಲಿಕಾರ್ಜುನ ನಾಗಪ್ಪನ ಕನಕಗಿರಿ ಕ್ಷೇತ್ರ ಮೀಸಲಾಗಿದೆ. ಹೀಗಾಗಿ ಗಂಗಾವತಿಯಲ್ಲಿ ನೆಲೆ ಕಂಡುಕೊಳ್ಳಲು ಈ ಸ್ಟಂಟ್ ಆರಂಭಿಸಿದ್ದಾನೆ.

ಇಷ್ಟೆಲ್ಲದರ ನಡುವೆ ವಿವಾದದ ಬಗ್ಗೆ ನಾಲಗೆ ತಪ್ಪಿ ಅಪ್ರಬುದ್ಧನಂತೆ ಮಾತನಾಡಿದ ಅನ್ಸಾರಿಯದು ತಪ್ಪೇ. ಸದ್ಯಕ್ಕೆ ಗಂಗಾವತಿ ಕೂಲ್‌ಕೂಲ್‌ನಂತೆ ಕಾಣುತ್ತಿದ್ದರೂ, ಆಳದಲ್ಲಿ ಪರಿಸ್ಥಿತಿ ಹಾಗಿಲ್ಲ. ಅಯ್ಯಪ್ಪಸ್ವಾಮಿಯ ದೇವಸ್ಥಾನ ಕಟ್ಟಡ ವಿವಾದ ಬೇರೆ ಸ್ವರೂಪ ಪಡೆದುಕೊಳ್ಳುವ ಲಕ್ಷಣಗಳು ಕಾಣುತ್ತಿವೆ. ಒಬ್ಬರ ಬಣ್ಣ ಬಯಲಾದರೂ ಸಾಕು ಬೆತ್ತಲಾಗೋದು ಮಾತ್ರ ಎಲ್ಲ ನಾಯಕರು. ಬಿಜೆಪಿ-ಕಾಂಗ್ರೆಸ್-ಜೆಡಿಎಸ್‌ನವರು ಇನ್ನಾದರೂ ಮೈಮೇಲೆ ಪ್ರಜ್ಞೆ ಇಟ್ಟುಕೊಂಡು ರಾಜಕೀಯ ಮಾಡಲಿ!

-ವಿನಯ್ ಹುರುಳಿಕುಪ್ಪಿ

ಅಯ್ಯಪ್ಪ ವಾವಾರಸ್ವಾಮಿ ಸೌಹಾರ್ದದ ಕೊಂಡಿಗಳು

ಗಂಗಾವತಿ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬೇಸ್‌ಮಂಟ್ ತೆರವುಗೊಳಿಸಿದ ಪ್ರಕರಣವನ್ನು ಬಿಜೆಪಿ-ಕಾಂಗ್ರೆಸ್‌ಗಳು ಹಿಂದೂ-ಮುಸ್ಲಿಂ ನಡುವಿನ ಜಗಳವಾಗಿ ಪರಿವರ್ತಿಸುತ್ತಿರುವ ಈ ಸಂದರ್ಭದಲ್ಲಿ ಅಯ್ಯಪ್ಪ ಭಕ್ತನೊಬ್ಬ ಇವರೆಲ್ಲರ ಚಿಲ್ಲರೆ ರಾಜಕಾರಣ ಕಂಡು ರೋಸಿ ಹೋಗಿ ಅಯ್ಯಪ್ಪಸ್ವಾಮಿ ಮತ್ತು ಮುಸ್ಲಿಂ ಜನಾಂಗದ ವಾವಾರಸ್ವಾಮಿ ನಡುವಿನ ಸೌಹಾರ್ದದ ಕತೆ ಹೇಳಿದ್ದು ಹೀಗೆ. ಒಂದು ಕಾಲದಲ್ಲಿ ಮುಸ್ಲಿಂ ಜನಾಂಗದ ವಾವಾರಸ್ವಾಮಿ (ಒರಿಜಿನಲ್ ಹೆಸರು ಗೊತ್ತಿಲ್ಲ) ಒಬ್ಬ ಕಳ್ಳ. ಎಷ್ಟೋ ವರ್ಷಗಳ ನಂತರ ಅಯ್ಯಪ್ಪನಿಂದ ಕಳ್ಳತನ ಬಿಟ್ಟು ಸಂತನಾಗಿ ಶಬರಿಮಲೈಯಿಂದ 60 ಕಿ.ಮೀ. ದೂರದಲ್ಲಿ ನೆಲೆನಿಂತ (ಅಲ್ಲೀಗ ದರ್ಗಾ ಇದೆ). ಅಷ್ಟೇ ಅಲ್ಲ, ನನ್ನ ಭಕ್ತರನ್ನು ಕಾಯುವ ಜವಾಬ್ದಾರಿ ನಿನ್ನದು ಎಂದನಂತೆ ಅಯ್ಯಪ್ಪ. ಅಂದಿನಿಂದ ಇಂದಿನವರೆಗೂ ಶಬರಿಮಲೈಗೆ ಹೋಗುವ ಪ್ರತಿಯೊಬ್ಬ ಭಕ್ತನೂ ವಾವಾರಸ್ವಾಮಿ ದರ್ಗಾಕ್ಕೆ ಹೋಗಿ ಸಕ್ಕರೆ ಕೊಟ್ಟು ಕಾಡಿನ ಹಾದಿಯಲ್ಲಿ ಸಾಗಿದರೆ ಯಾವುದೇ ತೊಂದರೆಗಳಿಲ್ಲದೆ ಶಬರಿಮಲೈ ತಲುಪುತ್ತಾನಂತೆ. ಇಂತಹ ಭಾವೈಕ್ಯತೆ ಇರುವ ಅಯ್ಯಪ್ಪನ ಭಕ್ತರಲ್ಲಿ ದ್ವೇಷದ ಬೀಜ ಬಿತ್ತಲು ಪ್ರಯತ್ನಿಸುತ್ತಿದ್ದಾರೆ. ಅಷ್ಟಕ್ಕೂ ಗಂಗಾವತಿ ಬಂದ್‌ನ ಹಿಂದಿನ ಉದ್ದೇಶ ತಿಳಿದುಕೊಂಡ ಬಹುತೇಕ ಭಕ್ತರು ಬಂದ್‌ನಿಂದ ದೂರ ಉಳಿದಿದ್ದರು.

ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷನಾಗಲು 'ಬ್ಯಾರ' ಶುರು!

ಟಿಸಲು ಪ್ರೇರಣೆಯಾಯಿತು.

1998 ರಲ್ಲಿ ಮಂಗಳೂರು ಪುರಭವನದಲ್ಲಿ ರು ಸಾಹಿತ್ಯ ಸಮ್ಮೇಳನ . ಈ ಸಮ್ಮೇಳನದಲ್ಲಿ ಗಿದ್ದೇ 'ಬ್ಯಾರಿ ಸಾಹಿತ್ಯ ಡೆಮಿ'ಯ ಬೇಡಿಕೆ. ದೆ ಬ್ಯಾರಿ ಭಾಷೆ ಸಾಹಿತ್ಯ ರದಲ್ಲಿ ಒಟ್ಟಾಗುವಲ್ಲಿ ಸಂಘಟಿತ ಪ್ರಯತ್ನವಾಗಿ ಗೊಂಡಿದ್ದೇ 1999 ರ ಿಯಲ್ಲಿ ಕೇಂದ್ರ ಬ್ಯಾರಿ ಪರಿಷತ್ತು ಎನ್ನುವ ರ್ಗ ಸಂಸ್ಥೆ. ರಗೋಷ್ಠಿ ಕವಿಗೋಷ್ಠಿ ಬಿಡುಗಡೆ ಎಂದೆಲ್ಲಾ ದಲ್ಲಿದ್ದ ಬ್ಯಾರಿ ಸಾಹಿತ್ಯ ್ತು ಆನಂತರ ಪರ್ಯಾಂಪ್ರತಿ ಸಮ್ಮೇಳನ ಸಂಘಟಿಸಿ ಸಾಹಿತ್ಯ ಅಕಾಡೆಮಿಗೆ ಕೂಗೆಬ್ಬಿಸುತ್ತಲೇ

ಈ ಕೂಗು ಗಟ್ಟಿಯಾಗುತ್ತಲೇ ಒಂದು ಹೆಜ್ಜೆ ಮುಂದೆ ಹೋಗಿ ಅಧ್ಯಕ್ಷರಾಗಲು ಆಕಾಂಕ್ಷಿಗಳ ದಂಡೇ ರೆಡಿಯಾಯಿತು.


ಮಹದೇವ ಪ್ರಸಾದ್

ಮಹಮ್ಮದ್ ಬಡ್ಡೂರ್ ಎಂಬ ಸ್ವಯಂಘೋಷಿತ ಬ್ಯಾರಿಗಳ ಮಹಾಸಾಹಿತಿ ದೆಸೆಯಿಂದ ಅಖಿಲ ಭಾರತ ಬ್ಯಾರಿ ಸಾಹಿತ್ಯ ಪರಿಷತ್ತು ಎನ್ನುವ ಹೊಸದೊಂದು ಸಂಸ್ಥೆಯೇ ಉದಯವಾಯಿತು. ಮಾತು ಮತ್ತು ಮನಸ್ಸುಗಳೆರಡನ್ನೂ ಕೆಡಿಸಿಕೊಂಡಿರುವ ಈತ ಮುಂದೆ ತಾನು ಹುಟ್ಟುಹಾಕಿದ ಸಂಸ್ಥೆಯಿಂದಲೇ ಗೇಟ್‌ಪಾಸ್ ಪಡೆಯಬೇಕಾಯಿತು.

ಎಲ್ಲಾ ಸರಿ ಇದ್ದರೆ ಈ ಬಾರಿಯ ಚಿಕ್ಕಮಗಳೂರು ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಬಡ್ಡೂರ್‌ಗೆ ಅಧ್ಯಕ್ಷ ಸ್ಥಾನ ಪ್ರಾಪ್ತಿಯಾಗುತ್ತಿತ್ತು. ಮೂಲಭೂತವಾಗಿ ಕನ್ನಡ ಸಾಹಿತಿ ಆಗಿರುವ ಆದರೆ ಬ್ಯಾರಿ ಸಾಹಿತಿಯಲ್ಲದ ಫಕೀರ್ ಮಹ್ಮದ್ ಕಟ್ಪಾಡಿಗಿಂತ ಹೆಚ್ಚಿನ ಯೋಗ್ಯತೆಯೂ ಬಡ್ಡೂರ್‌ಗಿತ್ತು. ಆದರೆ ಉಂಡ ಮನೆಗೇ ಎರಡು ಬಗೆಯುವ ಬಡ್ಡೂರ್‌ನನ್ನು ಯಾರೂ ಒಪ್ಪಲು ಸಿದ್ಧರಿರಲಿಲ್ಲ.

ಸದ್ಯಕ್ಕೆ ಬ್ಯಾರಿಗಳಲ್ಲಿ ಕೇಂದ್ರ ಬ್ಯಾರಿ ಪರಿಷತ್, ಅಖಿಲ ಭಾರತ ಬ್ಯಾರಿ ಪರಿಷತ್, ಬ್ಯಾರಿ ಕಲಾರಂಗ, ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ, ಬ್ಯಾರಿ ವೆಲ್‌ಫೇರ್ ಅಸೋಸಿಯೇಷನ್- ಬೆಂಗಳೂರು, ಬ್ಯಾರಿ ಒಕ್ಕೂಟ, ಚಿಕ್ಕಮಗಳೂರು ಇಷ್ಟು ಸಂಘಗಳು ಲೆಕ್ಕಕ್ಕೆ ಸಿಗುತ್ತವೆ. "ಬ್ಯಾರಿ ಕಲಾರಂಗ ಮತ್ತು ಅಖಿಲ ಭಾರತ ಬ್ಯಾರಿ ಪರಿಷತ್ತು ಹೊರತಾಗಿ ಮಿಕ್ಕೆಲ್ಲ ಸಂಘಗಳು ಒಗ್ಗಟ್ಟಾಗಿ ಮೊದಲು ಬ್ಯಾರಿ ಸಾಹಿತ್ಯ ಅಕಾಡೆಮಿ ಆಗಲಿ ಆಮೇಲೆ ಅಧ್ಯಕ್ಷನಾಗಲು ನಮ್ಮೊಳಗೆ ಒಮ್ಮತಕ್ಕೆ ಬರೋಣ"


ಚಿದಾನಂದಮೂರ್ತಿ

ಎನ್ನುವ ತೀರ್ಮಾನಕ್ಕೆ ಎಲ್ಲರೂ ಬಂದಿರುವುದರಿಂದ ಸದ್ಯಕ್ಕೆ ಅಧ್ಯಕ್ಷನಾಗುವ ಆಸೆಗೆ ಕಡಿವಾಣ ಬಿದ್ದಿದೆ. ಉಳಿದಂತೆ ಕಲಾರಂಗದ 'ಕಂ' ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಂ ಅಲ್ಪಸಂಖ್ಯಾತರ ಅಧ್ಯಕ್ಷ ಅಜೀಜ್ ಬೈಕಂಪಾಡಿ ರಾಜಕೀಯ ಪವರ್ ತೋರಿಸಿ "ನಾನೇ ಅಧ್ಯಕ್ಷ" ಅನ್ನುತ್ತಿದ್ದಾರೆ. ಅಖಿಲ ಭಾರತ ಬ್ಯಾರಿ ಪರಿಷತ್ತಿನ ಬಿ.ಎಂ. ಹನೀಫರಿಗೂ ಅಧ್ಯಕ್ಷರಾಗುವ ಆಕಾಂಕ್ಷೆಯಿದೆ.

ಈ ನಡುವೆ ಬ್ಯಾರಿ-ಭಾಷೆ ಸಂಸ್ಕೃತಿ ಏನೆಂದು ಗೊತ್ತಿಲ್ಲದ ಚಿದಾನಂದಮೂರ್ತಿಯಂತಹ ಸೋಕಾಲ್ಡ್ ಸಂಶೋಧಕರ "ಬ್ಯಾರಿ ಅಕಾಡೆಮಿ ಬೇಡ" ಎನ್ನುವ ಅಪಸ್ವರವೂ ಕೇಳಿಬರುತ್ತಿದೆ. ಬ್ಯಾರಿ ಅಕಾಡೆಮಿ ಅಸ್ತಿತ್ವಕ್ಕೆ ಬರುತ್ತೋ? ಇದ್ದ ಅಕಾಡೆಮಿಗಳಿಗೇ ಸಂಚಕಾರ ಬರುತ್ತೋ? "ಕೂಸಿಗೆ ಮುನ್ನ ಕುಲಾವಿ ಹೊಲಿಸಿದರು" ಎಂಬ ಗಾದೆ ಮಾತಿನಂತೆ ಅಧ್ಯಕ್ಷ ಗಾದಿಗೆ ಬ್ಯಾರ (ವ್ಯಾಪಾರ)ವಂತೂ ಶುರುವಾಗಿದೆ.

-ಪ್ರಕಾಶ್ ಪಿಂಟೋ



ಹುಲಿಯ ಹಣೆಗೆ ಗುಂಡು ಅಪ್ಪಳಿಸಿ.....

ಹುಲಿ ಸದ್ದಿನ ವಿಷಯದಲ್ಲಿ ಎಷ್ಟು ಸೂಕ್ಷ್ಮ ಪ್ರಾಣಿ ಎಂದರೆ ಅವು ಎಂಥ ಸಣ್ಣ ಸದ್ದನ್ನೂ ಸಮರ್ಥವಾಗಿ ವಿಂಗಡಿಸಿ ಬಿಡುತ್ತವೆ, ಎಷ್ಟೇ ನಿದ್ದೆಯಲ್ಲಿರಲಿ. ಒಂದಿಷ್ಟು ಯೋಚಿಸಿದೆ, ಇನ್ನೊಂದಿಷ್ಟು ಬದಿಗೆ ಸರಿದು ನೇರವಾಗಿ ಹುಲಿಯ ಹಣೆಗೆ ಗುರಿಕಟ್ಟಿ, ನಾನು ರೂಪಿಸಿದ್ದ ತಂತ್ರದಂತೆ ಟ್ರಿಗರನ್ನು ಒತ್ತಿದೆ.... ಎಲ್ಲಾ ನಾನು ಅಂದುಕೊಂಡಂತೇ ನಡೆಯಿತು. ಗುಂಡು ನಿಖರವಾಗಿ ಹುಲಿಯ ನಡುಹಣೆಗೆ ಅಪ್ಪಳಿಸಿ.... ಅದರ ದೇಹದುದ್ದಕ್ಕೂ ತೂರಿ ಹೋಯಿತು.

ಕೆಲವು ನಿಮಿಷ ನಾನು ಆ ಪಟ್ಟೆಗಳನ್ನೇ ಗುಡ್ಡೆ ನೋವಾಗುವಂತೆ ದಿಟ್ಟಿಸಿ ನೋಡಿದೆ. ಆಗ ನಾನು ನೋಡುತ್ತಿರುವ ವಸ್ತು ಏನೆಂದು ಸ್ಪಷ್ಟವಾಯಿತು. ನಾನು ಅಲ್ಲಿ ನೋಡುತ್ತಿದ್ದುದು ಹುಲಿಯಲ್ಲ ಬದಲಿಗೆ ಕೋಣ. ಕೆಂಪಾಗಿ ಕಂಡಿದ್ದು ಹುಲಿ ಸಿಗಿದು ತಿಂದಿರುವ ರಕ್ತ ಮಿಶ್ರಿತವಾದ ಕೋಣದ ಹೊಟ್ಟೆ ಮತ್ತು ಎದೆಯ ಭಾಗ. ಪಟ್ಟೆಗಳಂತೆ ಕಂಡಿದ್ದು ಪಕ್ಕೆಲುಬುಗಳಾಗಿದ್ದವು. ಕೆಂಪು ಬಣ್ಣ ಮತ್ತು ಪಟ್ಟೆಗಳನ್ನು ಕಾಣುತ್ತಿದ್ದಂತೆ ಬಂದೂಕವನ್ನು ಗುರಿ ಕಟ್ಟಿದ್ದ ನಾನು ಗುಂಡು ಹಾರಿಸದೇ ಇದ್ದಿದ್ದಕ್ಕೆ ನನಗೆ ನಾನೇ 'ಶಬ್ಬಾಷ್' ಹೇಳಿಕೊಂಡೆ. ಇಂಥದ್ದೇ ಸಂದರ್ಭಧಲ್ಲಿ ನನ್ನೊಬ್ಬ ಗೆಳೆಯ ಅವಾಂತರ ಮಾಡಿಬಿಟ್ಟಿದ್ದ. ಅವನು ಹೊಡೆಯಲು ಉದ್ದೇಶಿಸಿದ್ದ ಹುಲಿಯನ್ನು ಕೊಲ್ಲುವಲ್ಲಿ ವಿಫಲನಾಗಿದ್ದ ಹುಲಿ ಕೊಂದಿದ್ದ ಬಲಿಯನ್ನು ಹುಡುಕಿ ಅಲ್ಲೊಂದು ಮಚಾನು ನಿರ್ಮಿಸು ವಂತೆ ತನಗಿಂತ ಮುಂಚಿತವಾಗಿ ತನ್ನ ಸಹಾಯಕರನ್ನು ಇವನೇ ಕಳುಹಿಸಿದ್ದ. ಅವರ ಹಿಂದೆ ಸ್ವಲ್ಪ ಹೊತ್ತಿನಲ್ಲಿ ಆ ಪ್ರದೇಶಕ್ಕೆ ಬಂದ ಅವನು ನನ್ನಂತೆ ಗೊಂದಲಗೊಂಡು ದನದ ಪಕ್ಕೆಲುಬನ್ನು ಹುಲಿಯ ಪಟ್ಟೆ ಎಂದು ಭಾವಿಸಿ ಗುಂಡುಹಾರಿಸಿದಾಗ ಅವನ ಸಹಾಯಕರು ಆ ಕಳೇಬರಕ್ಕೆ ಅಂಟಕೊಂಡಂತಿದ್ದ ಪೊದೆಯ ಮರೆಯಲ್ಲಿದ್ದರು. ಗುಂಡು ನೇರವಾಗಿ ಕಳೇಬರಕ್ಕೆ ಬಡಿದಿದ್ದಕ್ಕೆ ಸರಿ, ಒಂದಿಷ್ಟು ಆಚೀಚೆಯಾಗಿದ್ದರೂ ಖಂಡಿತಾ ದುರಂತ ಸಂಭವಿಸುತ್ತಿತ್ತು.

ತನ್ನ ಶಿಕಾರಿಯನ್ನು ಕೊಂಡೊಯ್ದ ಹುಲಿಯನ್ನು ಯಾರೂ ಗಾಬರಿಗೊಳಿಸದಿದ್ದರೆ ಸಾಮಾನ್ಯವಾಗಿ ಅದು ಆ ಕಳೇಬರದ ಉಳಿಕೆಗಳ ಸಮೀಪದಲ್ಲೆಲ್ಲೋ ಕುಳಿತಿರುತ್ತದೆ. ರಣಹದ್ದು ಹಾಗೂ ಸಣ್ಣಪುಟ್ಟ ಮಾಂಸಾಹಾರಿಗಳಿಂದ ತನ್ನ ಶಿಕಾರಿಯನ್ನು ರಕ್ಷಿಸಿಕೊಳ್ಳಲು ಹೀಗೆ ಮಾಡುತ್ತದೆ. ಹೀಗಾಗಿ ಸದ್ಯಕ್ಕೆ ನನಗೆ ಅದು ಕಾಣುತ್ತಿಲ್ಲ ಎಂದರೆ ಅದರರ್ಥ ಅದು ಸಮೀಪದ ಪೊದೆಗಳ ಕೆಳಗೆಲ್ಲೂ ಮಲಗಿಲ್ಲ ಎಂದಲ್ಲ.

ಹಗಲು ಹೊತ್ತಿನಲ್ಲಿ ಹುಲಿಗಳು ಮಲಗಿದ್ದರೆ ಅವು ಒಂದೇ ಮಗ್ಗುಲಿನಲ್ಲಿ ಮಲಗುವುದಿಲ್ಲ, ಮಲಗಬಾರದು ಎಂದಲ್ಲ ಅವು ಇಷ್ಟಪಟ್ಟರೂ ಕೆಲವು ಹಾರುವ ಕೀಟಗಳು ಸುಮ್ಮನಿರುವುದಿಲ್ಲ, ಮಲಗಿರುವ ಅವಕ್ಕೆ ಕಾಟ ಕೊಡುತ್ತವೆ. ಈ ಕಾಟ ತಪ್ಪಿಸಿಕೊಳ್ಳಲು ಹುಲಿಗಳು ಬಾಲದಿಂದ ಹೊಡೆದುಕೊಳ್ಳುವುದು, ಮಗ್ಗುಲು ಬದಲಿಸುವುದು ಮಾಡುತ್ತವೆ. ಈ ತಿಳಿವಳಿಕೆ ಹಾಗೂ ಆಶಾವಾದವಿದ್ದ ನಾನು ಕುಂತಲ್ಲೇ ಕುಂತು ತೆಪ್ಪಗೆ ಸುತ್ತಮುತ್ತಲ ಕಾಡನ್ನು ಪರೀಕ್ಷಿಸತೊಡಗಿದೆ. ಹುಲಿಯ ಒಂದು ಸಣ್ಣ ಚಲನೆಯ ದರ್ಶನಕ್ಕಾಗಿ ನಿರೀಕ್ಷಿಸತೊಡಗಿದೆ. ಸ್ವಲ್ಪ ಹೊತ್ತಿನಲ್ಲಿ ಇದ್ದಕ್ಕಿದ್ದಂತೆ ನನ್ನ ಗಂಟಲೇ ನನಗೆ ಕಾಟ ಕೊಡಲು ಆರಂಭಿಸಿತು. ಈವರೆಗೂ ನಾನು ಭಾವಿಸಿದಂತೆ ನನ್ನ ಗಂಟಲ ಕಾಯಿಲೆ ಪೂರ್ತಿಯಾಗಿ ವಾಸಿಯಾಗಿರಲಿಲ್ಲ ಎನಿಸುತ್ತದೆ. ಸಣ್ಣಗೆ ಆರಂಭವಾದ ಗಂಟಲ ಕೆರೆತ ನಾನು ಕೆಮ್ಮಲೇಬೇಕಾದ ಅನಿವಾರ್ಯತೆಗೆ ನನ್ನನ್ನು ತಂದು ನಿಲ್ಲಿಸಿತು. ಇಂಥಾ ಕೆಲಸದಲ್ಲಿ ಕಾದು ಕುಳಿತಿದ್ದಾಗಲಾಗಲಿ ಅಥವಾ ಚರ್ಚಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದಾಗಾಗಲಿ ಮನುಷ್ಯನೊಬ್ಬನಿಗೆ ಹೀಗಾದರೆ ಸಾಮಾನ್ಯವಾಗಿ ಮಾಡುವುದೇನೆಂದರೆ...., ಅದು ಕಡಿಮೆಯಾಗುವವರೆಗೂ ಉಸಿರು ಬಿಗಿ ಹಿಡಿದು ಎಂಜಲು ಹಾಗೂ ಅದರೊಂದಿಗೆ ಕೆರೆತವನ್ನು ನುಂಗುತ್ತಾ ಹೋಗುವುದು. ಆಗ ಎರಡರಲ್ಲೊಂದು ಸಂಭವಿಸುತ್ತದೆ...., ಒಂದೋ ಕೆಮ್ಮು ಹಿಂದೆ ಸರಿಯುತ್ತದೆ ಇಲ್ಲವೇ ಗುದ್ದಿಕೊಂಡು ಹೊರ ನುಗ್ಗುತ್ತದೆ. ಈ ಸಮಯದಲ್ಲಿ ನನಗೇಕೋ ಎರಡನೆಯದೇ ಆಗುತ್ತದೆಂದು ಅನಿಸಿತು. ಹಾಗಾಗಿ ಕೆಮ್ಮನ್ನು ಲಂಗೂರದ ಕೂಗಾಗಿ ಪರಿವರ್ತಿಸಿ, ಲಂಗೂರದಂತೆ ಕೂಗಿದೆ. ಈ ಸಂದರ್ಭವನ್ನು ಶಬ್ದಗಳಿಗೆ ಭಾಷಾಂತರಿಸುವುದು ಕಷ್ಟ. ಆದರೆ ನನ್ನ ಕೂಗಿಗೆ ಅರ್ಧ ಮೈಲಿ ದೂರದಿಂದ ತಕ್ಷಣ ಪ್ರತಿಕ್ರಿಯೆ ಆರಂಭವಾಯಿತು. ಕ್ರೋಕ್.... ಕ್ರೋಕ್.... ಕ್ರೋಕ್.... ಕ್ರೋಕ್...., ಅಲ್ಪವಿರಾಮದ ಅಂತರಗಳಲ್ಲಿ ಅದು ಮರುಕಳಿಸುತ್ತಿತ್ತು, ಸ್ವಲ್ಪ ಹೊತ್ತಿನವರೆಗೆ ಮುಂದುವರಿದ ಈ ಕೂಗಾಟ ಕೊನೆಗೆ ಕ್ರೋಕ್‌ರೂ... ಎಂಬಲ್ಲಿಗೆ ಪರಿಸಮಾಪ್ತಿಯಾಯ್ತು, ಸಾಮಾನ್ಯವಾಗಿ ಹುಲಿಯ ಹಾಜರಿಗೆ ಎಲ್ಲಾ ಲಂಗೂರಗಳೂ ಪ್ರತಿಕ್ರಿಯಿಸು ವುದಿಲ್ಲ, ಹುಲಿ ತನ್ನ ಜೀವಿತದ ಅವಧಿಯಲ್ಲಿ ಇಂಥದನ್ನು ಅಸಂಖ್ಯ ಬಾರಿ ಕೇಳಿರುತ್ತದೆ. ನನ್ನ ಕೂಗೂ ಒಂದು ಲಂಗೂರದ ಕೂಗಿನಂತೆಯೇ ಇದ್ದಿದ್ದರಿಂದ ಅದನ್ನು ಹುಲಿ ಲೆಕ್ಕಕ್ಕೂ ತೆಗೆದುಕೊಂಡಿರುವುದಿಲ್ಲ, ನಾನು ನಿಜಕ್ಕೂ ಲಂಗೂರದ ಕೂಗನ್ನು ತದ್ವತ್ತಾಗಿ ಅನುಕರಿಸಿದೆನೋ ಇಲ್ಲವೋ ಗೊತ್ತಿಲ್ಲ, ಆದರೆ ನನ್ನ ಗಂಟಲು ತುರಿಕೆಗೆ ಮಾತ್ರ ಒಳ್ಳೆಯ ಪ್ರತಿ ಕೆರೆತವಾಗಿ ಗಂಟಲು ಸಮಾಧಾನ ಗೊಂಡಿತು.

ಇದಾದನಂತರ ನಾನು ಅರ್ಧ ಗಂಟೆಯವರೆಗೆ ನಿಶ್ಶಬ್ದವಾಗಿ ಒಂದು ಸಣ್ಣ ಚಲನೆ ಅಥವಾ ಕಾಡಿನ ಜನಪದರಿಂದ ಬರುವ ವಾರ್ತೆಗಳಿಗಾಗಿ ಕಾದು ಕುಳಿತಿದ್ದೆ ಆನಂತರ ನನಗೊಂದು ವಿಷಯ ಸ್ಪಷ್ಟವಾಯಿತು, ನನ್ನ ಕಣ್ಣಳತೆಗೆ ಸಿಗುವ ಕಾಡಿನ ವ್ಯಾಪ್ತಿಯಲ್ಲೆಲ್ಲೂ ಹುಲಿರಾಯ ಇಲ್ಲ ಎಂಬುದು. ಹಾಗಾಗಿ ಅಲ್ಲಿಂದ ಎದ್ದು ಎಚ್ಚರಿಕೆಯಿಂದ ಕೋಣದ ಕಳೇಬರದತ್ತ ನಡೆದೆ.


ಹುಲಿಯ ದೀರ್ಘದಂಡ ಪ್ರಣಾಮ

ನಾನು ಕ್ಷಮೆ ಕೋರುತ್ತೇನೆ, ಏಕೆಂದರೆ ಒಂದು ಬಲಿತ ಹುಲಿ ಒಮ್ಮೆಗೆ ಎಷ್ಟು ಕೇಜಿ ಮಾಂಸ ತಿನ್ನಬಹುದೆಂಬ ನಿಖರವಾದ ಮೊತ್ತ ನನಗೆ ಗೊತ್ತಿಲ್ಲ, ಆದರೆ ಅದರ ತಿನ್ನುವ ಸಾಮರ್ಥ್ಯದ ಬಗ್ಗೆ ನಿಮಗೊಂದು ಅಂದಾಜು ಕೊಡಬಲ್ಲೆ. ಸಾಮಾನ್ಯವಾಗಿ ಒಂದು ಬಲಿತ ಸಾರಂಗ ಹುಲಿಯ ಎರಡು ದಿನಗಳ ಊಟಕ್ಕಾಗುತ್ತದೆ. ಒಂದು ಕೋಣ ಮೂರು ದಿನಗಳ ಊಟಕ್ಕಾಗುತ್ತದೆ, ಉಳಿದಿದ್ದರೆ ನಾಲ್ಕನೆಯ ದಿನ ತಿಂಡಿಗೆ ಒಂದಿಷ್ಟು ಉಳಿದಿರಬಹುದು.

ನಾನು ಇಲ್ಲಿ ಕಟ್ಟಿದ್ದು ಪೂರ್ತಿ ಬಲಿತ ಕೋಣವೇನಲ್ಲ ಆದರೆ ಗಾತ್ರದಲ್ಲಿ ಅದು ಸಣ್ಣದೂ ಅಲ್ಲ, ಆದರೂ ಹುಲಿ ಸರಿಸುಮಾರು ಅರ್ಧಭಾಗವನ್ನು ತಿಂದು ಮುಗಿ ಸಿತ್ತು, ತಿಂದಿರುವ ಪ್ರಮಾಣವನ್ನು ನೋಡಿದರೆ ಅದು ಇಲ್ಲಿಂದ ಹೆಚ್ಚು ದೂರ ಹೋಗಿಲ್ಲ ಎಂದೆನಿಸುತ್ತಿತ್ತು ಅಲ್ಲದೆ ಇಲ್ಲಿನ ನೆಲ ಇನ್ನೂ ಮೃದುವಾಗಿತ್ತು, ಮುಂದಿನ ಒಂದೆರಡು ಗಂಟೆಗೂ ಹೆಚ್ಚು ಹೊತ್ತು ಹಾಗೇ ಇರುತ್ತದೆ ಎಂಬ ಭರವಸೆಯೂ ಇತ್ತು, ಇವೆಲ್ಲವೂ ಈಗಿಂದೀಗಲೇ ಹುಲಿಯ ಜಾಡು ಹಿಡಿಯಲು ಪ್ರಶಸ್ತವಾಗಿದ್ದವು, ಸಿಕ್ಕಿಬಿದ್ದರೆ ಮುಖಾಮುಖಿಯಾಗಲು ನಾನೂ ಸಿದ್ಧನಿದ್ದೆ ಇದಕ್ಕೆ ಬದ್ಧನಾಗಿ ಹುಲಿಯ ಬೆನ್ನು ಹತ್ತಿದೆ.

ಈ ಕಳೇಬರದ ಸುತ್ತಮುತ್ತ ಬೇಕಾದಷ್ಟು ಹೆಜ್ಜೆ ಗುರುತುಗಳಿದ್ದಿದ್ದರಿಂದ ಹುಲಿಯು ಹೊರಹೋದ ಜಾಡನ್ನು ಹಿಡಿಯುವುದು ಕಷ್ಟವಾಯಿತು. ಹಾಗೇ ಇನ್ನೂ ಸ್ವಲ್ಪ ಮುಂದಕ್ಕೆ ಹುಡುಕುತ್ತಾ ಹೋದಾಗ ಹುಲಿ ಇಲ್ಲಿಂದ

ಒಬ್ಬ ತಾಯಿ ಇನ್ನೊಬ್ಬಳಿಗೆ



ಆಗಸ್ಟ್ 1993ರಲ್ಲಿ ದಕ್ಷಿಣಾ ಆಫ್ರಿಕಾದ ಗುಗುಲೆಟು ಎಂಬ ಊರೊಂದರಲ್ಲಿ ಕಪ್ಪು ಜನಾಂಗದ ಯುವಕರ ಗುಂಪೊಂದು ಫುಲ್‌ಬ್ರೈಟ್ ವಿದ್ಯಾರ್ಥಿವೇತನ ಪಡೆದಿದ್ದ ಅಮಿ ಎಲಿಜಬೆತ್ ಬಿಯೆಲ್ ಎಂಬ ಬಿಳಿಯ ಯುವತಿಯ ಮೇಲೆರಗಿ ಸಾಯಿಸಿತು. ಇದನ್ನು ಕಟುವಾಗಿ ಖಂಡಿಸಿ, ಬಿಯೆಲ್ಲಳ ಕುಟುಂಬದವರಿಗೆ ಸಂತಾಪ ಸೂಚಿಸಿ ಶೋಕ ವ್ಯಕ್ತಪಡಿಸಿ ಕಳುಹಿಸಿದ ಸಂದೇಶಗಳ ಪ್ರವಾಹ ಆ ದೇಶದ ಇತಿಹಾಸದಲ್ಲಿ ಹೊಸ ದಾಖಲೆಯನ್ನೇ ಸೃಷ್ಟಿಸಿತು. ಬಿಳಿಯ ಅಮೆರಿಕನ್ ಯುವತಿ ಅಮಿ, ದಕ್ಷಿಣ ಆಫ್ರಿಕಾದಲ್ಲಿ ಮೊಟ್ಟ ಮೊದಲ ಬಾರಿಗೆ ನಡೆಯಲಿದ್ದ ಪ್ರಜಾವಾದಿ ಚುನಾವಣೆ ಯಲ್ಲಿ ಕಪ್ಪು ಜನರ ಪರವಾಗಿ ಕೆಲಸ ಮಾಡಲೆಂದು ಸ್ವ ಯಿಚ್ಛೆಯಿಂದ ಹೋಗಿದ್ದಳು. ಬದುಕಿನ ಮೂಲಭೂತ ಹಕ್ಕುಗಳನ್ನು ನಿರಾಕರಿಸಲ್ಪಟ್ಟು ಅತೀವ ದೌರ್ಜನ್ಯಕ್ಕೆ ತುತ್ತಾಗಿದ್ದ ಕಪ್ಪು ಜನರ ಬಗ್ಗೆ ಅವಳಿಗೆ ಅಪಾರ ಅನುಕಂಪವಿತ್ತು, ಯಾರ ಪರವಾಗಿ ಹೋಗಿದ್ದಳೋ ಅವರಿಂದಲೇ ಕೊಲೆ ಯಾಗುವ ದೌರ್ಭಾಗ್ಯ ಅವಳದಾಗಿತ್ತು.

ಇಂತಹ ಘಟನೆಯೊಂದರಲ್ಲಿ ಸಹಜವಾಗಿಯೇ ಸತ್ತವಳ ಬದುಕಿನ ಬಗ್ಗೆ ಎಲ್ಲರೂ ಮಾತಾಡುವುದನ್ನು ಕೇಳುತ್ತೇವೆ. ಅವಳ ಕುಟುಂಬ, ಸ್ನೇಹಿತರು, ಕೆಲಸ, ಅಭಿರುಚಿ, ಆಸೆ ಆಕಾಂಕ್ಷೆ ಇತ್ಯಾದಿ ಇತ್ಯಾದಿ. ಬಿಯೆಲ್ಲಳ ವಿಷಯದಲ್ಲಿ ಆಗಿದ್ದೂ ಅದೇ.

ಆದರೆ ಇನ್ನೊಂದು ಕಡೆಯ ಕಥೆಯೂ ಇದೆಯಲ್ಲ? ಅದರಿಂದ ಯಾರಿಗೂ ಏನೂ ಆಗಬೇಕಿದ್ದಿಲ್ಲವೆ? ಅಮಿ ಬಿಯೆಲ್ಲಳನ್ನು, ಆಂಡ್ರೂ ಗುಡ್‌ಮನ್ನರನ್ನು ಮತ್ತು ಅಂತಹವರನ್ನು ಸೃಷ್ಟಿಸುವ ದಯೆ, ಅನುಕಂಪ, ವಾತ್ಸಲ್ಯ ಜೀವಪರತೆಯ ಗುಣಗಳುಳ್ಳ ಜನರಿಗೆ ಹೊರತಾದ ಇನ್ನೊಂದು ತರಹದ ಜನರಿದ್ದಾರಲ್ಲ? ಈ ಹೆಣ್ಣಿನ ಕೊಲೆ ಗಾರರೂ ಅವಳ ಹಾಗೆಯೇ ಯೌವ್ವನಕ್ಕೆ ಕಾಲಿಟ್ಟದ್ದವರು. ಆದರೆ ದಯೆ, ಅನುಕಂಪದಂತಹ ಮಾನವೀಯ ಗುಣಗಳ ಪಾಠ ಅವರಿಗೆ ಯಾಕೆ ಸಿಕ್ಕಿರಲಿಲ್ಲ? ಬದಲಾಗಿ ಹಗೆತನ, ನಾಶಗಳ ಪ್ರಪಂಚದಲ್ಲಿ ಅವರು ಹೇಗೆ ಕಳೆದುಹೋದರು?

ನನ್ನ ಈ ಕಾದಂಬರಿಯಲ್ಲಿ ಇರುವುದು ಒಬ್ಬನೇ ಕೊಲೆಗಾರ. ಅವನ ತಾಯಿ ನಿರೂಪಿಸುವ ನೆನಪುಗಳ ಮೂಲಕ ಮನುಷ್ಯರ ಕ್ರೌರ್ಯ ತಲುಪುವ ಆಳದ ಪರಿಚಯವಾಗುತ್ತದೆ. ಈ ಘೋರ ವಾತಾವರಣವೇ ಅಮಿ ಬಿಯೆಲ್ಲಳ ಸಾವಿಗೆ ಕಾರಣವಾಯಿತು. ಹೌದು, ನಾನು ಮಾತಾಡುತ್ತಿರುವುದು ಕಪ್ಪು ಜನರನ್ನು ಘೋರವಾಗಿ ತುಳಿದು ಊಹೆಗೂ ಮೀರಿದ ನರಕಕ್ಕೆ ತಳ್ಳಿರುವ ವರ್ಣಭೇದ ವ್ಯವಸ್ಥೆಯ ಬಗ್ಗೆ. ಈ ವ್ಯವಸ್ಥೆ ಹುಟ್ಟುಹಾಕಿ ರುವ ಹಿಂಸೆ, ದೌರ್ಜನ್ಯ ಅಪಾರವಾದದ್ದು. ಸರಿ ತಪ್ಪುಗಳ ಅರ್ಥವನ್ನೇ ಕುರೂಪವಾಗಿ ತಿರುಚಿಟ್ಟ ಈ 'ಮನುಷ್ಯ ಕುಲದ ಕಳಂಕ'ದ ಬಗ್ಗೆಯೇ ನಾನು ಮಾತಾಡುತ್ತಿರುವುದು.

"ಮದರ್ ಟು ಮದರ್" ಕಾದಂಬರಿ ಯಲ್ಲಿ ಘೋರ ಶೋಕಕ್ಕೆ ತುತ್ತಾಗಿರುವ ತಾಯಿಯೊಬ್ಬಳು ತನ್ನ ನೆನಪುಗಳನ್ನು ಕೆದಕುತ್ತಾ ತನ್ನ ಮಗ ಬದುಕಿದಂತಹ ವಾತಾವರಣದ ಚಿತ್ರಣ ನೀಡುತ್ತಾ ಹೋಗುತ್ತಾಳೆ. ಇಡೀ ಕಾದಂಬರಿ ಅವಳು ಆ ಇನ್ನೊಬ್ಬ ತಾಯಿಯ ಜೊತೆ ನಡೆಸುವ ಸ್ವಗತದ ಸಂವಾದ. ತನ್ನ ನೋವಿಗೆ ಉತ್ತರ ಸಿಗದೇ ತತ್ತರಿಸುತ್ತಿರುವ ತಾಯಿಯೊಬ್ಬಳು ಮಗಳನ್ನು ಕಳೆದುಕೊಂಡ ಆ ಇನ್ನೊಬ್ಬ ತಾಯಿಯ ನೋವನ್ನು ಅನುಭವಿಸುತ್ತಾ, ತನ್ನ ಮಗನ ಬದುಕನ್ನು ಬಿಚ್ಚಿಡುತ್ತಾ ಹೋಗುತ್ತಾಳೆ. ಇದರಿಂದ ಆ ಇನ್ನೊಬ್ಬ ತಾಯಿಯ ನೋವು ಕಿಂಚಿತ್ತಾದರೂ ಕಡಿಮೆಯಾಗುತ್ತದೇನೋ ಎಂಬ ಭರವಸೆ. ಎಳ್ಳಿನಷ್ಟಾದರೂ ಪರವಾಗಿಲ್ಲ...

ಮಂದೀಸಾಳ ಶೋಕ

ನನ್ನ ಮಗ ನಿನ್ನ ಮಗಳನ್ನು ಕೊಂದಿದ್ದಾನೆ.

ನಾನೇ ಅವಳನ್ನು ಕೊಂದೆನೇನೋ ಎನ್ನುವಂತೆ ಜನ ನನ್ನನ್ನು ಕೆಕ್ಕರಿಸಿಕೊಂಡು ನೋಡುತ್ತಾರೆ. ಸ್ವಲ್ಪ ಉದಾರಿಗಳು ಕೊಲ್ಲಲು ನಾನು ಹೇಳಿಕೊಟ್ಟಿದ್ದೆ ಎನ್ನುವಂತಹ ದೃಷ್ಟಿಯನ್ನು ಬೀರುತ್ತಾರೆ. ಅವನಿಗೆ ನಾನು ಏನನ್ನಾದರೂ ಹೇಳುವುದಾಗಲೀ, ಅವನು ಅದನ್ನು ಕೇಳುವುದಾಗಲೀ, ಎಂದಾದರೂ ಸಾಧ್ಯವಿತ್ತೆ? ಅವನು ಚಿಕ್ಕವನಾಗಿದ್ದಾಗಿನಿಂದ, ಸ್ಕೂಲಿಗೆ ಹೋಗುವ ಮುಂಚೆಯಿಂದ, ಅಷ್ಟೇ ಏಕೆ, ಮೊದಲ ಹಲ್ಲು ಬೀಳುವಾಗಿನಿಂದಲೂ ಅಷ್ಟೇ. ಸತ್ಯ ಹೇಳಬೇಕೆಂದರೆ ಅವನನ್ನು ನಾನು ಬಸಿರಲ್ಲಿ ಹೊತ್ತಿದ್ದೂ ಸಹ ನನ್ನ ಇಚ್ಛೆಯ ಹಿಡಿತದಲ್ಲಿರಲಿಲ್ಲ, ಜಿದ್ದಿನಿಂದ ಅಲ್ಲದಿರಬಹುದು, ಆದರೆ ಮಹಾ ಅಸಡ್ಡೆಯಿಂದ, ಕ್ಯಾರೆ ಎನ್ನದೆ ನನ್ನ ಬಸಿರಲ್ಲಿ ಇಳಿದು ಕೂತನಲ್ಲ! ಆದರೆ ಆ ದಿನ ನಾನು ಎದ್ದ ತಕ್ಷಣ "ನೋಡು ಮಗೂ, ಗುಗುಲೆಟು ಸುತ್ತ ಅಬ್ಬೆಪಾರಿ ತರಹ ಅಡ್ಡಾಡಿಕೊಂಡು ಇರುವ ಬದಲು ಈ ಊರಿಗೆ ಸೇರಿಲ್ಲದ ಬಿಳಿ ಹುಡುಗಿಯೊಬ್ಬಳನ್ನು ಹುಡುಕಿ ಕೊಲ್ಲು" ಎಂದು ನಾನು ಹೇಳಿ ಕಳುಹಿಸಿದ್ದೆ ಎನ್ನುವ ತರ ಜನ ನನ್ನೆಡೆಗೆ ವಕ್ರದೃಷ್ಟಿ ಬೀರುತ್ತಾರಲ್ಲ!

'ಆಮೇಲೆ ನೋಡೂ... ಆ ಬಿಳಿ ಹುಡುಗಿ ಅಕಸ್ಮಾತ್ ಅಮೆರಿಕನ್ನಳಾಗಿದ್ದರೆ ಇನ್ನೂ ಮಜವೆ!' ಎಂದು ಹೇಳಿದ್ದೆನೆ? ಯಾರಾದರೂ ತಾನು ಅಮೆರಿಕನ್ ಎಂದು ಹಣೆಪಟ್ಟಿ ಧರಿಸಿಕೊಂಡಿರುತ್ತಾರೇನು? ಮುಖದ ಮೇಲೆ ಆ ಹುಡುಗಿ ಹಾಗಂತ ಕೆತ್ತಿಸಿಕೊಂಡಿದ್ದಳೇನು? ಆ ದೊಂಬಿಯಲ್ಲಿ ಇವನು ನಿಂತು ಅವಳ್ಯಾರು? ಯಾವ ಊರು? ಅವಳನ್ನು ಕೊಲ್ಲುವುದು ಸೂಕ್ತವೆ? ಕೊಂದು ಬುದ್ಧಿ ಕಲಿಸಲೆ? ಎಂದೆಲ್ಲ ಯೋಚಿಸಲು ಆಸ್ಪದವಿತ್ತೇನು?

ಕೆಂಗಣ್ಣಿನಿಂದಲೇ ಕೊಲ್ಲುತ್ತಿರುವ ನನ್ನ ನಿಂದಕರೆಲ್ಲ ಅಮ್ಮ ಮಗನ ನಡುವೆ ಅದ್ಭುತ ಬಾಂಧವ್ಯವೊಂದಿತ್ತು, ಇವಳು ಸು ಅಂದರೆ ಸಾಕು ಅವ ಸುಷ್ಮಿ ರಾಗ ಹಾಡುತ್ತಿದ್ದ ಎಂದು ಭಾವಿಸಿದಂತಿದೆ! ಅಮ್ಮ ತಾನೆ? ತಿದ್ದಿ ತೀಡಿ ಬೆಳೆಸಿದವಳು ಅವಳೇ ತಾನೆ ಎಂದು ದೂರುವಂತಿದೆ. ನಾನು ಕಾಲಿನಲ್ಲಿ ಹೇಳಿದ್ದನ್ನು ಅವ ತಲೆಯಲ್ಲಿ ಹೊತ್ತು ಮಾಡುತ್ತಿದ್ದ ಎಂದು ಅಂದುಕೊಂಡಂತಿದೆ!

ಅಂತಹ ವಿಧೇಯ ಮಗ!! ಅದೂ ನನಗೆ? ಅ ಪುಣ್ಯಕೋಟಿಯ ಕರುವಾಗಿದ್ದಲ್ಲಿ, ಸದ್ಗುಣ ಸಂಪನ್ನ ಪುತ್ರನಾಗಿದ್ದಲ್ಲಿ, ಕೊಲೆಯೊಂದನ್ನು ಮಾಡಲು ಹೇಗೆ ಸಾಧ ಎಂದು ಯಾರೂ ಯಾಕೆ ಯೋಚಿಸಲೊಲ್ಲರು?

ನೇರವಾಗಿ ಸತ್ಯವೊಂದನ್ನು ಹೇಳಲಾ? ನನ್ನ ಮಗ ನಿನ್ನ ಮಗಳನ್ನು ಕೊಂದ ಎಂಬ ಸುದ್ದಿ ಕೇಳಿದಾಗ ನನಗೆ ಆಶ್ಚರ್ಯವೇನೂ ಆಗಲಿಲ್ಲ. ಹಾಗೆ ಹೇಳಿದರೆ ಅದರಿಂದ ನನಗೆ ಸಂತೋಷವಾಯಿತೆಂದಲ್ಲ, ಕೊಲ್ಲುವುದು ಎಂದಿಗೂ ಸರಿಯಲ್ಲ.

ಆದರೆ ನನ್ನ ಮಗ ಏನು ಎಂದು ನಿನಗೆ ತಿಳಿಯುವುದೂ ಸಹ ಅವಶ್ಯಕ. ನಿನ್ನ ಮಗಳನ್ನು ಕೊಂದಿದ್ದು ನನಗೆ ಏ ಆಘಾತ ತರಲಿಲ್ಲ ಎಂದು ನಿನಗೆ ಆಗ ಅರ್ಥವಾಗಬಹುದು ನನ್ನ ಮಗ ಏನು ಮಾಡಿದರೂ ನನಗೀಗ ಆಶ್ಚರ್ಯವಾಗು ವುದಿಲ್ಲ, ಅವ ನನ್ನ ಬಸಿರಲ್ಲಿ ಪಟ್ಟಾಗಿ ಕೂತ ರೀತಿಯನ್ನು ನೋಡಿದ ಮೇಲೂ? ಹಾಗೆ ಕೂತು ನಾನೇನಾಗಿದ್ದೆನೋ ಏನಾಗಬಹುದಿತ್ತೋ ಎಲ್ಲವನ್ನೂ ನಾಶ ಮಾಡಿದ ಮೇಲೂ?

ಅವ ಯಾರೋ ಒಬ್ಬರನ್ನು ಒಂದಲ್ಲ ಒಂದು ದಿನ ಕೊಲ್ಲುತ್ತಾನೆ ಎಂದು ನನಗೆ ತುಂಬ ದಿನಗಳಿಂದ ಅನ್ನಿಸುತ್ತಿತ್ತು ಆ 'ಯಾರೋ ಒಬ್ಬರು' ಅವನ ಸ್ನೇಹಿತರಲ್ಲಿ ಒಬ್ಬರಾಗಿ ಅಥವಾ ನನ್ನ ಮಕ್ಕಳಲ್ಲಿ ಒಬ್ಬರಾಗಿಲ್ಲ ಎನ್ನುವುದೇ ಅಚ್ಚರಿಯ ಸಂಗತಿ. ಆದರೆ ಅವನು ಜಾಣ, ತನ್ನ ತಮ್ಮನನ್ನು ಕೊಲ್ಲಲು


ರಟ ಜಾಡು ಸಿಕ್ಕಿತು. ಗಡುಸು ಪಾದದ ಪ್ರಾಣಿಗಳ ಡು ಹಿಡಿಯುವುದಕ್ಕಿಂತ ಈ ಮೃದು ಪಾದದ ಪ್ರಾಣಿಗಳ ತನ್ನು ಹಿಡಿಯುವುದು ತುಂಬಾ ಪ್ರಯಾಸದ ಕೆಲಸ. ದರೆ ಅನೇಕ ವರ್ಷಗಳ ಅನುಭವ ಮತ್ತು ಶಿಕಾರಿ ಯಿಗಳೊಂದಿಗೆ ಪಳಗಿದ್ದರಿಂದ ಈ ಕೆಲಸ ಸ್ವಲ್ಪಮಟ್ಟಿಗೆ ಲಭವಾಗಿತ್ತು. ನೆರಳಿನಷ್ಟು ನಿಶ್ಯಬ್ದವಾಗಿ ಹುಲಿಯ ಡಿಗಿಳಿದೆ, ಹುಲಿ ಸಮೀಪದಲ್ಲೇ ಎಲ್ಲೋ ಇದೆ ಎಂಬ ಮಾನಿಯೊಂದಿಗೆ. ನನ್ನ ನಡಿಗೆ ನಿಧಾನವಾಗಿತ್ತು. ಹಾಗೆ ರು ಗಜಗಳಷ್ಟು ಕ್ರಮಿಸುವ ಹೊತ್ತಿಗೆ ನನಗೊಂದು ಬಯಲು ಎದುರಾಯಿತು. ಅಂಗಿಪ್ಪತ್ತು ಇಂಗಿಪ್ಪತ್ತು ಡಿಗಳಷ್ಟು ಅಗಲವಾಗಿದ್ದ ಇದರ ಮೇಲೆಲ್ಲಾ ಬೇರಿನಿಂದ ಥವಾದ ಪರಿಮಳ ಬೀರುವ ಗಿಡ್ಡ ಹುಲ್ಲು ದಟ್ಟವಾಗಿ ದಿತ್ತು. ಹಾಗಾಗಿ ಇಡೀ ಹುಲ್ಲುಗಾವಲು ಬಹುಪಾಲು ಣುತ್ತಿತ್ತು. ಈ ಹುಲ್ಲುಗಾವಲಿನ ನಡುವೆ ಒಂದೆಡೆ ಲಿ ಮಲಗಿರುವ ಆಕಾರದ ಹುಲ್ಲು ಮುದ್ರೆ ಹೊಡೆದಂತೆ ರಿಸಿ ಮಲಗಿತ್ತು.

ನಾನು ಹುಲಿಯಾಕಾರದ ಆ ಮುದ್ರೆಯನ್ನೇ ನೋಡುತ್ತಾ ಲಿಯ ಗಾತ್ರವನ್ನು ಅಂದಾಜು ಮಾಡುತ್ತಿದ್ದೆ. ಅದು ರಂಭದಲ್ಲಿ ಹೆಜ್ಜೆಗುರುತುಗಳನ್ನು ನೋಡಿ ಅಂದಾಜು ಮಾಡಿದ್ದಕ್ಕಿಂತ ದೊಡ್ಡದಾಗಿತ್ತು. ಅಷ್ಟರಲ್ಲಿ ಆ ಮುದ್ರೆಯ ಚಿನಲ್ಲಿದ್ದ ಹುಲ್ಲಿನ ದಳಗಳು ಒಂದೊಂದೇ ಲೇಳುತ್ತಿರುವುದು ಕಾಣಿಸಿತು. ಇದು ಕೊಡುವ ಚನೆಯೆಂದರೆ ಹುಲಿ ಈಗಷ್ಟೇ.... ಅಂದರೆ ಕೆಲವೇ ಗಳ ಹಿಂದೆ ಇಲ್ಲಿಂದ ಎದ್ದು ಹೋಗಿದೆ ಎಂಬುದು.

ಈ ಹುಲಿ ತನ್ನ ಬಲಿಯನ್ನು ಎಳೆದುಕೊಂಡು ದಿರುವ ಕುರಿತು ನಾನು ಕೊಟ್ಟಿರುವ ವಿವರಗಳ ಗ್ಗೆ ಈಗಾಗಲೇ ನಿಮ್ಮ ತಲೆಯಲ್ಲೊಂದು ನಕ್ಷೆ ಡಿರಬೇಕು. ಅದು ಉತ್ತರದ ತಗ್ಗಿನಿಂದ ತಂದ ಣವನ್ನು ನಾನು ನಿಂತಿದ್ದ ಚಾಚುಗಲ್ಲಿನ ಇನ್ನೊಂದು ಖದಲ್ಲಿ ಹಾಕಿಕೊಂಡು ತಿಂದು, ಪಶ್ಚಿಮ ದಿಕ್ಕಿನತ್ತ ೋಗಿತ್ತು. ಈಗ ನಾನು ನಿಂತಿರುವ ಜಾಗದಿಂದ ಈ ನೆಯ ದಾರಿಯಲ್ಲಿ ಗೆರೆಗಳನ್ನು ಎಳೆಯುವುದಾದರೆ ದು ತ್ರಿಕೋನ ಸೃಷ್ಟಿಯಾಗುತ್ತಿತ್ತು. ಅದರ ಒಂದು ಜ ನಲವತ್ತು ಗಜಗಳಷ್ಟು ಉದ್ದವಿದ್ದರೆ ಮತ್ತೆರಡು ರು ಗಜಗಳಿಗೂ ಉದ್ದವಾಗುತ್ತಿದ್ದವು.

ನಾನು ಮೊದಲಿಗೆ ಹುಲ್ಲಿನ ನಡುವೆ ಹುಲಿಯ ದ್ರೆಯನ್ನು ಗುರುತಿಸಿ, ಅದು ಅಲ್ಲಿಂದ ಎದ್ದು ಹೋಗಿರು ದನ್ನು ಗುರುತಿಸಿದಾಗ ನನ್ನನ್ನೇ ನೋಡಿ ಎದ್ದು ಹೋಗಿದೆ ದು ಭಾವಿಸಿದ್ದೆ. ಆದರೆ ಹಿಂತಿರುಗಿ ನೋಡಿದಾಗ ು ಹಾಗೆ ಸಂಭವಿಸಿಲ್ಲ ಅನಿಸಿತು. ಏಕೆಂದರೆ ಇಲ್ಲಿಂದ ು ನಿಂತಿದ್ದ ಶಿಲಾಮುಖವಾಗಲೀ, ಕೋಣದ ಕಳೇಬರ ಗಲೀ ಸುತಾರಾಂ ಕಾಣುತ್ತಿರಲಿಲ್ಲ. ಇನ್ನು ನಾನು ಇಲ್ಲಿಗೆ ದು ಬರುವಾಗ ಅದು ನನ್ನನ್ನು ಗಮನಿಸುವ ಸಾಧ್ಯತೆ ಇರಲಿಲ್ಲ ಎಂದು ನನಗೆ ಖಚಿತವಾಗಿ ಗೊತ್ತಿದೆ. ಆದರೂ ತೂಲಿಕಾತಲ್ಪದಂತಿದ್ದ ಈ ಹುಲ್ಲುಹಾಸಿನ ಸುರಕ್ಷಿತ ಜಾಗವನ್ನು ಅದು ಬಿಟ್ಟಿದ್ದೇಕೆ? ನನ್ನ ಹಿಂದಿನಿಂದ ಉರಿಕಾರುತ್ತಿದ್ದ ಸೂರ್ಯ ಕುತ್ತಿಗೆಯ ಹಿಂಭಾಗವನ್ನು ಬೆಂಕಿ ಇಟ್ಟಂತೆ ಸುಡುತ್ತಿದ್ದ. ನನಗೆ ಆಗ ಹೊಳೆಯಿತು. ಮೇ ತಿಂಗಳ ಹಿಮಾಲಯದ ಈ ಸೂರ್ಯನ ಹಿಂಸಾತ್ಮಕ ಬೇಗೆಗೆ ಎಂಥ ಪ್ರಾಣಿಯೂ ತತ್ತರಿಸುವುದು ಖಂಡಿತ ಎಂದು. ಈ ಬೆಳಗಿನ ಒಂಭತ್ತು ಗಂಟೆಯ ಸೂರ್ಯನ ಝಳ ಕೆಲವೇ ನಿಮಿಷಗಳ ಹಿಂದೆ ಹುಲಿಯು ಮಲಗಿದ್ದ ಜಾಗಕ್ಕೆ ನೆರಳು ಬೀಳುತ್ತಿದ್ದ ಮರವನ್ನು ದಾಟಿ ಪಕ್ಕಕ್ಕೆ ಸರಿದಿದೆ. ನೇರವಾಗಿ ಹುಲಿಯ ಮುಖಕ್ಕೇ ಬಿಸಿಲು ಹೊಡೆಯತೊಡಗಿದೆ. ಇದರಿಂದ ಕಿರಿಕಿರಿಗೊಂಡ ಹುಲಿ ಅಲ್ಲಿಂದ ಎದ್ದು ನೆರಳಿಗೆ ಹೊರಟುಹೋಗಿದೆ. ಈ ತನಿಖಾ ವರದಿಯ ವಿವರಗಳು ಏಕೆಂದರೆ ಹುಲಿ ಒಂದು ಪಕ್ಷ ಹೀಗಲ್ಲದೆ ನನ್ನನ್ನೇ ನೊಡಿ ಅಲ್ಲಿಂದ ಎದ್ದು ಹೋಗಿದ್ದರೆ ಮುಂದಿನ ಹೋರಾಟದಲ್ಲಿ ಬಹಳ ವ್ಯತ್ಯಾಸಗಳಾಗುತ್ತವೆ.

ನಾನು ಮೊದಲೇ ತಿಳಿಸಿದಂತೆ ಈ ಹುಲ್ಲುಗಾವಲು ನಾಲ್ಕು ಚದರಗಳಷ್ಟು ವಿಸ್ತಾರವಾಗಿದೆ. ನಾನು ಬಂದ



ಮೋಹನಾದ ನರಭಕ್ಷಕ

ದಿಕ್ಕಿನಿಂದ ಎದುರಿಗಿರುವ ಹುಲ್ಲುಗಾವಲಿನ ಇನ್ನೊಂದು ಅಂಚಿನಲ್ಲಿ ಒಣಗಿದ ಮರವೊಂದು ಉತ್ತರ-ದಕ್ಷಿಣವಾಗಿ ಬಿದ್ದಿದೆ. ಇದರ ಸುತ್ತಳತೆ ಅಂದಾಜು ನಾಲ್ಕು ಅಡಿಗಳು. ಅದರ ಕಿತ್ತು ಬಿದ್ದ ಬುಡ ಹುಲ್ಲುಗಾವಲಿನಾಚೆಯ ಬೆಟ್ಟಕ್ಕೆ ಮುಖ ಮಾಡಿದೆ. ಅದರ ತುದಿ ಹುಲ್ಲುಗಾವಲಿನ ಮಧ್ಯದಲ್ಲಿದ್ದು, ನನ್ನಿಂದ ಹತ್ತು ಅಡಿಗಳ ದೂರದಲ್ಲಿ ನನಗೆ ಸ್ವಲ್ಪ ಓರೆಯಾಗಿ ಮುಖ ತಿರುಗಿಸಿಕೊಂಡು ಬಿದ್ದಿದೆ. ಇದರ ಬೇರಿನ ಕಡೆಯ ಬೆಟ್ಟ ಗೋಡೆಯಂತೆ ನೆಟ್ಟಗೆ ನಿಂತಿದ್ದು ಇದರಿಂದ ಸೃಷ್ಟಿಯಾಗಿದ್ದ ಕಣಿವೆ ಸುಮಾರು ಮೂವತ್ತು ಗಜಗಳವರೆಗೆ ಸರಳರೇಖೆಯಲ್ಲಿ ಮುಂದು ವರಿದು ದಟ್ಟವಾದ ಕಾಡಿನೊಳಗೆ ಲೀನವಾಗಿದೆ.

ಸೂರ್ಯನ ಕಾರಣದಿಂದಲೇ ಹುಲಿ ತನ್ನ ಮೊದಲ ಜಾಗವನ್ನು ಬಿಟ್ಟಿದೆ ಎನ್ನುವುದಾದರೆ, ಅದಕ್ಕೆ ಇಲ್ಲಿ ಬಿದ್ದಿರುವ ಮರದ ಬೇರಿನ ಬಳಿ ಇರುವ ತಗ್ಗು ಪ್ರದೇಶವೇ ಅತ್ಯಂತ ಪ್ರಶಸ್ತವಾದ ಸ್ಥಳ. ನಾನಂತೂ ಹಾಗೆಯೇ ಊಹಿಸಿದ್ದೆ ಮತ್ತು ಆಶಿಸಿದ್ದೆ. ಇದನ್ನು ಖಚಿತಪಡಿಸಿಕೊಳ್ಳಲು ಇಂಚಿಂಚಾಗಿ ಮುಂದುವರಿದೆ. ನಾನು ಮರದ ಸಮೀಪಕ್ಕೆ ಬಂದಾಗ ಒಂದು ಚಿತ್ರ ನನ್ನ ನೆನಪಿನಂಗಳದಲ್ಲಿ ಸರಿದು ಹೋಯಿತು. ಸಿಂಹದ ಶಿಕಾರಿಗೆಂದು ಹೋಗಿದ್ದ ಒಬ್ಬಂಟಿ ಶಿಕಾರಿದಾರನೊಬ್ಬ ತಾನು ನಿಂತ ಏಣುಗಲ್ಲಿನಿಂದ ಮೇಲಕ್ಕೆ ನೋಡುತ್ತಿದ್ದಾನೆ, ಅದರ ಮೇಲಿನಂಚಿನಿಂದ ಆಫ್ರಿಕಾದ ಭೀಕರ ಸಿಂಹವೊಂದು ಇವನ ಕಣ್ಣೊಳಗೆ ಕಣ್ಣುಹಾಕಿ ನೋಡುತ್ತಿದೆ. ಈ ಚಿತ್ರದ ಕೆಳಗೊಂದು ಬರಹವಿದೆ 'ಸಿಂಹವೊಂದನ್ನು ನೀವು ಶಿಕಾರಿ ಮಾಡಲು ಹೋದಾಗ ಅದನ್ನು ಕಣ್ಣಾರೆ ನೋಡಿ ಖಚಿತಪಡಿಸಿಕೊಳ್ಳಬೇಕು' ಎಂದು. ನಾನು ಹುಲಿಗಾಗಿ ನೋಡುತ್ತಿದ್ದಾಗ ಈ ಚಿತ್ರ ನನ್ನ ನೆನಪಿಗೆ ಬಂದಿದ್ದು ಆಕಸ್ಮಿಕವೇನಲ್ಲ. ಎರಡೂ ಸಂದರ್ಭಗಳಲ್ಲಿ ಸಾದೃಶ್ಯವಿತ್ತು. ನಾನು ಕೆಳಗಿರಬಹುದಾದ ಹುಲಿಯನ್ನು ಹುಡುಕುತ್ತಿದ್ದೆ, ಅವನು ಮೇಲಿದ್ದ ಸಿಂಹವನ್ನು ನೋಡುತ್ತಿದ್ದ. ಈಗ ನಾನು ಹೊಡೆಯುವ ಮುಂಚೆ ಹುಲಿಯನ್ನು ನೋಡಿ ಖಚಿತಪಡಿಸಿಕೊಳ್ಳಬೇಕು.

ನಾನು ನಿಧಾನವಾಗಿ ಕಾಲುಗಳನ್ನು ಜರುಗಿಸುತ್ತಾ ಅರ್ಧದಷ್ಟು ಮುನ್ನೆಡೆದು ಮರಕ್ಕೆ ಹತ್ತಿರಾದೆ. ಮರ ನನ್ನಿಂದ ಐದು ಅಡಿಗಳಷ್ಟು ದೂರದಲ್ಲಿತ್ತು, ಆಗ ನನ್ನ ಕಣ್ಣಿಗೆ ಬಿದ್ದ ಹಳದಿ-ಕಪ್ಪು ಬಣ್ಣದ ವಸ್ತುವೊಂದು ಆ ಮರ ಹಾಗೂ ಅದರ ಮುಂದಿನ ಜಾಗವನ್ನು ಪ್ರತ್ಯೇಕಿಸುವಂತೆ ಬಿದ್ದಿತ್ತು, ಅದು ಒಂದು ಕಲ್ಲಿನ ಏಣಿನ ಮೇಲೆ ಹಾವಿನಂತೆ ಮಲಗಿತ್ತು, ನಿಶ್ಚಲನಾಗಿ ನಿಂತು ಅದನ್ನೇ ತದೇಕಚಿತ್ತನಾಗಿ ನೋಡಿದೆ. ಅಂತಿಮವಾಗಿ ಸತ್ತಂತೆ ಬಿದ್ದಿದ್ದ ಅದು ಹುಲಿಯ ಬಾಲವೆಂದು ಖಚಿತವಾಯಿತು. ಈ ಬಾಲ ನನ್ನ ವಿರುದ್ಧ ದಿಕ್ಕಿಗೆ ಮುಖ ಮಾಡಿದ್ದರೆ ಅದರ ಮುಂದುವರಿದ ಇನ್ನೊಂದು ತುದಿಯಲ್ಲಿರುವ ತಲೆ ನನ್ನತ್ತ ಮುಖ ಮಾಡಿರಲೇಬೇಕಲ್ಲವೇ? ಈ ಕಲ್ಪನೆ ಹುಟ್ಟುತ್ತಿದ್ದಂತೆ ನಾನು ಗಾಬರಿ ಬಿದ್ದೆ. ಈವರೆಗೂ ಇಂಥಾ ಸಾಧ್ಯತೆಯೊಂದು ನನಗೆ ಹೊಳೆದಿರಲೇ ಇಲ್ಲ. ಅದು ಹೊಳೆದಾಗ ನಾನು ಅದರಿಂದ ಕೆಲವೇ ಅಡಿಗಳ ದೂರದಲ್ಲಿದ್ದೇನೆ. ಅದು ಹೇಗಿತ್ತು ಎಂದರೆ, ನನ್ನ ಆಗಮನದ ಸುಳಿವು ಹಿಡಿದ ಹುಲಿ ಮರದ ಪಕ್ಕದ ತಗ್ಗಿನಲ್ಲಿ ನನ್ನ ಮೇಲೆ ಆಕ್ರಮಣ ಮಾಡುವ ಮುಹೂರ್ತಕ್ಕಾಗಿ ಕೌಚ ಮಲಗಿದೆ. ಇನ್ನೇನು ನನ್ನ ತಲೆ ಕಾಂಡದ ಮರೆಯಿಂದ ಮೇಲೇಳುತ್ತಿದ್ದಂತೆ ಅದು ನನ್ನ ಮೇಲೆ ಎರಗುತ್ತದೆ. ಹುಲಿಯ ಬಾಲದ ತುದಿ ಈಗ ನನ್ನಿಂದ ಇಪ್ಪತ್ತು ಅಡಿಗಳ ದೂರದಲ್ಲಿದೆ ಎಂದರೆ, ಅದರ ತಲೆಯ ತುದಿಯವರೆಗಿನ ಉದ್ದ ಹನ್ನೆರಡು ಅಡಿಗಳು. ಹಾಗಲ್ಲಾ, ಕೌಚಿ ಕುಳಿತ ಹುಲಿ ದೇಹವನ್ನು ಸಂಕುಚಿತಗೊಳಿಸಿಕೊಂಡಿರುತ್ತದೆ ಎಂದರೂ ಅದರ ಉದ್ದ ಎಂಟು ಅಡಿಗಳು. ಹೀಗೆಂದರೂ ನನ್ನ ಮತ್ತು ಹುಲಿಯ ನಡುವಿನ ಅಂತರ ಎಂಟತ್ತು ಅಡಿಗಳು ಮಾತ್ರ. ಆದರೆ ಹುಲಿ ನನಗೆ ಕಾಣುತ್ತಿಲ್ಲ. ಬಾಲಕ್ಕೆ ಗುಂಡು ಹೊಡೆಯುವುದು ಶಿಕಾರಿಯಾಗುವುದಿಲ್ಲ.

ಭೀತಿಯಸ್ನೆಲ್ಲಾ ಭಗವದ್ಇಚ್ಛೆಗೆ ಬಿಟ್ಟು, ಧೈರ್ಯ ಮಾಡಿ ನಿಧಾನವಾಗಿ ಪಕ್ಕಕ್ಕೆ ಸರಿದು, ಹೆಜ್ಜೆಮೇಲೆ ಹೆಜ್ಜೆ ಇಡುತ್ತಾ ಮುಂದುವರಿದೆ. ನನಗೆ ಹುಲಿ ಕಾಣಬೇಕು ಹಾಗೂ ಹೊಡೆದ ನಂತರ ನನ್ನ ಕಾಲಮೇಲೆ ನಾನು ಬಲವಾಗಿ ನಿಲ್ಲುವ ಸಾಧ್ಯತೆ ಇರುವಷ್ಟು ಅಂತರ ಕಾಪಾಡಿಕೊಳ್ಳಬೇಕು. ನಾನು ನಾಲ್ಕೈದು ಹೆಜ್ಜೆ ಸರಿಯುವುದರೊಳಗೆ ಹುಲಿಯ ಪೂರ್ತಿ ಬಾಲ.... ಅದರ ಹಿಂದೆ ಸೊಂಟದ ಭಾಗ.... ಕಾಣಿಸಿತು. ಇನ್ನೊಂದು ಹೆಜ್ಜೆ ಹುಲಿಯ ಹೊಟ್ಟೆಯ ಭಾಗ.... ಇನ್ನೆರಡು ಹೆಜ್ಜೆ ಹುಲಿಯ ಭುಜ.... ತಲೆಯ ಭಾಗ.... ಇನ್ನೊಂದು ಹೆಜ್ಜೆ ಈಗ ಹುಲಿ ಸಂಪೂರ್ಣವಾಗಿ ಕಾಣುತ್ತಿತ್ತು. ಆದರೆ ಅಲ್ಲಿ ಹುಲಿ ನನ್ನ ಮೇಲೆ ಎರಗಲು ಕೌಚಿ ಕುಳಿತಿರಲಿಲ್ಲ, ಬದಲಾಗಿ ಅಲ್ಲಿದ್ದ ಅದರಷ್ಟೇ ಅಗಲದ ತಗ್ಗಿನುದ್ದಕ್ಕೂ ಮೈಚಾಚಿ, ತಲೆಯನ್ನು ಎದುರಿನ ಹುಲ್ಲಿನ ದಂಡೆಯ ಮೇಲಿಟ್ಟುಕೊಂಡು, ಕಣ್ಣುಗಳನ್ನು ಮುಚ್ಚಿ ಮೂಗನ್ನು ಆಕಾಶಕ್ಕೆ ತೆರೆದು ದೀರ್ಘದಂಡ ಪ್ರಣಾಮ ಮಾಡುವಂತೆ ನಿಶ್ಚಿಂತೆಯಿಂದ ಮಲಗಿತ್ತು.

ನಾನು ನನ್ನ ಬಂದೂಕವನ್ನು ಎತ್ತಿದೆ. ತಕ್ಷಣ ನಾನು ಮಾಡಿದ್ದ ತಪ್ಪು ಹೊಳೆಯಿತು, ಬಂದೂಕವನ್ನು ನಾನು ಅನ್‌ಲಾಕ್ ಮಾಡಿರಲಿಲ್ಲ, ಕಾಡಿನೊಳಕ್ಕೆ ಇಳಿಯುವಾಗ ಎಲ್ಲವನ್ನು ಪರೀಕ್ಷಿಸಿ, ಮನೆಯಲ್ಲಿ ಮಾಡಿದಂತೆ ಬಂದೂಕವನ್ನು ಲಾಕ್‌ಮಾಡಿ ಬಿಟ್ಟಿದ್ದೆ. ನನ್ನ ಜೀವಮಾನದಲ್ಲಿ ಎಂದೂ ಹೀಗೆ ಮಾಡಿದವನಲ್ಲ. ಈಗ ಅನ್‌ಲಾಕ್ ಮಾಡಲು ಹೋದರೆ ನನ್ನ ಈ 450/400 ಮಾಡೆಲಿನ ಹೆವಿ ಬಂದೂಕ ಕ್ಲಿಕ್...ಕ್ಲಿಕ್... ಎಂದು ಕನಿಷ್ಟ ಸದ್ದನ್ನು ಮಾಡಿಯೇ ಮಾಡುತ್ತದೆ. ಇದನ್ನು ಕೇಳಿ ಅಭ್ಯಾಸವಿದ್ದ ನನಗೆ ಅದು ಕನಿಷ್ಟ ಸದ್ದಾದರೂ.... ಸತ್ತಂತೆ ಮಲಗಿರುವ ಹುಲಿಯ ವಿಷಯದಲ್ಲಿ ಅದು ಗಂಭೀರವಾದದ್ದು. ಹುಲಿ ಸದ್ದಿನ ವಿಷಯದಲ್ಲಿ ಎಷ್ಟು ಸೂಕ್ಷ್ಮ ಪ್ರಾಣಿ ಎಂದರೆ ಅವು ಎಂಥ ಸಣ್ಣ ಸದ್ದನ್ನೂ ಸಮರ್ಥವಾಗಿ ವಿಂಗಡಿಸಿ ಬಿಡುತ್ತವೆ, ಎಷ್ಟೇ ನಿದ್ದೆಯಲ್ಲಿರಲಿ. ಒಂದಿಷ್ಟು ಯೋಚಿಸಿದೆ, ಇನ್ನೊಂದಿಷ್ಟು ಬದಿಗೆ ಸರಿದು ನೇರವಾಗಿ ಹುಲಿಯ ಹಣೆಗೆ ಗುರಿಕಟ್ಟಿ, ನಾನು ರೂಪಿಸಿದ್ದ ತಂತ್ರದಂತೆ ಟ್ರಿಗರನ್ನು ಒತ್ತಿದೆ.... ಆದರೆ ಅದನ್ನು ಬಿಡುಗಡೆ ಮಾಡದೆ; ಹಾಗೇ ಹಿಡಿತ ಸಾಧಿಸಿ ಚಕ್ಕನೆ ಸೇಫ್ಟಿಕ್ಯಾಚನ್ನು ತೆಗೆದೆ. ಹೀಗೆ ಮಾಡಿದರೆ ಬಂದೂಕ ಹೇಗೆ ವರ್ತಿಸುತ್ತದೆ ಎಂದು ನನಗೂ ಗೊತ್ತಿರಲಿಲ್ಲ. ಆತಂಕದಿಂದ ನೋಡುತ್ತಿದ್ದೆ. ಆದರೆ ಎಲ್ಲಾ ನಾನು ಅಂದುಕೊಂಡಂತೇ ನಡೆಯಿತು. ಗುಂಡು ನಿಖರವಾಗಿ ಹುಲಿಯ ನಡುಹಣೆಗೆ ಅಪ್ಪಳಿಸಿ.... ಆದರ ದೇಹದುದ್ದಕ್ಕೂ ತೂರಿಹೋಯಿತು.


ಅನುವಾದ:

ಡಾ. ಟಿ.ಎಸ್. ವಿವೇಕಾನಂದ

ುತ್ತಿಸಲಿಲ್ಲ. ಆ ತಮ್ಮನೆನಿಸಿಕೊಂಡವನು ಇವನನ್ನು ೀ ಕೈಗಳಿಂದಲೇ ಈ ಲೋಕದಿಂದಾಚೆ ಅಟ್ಟರುತ್ತಿದ್ದ. ಾಗಿದ್ದರೆ ಎಷ್ಟು ವಾಸಿಯಿರುತ್ತಿತ್ತು! ನಿನ್ನ ಮಗಳು ತ್ತು ಜೀವದಿಂದಿರುತ್ತಿದ್ದಳು ಅಥವಾ ಇಲ್ಲವೋ ಏನೋ. ೊಬ್ಬ ಪಾತಕನ ಕೈಯಲ್ಲಿ ಆಕೆ ಅಸು ನೀಗಿರುವ ಧ್ಯತೆಯಿದೆಯಲ್ಲ? ಅಂತಹ ಪಾತಕರು ಇಲ್ಲಿ ುಲೆಟುವಿನಲ್ಲಿ, ಲಾಂಗಾದಲ್ಲಿ, ನ್ಯಾಂಗಾದಲ್ಲಿ, ಅಲ್ಲಿ ುೇಲಿಟ್‌ಶಾದಲ್ಲಿ ಈ ದೇಶದಲ್ಲಿ ಎಲ್ಲೆಲ್ಲಿಯೂ ಬಿದ್ದಾರಲ್ಲ?

ಆದರೆ ಕೇಳಲು ನನಗೊಂದು ಪ್ರಶ್ನೆಯಿದೆ. ನಿನ್ನ ಗಳು ಎಲ್ಲ ಬಿಟ್ಟು ಈ ಗುಗುಲೆಟುವಿನಲ್ಲಿ ಅಲೆಯು ಕಲ್ಲ, ಅವಳಿಗೆ ಉಸಾಬರಿಯಿಲ್ಲದ ಜಾಗದಲ್ಲಿ ಕಾಲಿಟ್ಟಿದ್ದ ಅವಳಿಗೇನಾಗಿತ್ತು? ಎಲ್ಲಿಗೆ ಬಂದಿದ್ದಳು ಎಂದು ಳಿಗೇನಾದರೂ ಗೊತ್ತಿತ್ತೇನು? ತನ್ನಂತಹ ಬಿಳಿಯ ಗಲಿನವರು ಇಲ್ಲಿ ಒಬ್ಬರೂ ಇಲ್ಲ ಎಂದು ನೋಡಲಾರ ಕುರುಡಿಯಾಗಿದ್ದಳೇನು?

ಹೌದು, ಯೋಚಿಸಿ ತಲೆ ಬಿಸಿಮಾಡಿಕೊಂಡಷ್ಟೂ ಖಾತರಿಯಾಗುತ್ತಿದೆ. ತಾನು ನಂಬಿರುವುದರಲ್ಲಿ, ಡುತ್ತಿರುವ ಕೆಲಸದಲ್ಲಿ ಅಪಾಯವಿದೆ ಎಂದು ಷ್ಟೂ ಗುರುತಿಸಲಾರದವರ ಗುಂಪಿಗೆ ನಿನ್ನ ಮಗಳು ದವಳಾಗಿರಬೇಕು. ಆ ಹುಂಬತನ ನಿನ್ನ ಮಗಳ ರ್ೌಲ್ಯವಾಗಿತ್ತು ಎಂದು ನನಗೆ ಅನ್ನಿಸುತ್ತಿದೆ. ಅವಳು ದಿನ, ಗುಗುಲೆಟುವಿನಲ್ಲಿ ದಕ್ಷಿಣ ಆಫ್ರಿಕಾದ ಎಷ್ಟು ಜನ ಬಿಳಿಯ ಯುವತಿಯರಿದ್ದರು ಹೇಳು, ನೋಡೋಣ? ಮಾರುಕಟ್ಟೆಯಲ್ಲಿ ಅಡ್ಡಾಡುವವರಂತೆ ಗುಗುಲೆಟುವಿನ ಉದ್ದಗಲದಲ್ಲಿ ಸುತ್ತಾಡುತ್ತಿದ್ದರೇನು? ಆದರೆ ನಿನ್ನ ಮಗಳಂತಹವರಿಗೆ ಭಯದ ಪರಿಚಯವೇ ಇರುವುದಿಲ್ಲ, ತಾವು ಯಾರನ್ನೂ ನೋಯಿಸಿಲ್ಲ, ತಮ್ಮನ್ನೂ ಯಾರೂ ನೋಯಿಸುವುದಿಲ್ಲ ಎನ್ನುವ ಹುಂಬ ನಂಬಿಕೆ!! ತಮ್ಮ ಒಳ್ಳೆಯತನದಲ್ಲಿ ಉಪಕಾರ ಮನೋಭಾವದಲ್ಲಿ ಅಷ್ಟು ಅಪಾರವಾದ ವಿಶ್ವಾಸ!



ಅಪಾಯವಿಲ್ಲೇ ಎಲ್ಲೋ ಹೊಂಚು ಹಾಕುತ್ತಿದೆ ಎನ್ನುವ ಪ್ರಜ್ಞೆ ಲವಲೇಶವಾದರೂ ಅವಳಲ್ಲಿ ಇರಲಿಲ್ಲ ಎನ್ನುವುದನ್ನು ನಾನು ಆಣೆ ಮಾಡಿ ಹೇಳಬಲ್ಲೆ, ಅಧಿಕಾರ ಹಿಡಿದಿದ್ದವರ ಕಡೆಯಿಂದ ತನ್ನ ಕಾರ್ಯಕ್ಕೆ ಅಡ್ಡಗಾಲು ಬೀಳಬಹುದು ಎಂದು ಮಾತ್ರ ಊಹಿಸಿದ್ದಳು ಅಷ್ಟೇ.

ನಿನ್ನ ಮಗಳಂತಹವರಿಗೆ ಒಳ್ಳೆಯದು ಮಾಡಬೇಕೆನ್ನುವುದು ಒಂದು ತೀವ್ರ ತುಡಿತ; ದೇಹ, ಮನಸ್ಸು, ಬುದ್ಧಿ ಭಾವಗಳೆಲ್ಲವನ್ನು ಆವರಿಸಿಕೊಳ್ಳುವ ಒಂದು ಉತ್ಕಟ ಸ್ಥಿತಿ. ಈ ಸ್ಥಿತಿ ಬೇರೇನನ್ನೂ ನೋಡಗೊಡಿಸದ ಕಣ್ಣಡೆಯೂ ಆಗಬಹುದಲ್ಲವೆ?

ನಿನ್ನ ಮಗಳ ಜೊತೆಯಲ್ಲಿದ್ದ ಆ ಬೇರೆ ಯುವತಿಯರಲ್ಲಿ ಯಾರನ್ನಾದರೂ ನನ್ನ ಮಗ ಕೊಂದಿದ್ದರೆ ಇಷ್ಟೆಲ್ಲ ರಂಪವಾಗುತ್ತಿತ್ತೇನು? ಗುಗುಲೆಟುವಿನ ಉದ್ದಗಲಕ್ಕೆ ಹಾಯಾಗಿ ಅಡ್ಡಾಡಿಕೊಂಡಿರುವ ಲೆಕ್ಕವಿಲ್ಲದಷ್ಟು ಕೊಲೆಗಾರರಂತೆ ಅವ ಈಗ ಇಲ್ಲೇ ನನ್ನ ಕಣ್ಣೆದುರಿನಲ್ಲಿಯೇ ಇರುತ್ತಿದ್ದ. ಆದರೆ ಅವನೊಬ್ಬ ಬೆಪ್ಪ, ಆ ದಡ್ಡ ತಲೆ ತನ್ನ ಭಾರಕ್ಕೇ ಕುಸಿಯುವ ತನಕವೂ ಅದರಲ್ಲಿ ಯಾವ ಪ್ರಜ್ಞೆಯೆನ್ನುವುದೇ ಇರುವುದಿಲ್ಲ, ಅದರ ತುಂಬ ಇರುವುದು ಸಗಣಿ ಅಷ್ಟೇ. ಥತ್! ಮಾನಗೆಟ್ಟವ! ಕತ್ತೆ ತರಹ ವಯಸ್ಸಾಗಿತ್ತೇ ಹೊರತು ತಲೆಯಂತೂ ಬೆಳೆದಿರಲಿಲ್ಲ, ಬಿಳಿಯಳೊಬ್ಬಳನ್ನು ಕೊಂದರೆ ನೇಣಿಗೆಟ್ಟುತ್ತಾರೆ ಎನ್ನುವುದು ಇಷ್ಟಾದರೂ ಹೊಳೆಯಬೇಡವೆ?

ಆ ನಿನ್ನ ಮಗಳು? ಅವಳು ಶಾಲೆಗೇ ಹೋಗಿಲ್ಲವೇನು? ಇಲ್ಲಿ ಬದುಕುತ್ತಿರುವುದು ಬರೀ ಕರಿಯರು ಎನ್ನುವ ಸತ್ಯವೇ ಗೊತ್ತಿರಲಿಲ್ಲವೇನು? ಹೋಗಲಿ, ಇಲ್ಲಿಗೆ ಬಂದ ಮೇಲಾದರೂ ಇರಿಸುಮುರುಸಿನ ಪ್ರಜ್ಞೆಯಾದರೂ ಬರಬಾರದಿತ್ತೇನು? ಎಲ್ಲೋ ಏನೋ ಸರಿಯಿಲ್ಲ ಎನ್ನುವುದು ಸಹಜವಾಗಿ ಹೊಳೆಯುವ ಭಾವವಲ್ಲವೇನು? ನೀರು ತಪ್ಪಿದ ಮೀನಂತೆ ಚಡಪಡಿಸದೇ ಹಾಯಾಗಿದ್ದಳಲ್ಲ? ಹಾಗಿದ್ದಿದ್ದರೆ ಮನಸ್ಸಿನಲ್ಲಿ ಎಚ್ಚರಿಕೆಯ ಗಂಟೆ ಹೊಡೆದಿರುತ್ತಿತ್ತು. ಇದು ನಿನಗಲ್ಲ ಮಗೂ... ಹಿಂದೆ ತಿರುಗಿ ನೋಡದೇ ಓಡುವುದನ್ನು ಕಲಿ ಎಂಬ ಧ್ವನಿ ಕೇಳಿಸಿರುತ್ತಿತ್ತು. ನಿನ್ನಂತಹವರು ಇಲ್ಲಿ ಸಲ್ಲರು, ಮೊದಲು ತೊಲಗು ಎಂದು ಬುದ್ಧಿ ಎಚ್ಚರಿಸಿರುತ್ತಿತ್ತು. ಅಯ್ಯೋ! ಅವಳ್ಯಾಕೆ ಇಲ್ಲಿ ಬಂದಳು? ಅವಳ್ಯಾಕೆ ಇಲ್ಲಿಂದ ಓಡಿ ಹೋಗಲಿಲ್ಲ?

ಈ ದೇಶದಲ್ಲಿ ಬಿಳಿಯರು ತಮಗೆಂದೇ ಮೀಸಲಾದ ಜಾಗಗಳಲ್ಲಿ ತಮ್ಮ ಪಾಡಿಗೆ ಇರುತ್ತಾರೆ. ನಾವು ಇಲ್ಲಿ ಗುಗುಲೆಟುವಿನಲ್ಲಿ ಕಚ್ಚಾಡುತ್ತಾ, ಬಡಿದಾಡುತ್ತಾ, ಒಬ್ಬರನ್ನೊಬ್ಬರು ಕೊಲ್ಲುತ್ತಾ ಬದುಕುತ್ತೇವೆ. ಅದು ನಮ್ಮ ಪಾಡು. ನಮ್ಮ ಜಾಗಗಳಲ್ಲಿ ಒಬ್ಬ ಇನ್ನೊಬ್ಬನನ್ನು ಕೊಂದರೆ ಅದೇನೂ ಸುದ್ದಿಯಾಗುವುದಿಲ್ಲ, ಆದರೆ ನಿನ್ನ ಮಗಳು ಸತ್ತ ಸುದ್ದಿ ಮಾತ್ರ ವಾರ್ತಾಪತ್ರಿಕೆಯ ತುಂಬ ತುಂಬಿ ತುಳುಕಾಡುತ್ತಿದ್ದದ್ದನ್ನು ನಾನು ಕೆಲಸ ಮಾಡುತ್ತೇನಲ್ಲ, ಆ ಮನೆಯ ಬಿಳಿಯ ಒಡತಿಯೇ ನನಗೆ ತೋರಿಸಿದಳು. ಅದರಲ್ಲಿ ಚಿತ್ರಗಳೂ ಇದ್ದವು.

****

ನನ್ನ ಮಗ ಬದುಕಿನ ಬವಣೆಯ ಹಾದಿಯಲ್ಲಿ ದೂರ ಬಂದಿದ್ದ. ನಿನ್ನ ಮಗಳ ಅಪ್ಪ ಅಮ್ಮಂದಿರು, ಅಜ್ಜ ತಾತ, ಮುತ್ತಾತಂದಿರು ಅವನಿಗೆ ಒಳ್ಳೆಯ ಬದುಕೊಂದನ್ನು ನಿರಾಕರಿಸಿದ್ದರು. ಅವರೆಲ್ಲರ ಪಾಪಕ್ಕೆ ನಿನ್ನ ಮಗಳು ಬಲಿ ತೆರಬೇಕಾಯಿತು.


ಈಗ, ಯಾಕೆ ಈ ಸರ್ಕಾರ ಅವನ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ, ತಲೆಯ ಮೇಲೊಂದು ಸೂರನ್ನು ಕೊಟ್ಟಿದೆ? ಬಿಳಿಯ ಕುಟುಂಬದ ಮಕ್ಕಳ ಲಾಲನೆಪಾಲನೆಯಲ್ಲಿ ನಾನು ದೂರವಿದ್ದಾಗ, ತಿನ್ನಲು ಏನೂ ಸಿಗದೆ ಪಕ್ಕದ ಮನೆಯ ಕೋಳಿಯೊಂದನ್ನು ಹಿಡಿದು, ಕತ್ತು ಹಿಸುಕಿ, ರೆಕ್ಕೆಪುಕ್ಕಗಳನ್ನು ಬಿಸಾಡಿ ನನ್ನ ಮಗ ಬೇಯಿಸಿದ್ದ ದಿನ ಈ ಸರ್ಕಾರ ಎಲ್ಲಿ ಹೋಗಿತ್ತು? ವಾರದ ಕೊನೆಯಲ್ಲಿ ಸಹ ನನ್ನನ್ನು ಅಲ್ಲಿಯೇ ಇರಲು ಹೇಳಲಾಗಿತ್ತು! ಯಾಕೆಂದರೆ ಅವರಿಗೇನೋ ತುರ್ತು ಇತ್ತಂತೆ. ವಾರದ ಕೊನೆಯ ರಜೆಯಲ್ಲಿ ಸಹ ನೀವೆಲ್ಲ ಒಂಟಿಯಾಗಿರಬೇಕಾಗುತ್ತದೆ ಎಂದು ನಾನು ನನ್ನ ಮಕ್ಕಳಿಗೆ ಮೊದಲೇ ಹೇಳಲು ಆಸ್ಪದವೂ ಇರಲಿಲ್ಲ. ಅವರಿಗೋಸ್ಕರ ಮೊದಲೇ ಅಡುಗೆ ಬೇಯಿಸಿ ಬಡಿಯುವ ಅವಕಾಶವೆಲ್ಲಿ? ಕೆಲಸದಲ್ಲಿ ದಿಢೀರನೆ ಬದಲಾವಣೆಯಾಗಿದೆ ಎಂದು ಫೋನಾಯಿಸಿ ಹೇಳಲಿಲ್ಲವಲ್ಲ! ಗುಗುಲೆಟುವಿನಲ್ಲಿ ಯಾರಿಗಾದರೂ ಫೋನ್ ಇತ್ತೇನು? ನನ್ನಂತ ಯಕಶ್ಚಿತ್ತಳಿಗೆ ಫೋನ್ ಇರಲು ಹೇಗೆ ಸಾಧ್ಯ?

ಈಗ, ಎಲ್ಲರೂ ಅವನನ್ನು ಛೀ, ಥೂ ಎಂದು ಹೀಗೆಳೆಯುತ್ತಿರುವಾಗ ಅವನ ತಲೆಯ ಮೇಲೊಂದು ಭದ್ರ ಸೂರಿದೆಯಲ್ಲ, ಇದಕ್ಕೇನು ಹೇಳಲಿ? ಸರಪಳಿಯಲ್ಲಿ ಬಿಗಿಯಲ್ಪಟ್ಟಿದ್ದಾನೆ ಸರಿ, ಆದರೆ ಉಣ್ಣಲು ಅನ್ನ, ಉಡಲು ಬಟ್ಟೆ, ಮಲಗಲು ಆಶ್ರಯವೊಂದು ಇದೆಯಲ್ಲ? ಅವನ ಬದುಕಿನುದ್ದಕ್ಕೂ ಏನನ್ನೂ ಕೊಡದ ಸರ್ಕಾರ ಈಗ ಮಾತ್ರ ಭಾರೀ ಕಾಳಜಿ ವಹಿಸುತ್ತಿದೆಯಲ್ಲ, ಈ ಹುಚ್ಚಿಗೆ ಏನೆನ್ನಲಿ?

ಅಯ್ಯೋ ದೇವರೇ, ನಿನಗೆ ನಾನು ಅರ್ಥವಾಗುತ್ತಿದ್ದೇನೆಯೆ? ನನ್ನ ಮಗನ ಪಾಪಕ್ಕೆ ಶಿಕ್ಷೆಯಾಗಬಾರದು ಎಂದು ನಾನು ಹೇಳುತ್ತಿಲ್ಲ, ಆದರೆ ನಾನೊಬ್ಬ ತಾಯಿ. ನನ್ನಲ್ಲಿ ಮಿಡಿಯುತ್ತಿರುವುದು ತಾಯಿಯ ಹೃದಯ. ಬಟ್ಟಲಲ್ಲಿ ವಿಷ ತುಂಬ ಕುಡಿಯೆಂದು ಕೊಟ್ಟಿದ್ದೀಯ. ನೋವು, ಜುಮ್ಮೆನ್ನಿಸುವ ನೋವು. ಆ ಇನ್ನೊಬ್ಬ ತಾಯಿಯ ಅಪಾರ ನೋವು. ಎಳೆಯಳೊಬ್ಬಳ ಬದುಕು ಕ್ರೂರವಾಗಿ ಕತ್ತರಿಸಿ ಎಸೆಯಲ್ಪಟ್ಟ ನೋವು. ಅಯ್ಯೋ, ದೇವರೆ! ನನ್ನ ಮಗನನ್ನು ಕ್ಷಮಿಸು. ಅವನು ಮಾಡಿದ ಈ ಘೋರ ಪಾಪವನ್ನು ಕ್ಷಮಿಸು.

(ಸಿಂಡಿವೆ ಮಗೋನ ಬರೆದ 'ಮದರ್ ಟು ಮದರ್' (1998) ಕಾದಂಬರಿಯ ಮೊದಲ ಅಧ್ಯಾಯ)

-ಸುಕನ್ಯಾ ಕನಾರಳ್ಳಿ



ಕ್ಯಂಪಗಿದ್ರೆ ವಳ್ಳೆ ಹುಡುಗ ಅಂತರೆ ಇದಕೇನೇಳ್ತೀ

ಬಯಲು ಸೀಮೆಯ ಕಟ್ಟೆ ಪುರಾಣ

■ ಬಿ. ಚಂದ್ರೇಗೌಡ

ವಿಲ್ಸನ್ ಚಾಸ್ತಿ ತಾಕಿ ಕೊಟ್ಟ ಕಾಫಿ ಹೀರುತ್ತ ಕಾಳಮಾವ ಕುಳಿತಿರಬೇಕಾದರೆ, ಒಳ್ಳೆ ಡ್ರೆಸ್ ಮಾಡಿಕೊಂಡು ಜುಮ್ಮಿ ಬಂದಳು. ಕಾಳಮಾವ ಇದೇನೆ ಹಿಂಗೆ ಬಂದೆ ಎನ್ನುವಂತೆ ನೋಡಿದ.

"ಮದುವಿಗೋಗಿ ಬರಬೇಕು ಕಣ ಮಾವ" ಎಂದಳು.

"ಯಾರು ಮದುವೆನ್ನ?"

"ಸುಶೀಲಿ ಹುಡುಗಿದು."

"ಅ ಆ ಗೂಟೆ ಜವರಿರಲಿಲ್ವೆ, ಅವುನುಡುಗಿ ಸುಶೀಲಿ ಅಂತ ಇತ್ತು. ಗ್ವಣ್ಣೆ ಹರಿಸಿಗಂಡು, ಅದ ಗುಂಡ್ಯ ಪ್ಯಾಟಗೆ ಕೊಟ್ಟಿತ್ತು" ಎಂದ ಸೀರ.

"ಅದರ ಮಗಳಾಗ್ಲೆ ಮದುವಿಗೆ ಬಂದಿತ್ತೆ?"

"ಇನ್ನು ಹದುನಾಕೊರ್ಸ ಕಣಮಾವ, ಯಳೆ ಹುಡುಗಿ. ವಳ್ಳೆ ಗಂಡು ಬಂದದೆ ಅಂತ ಮಾಡ್ತ ಅವುಳೆ."

"ವಳ್ಳೆ ಹುಡುಗ ಅಂತ ಇವುಳಿಗ್ಯಂಗೆ ಗೊತ್ತಾಯ್ತು?"

"ಹುಡುಗ ಕ್ಯಂಪಗೆ ವಗಾದಿಕಂಡವುನೆ. ನಮ್ಮ ಜನ ಗೊತ್ತಲ್ಲ ಮಾವ ನಿನಿಗೆ? ಕ್ಯಂಪುಗವುನೆ ಅಂದ್ರೆ ವಳ್ಳೆ ಮನ್ಸ ಅಂತರೆ, ಕರ್‍ರಗೆ ವಳಕೆಸೌದೆ ಅಂಗಿದ್ರೆ ಕ್ಯಟ್ಟಮನ್ಸ ಅಂತರೆ. ಅಂಗೆ ಈ ಸುಶೀಲಿ ಹುಡುಗನ ಬಣ್ಣ ನೋಡಿ ಬೆರಗಾಗ್ಯವುಳೆ."

"ಅದು ನಿಜವೆ ಬುಡು. ಬಣ್ಣಕೆ ಬೆರಗಾದೋಳ ಕತೆಯ ನೋಡಿಲ್ವೆ ನಾನು" ಎಂದ ಕಾಳಮಾವ.

"ವರದಕ್ಷಿಣೆ ಕೊಟ್ಟಿದ್ದಳೇನ್ಲೆ?" ಎಂದ ಸೀರ.

"ಊ ಕೊಟ್ಟವ್ಳೆ. ಒಂದೂವರ ಲಕ್ಷ ಕ್ಯಾಸು, ವಾಚ್ ಉಂಗ್ರ, ಚೈನು ಕೊಟ್ಟು ಮದುವೆ ಮಾಡಿಕೊಡ್ತ ಅವುಳೆ."

"ಆಟೊಂತರ ದುಡ್ನ ಎಲ್ಲಿಂದ ತಂದ್ಲೂ?"

"ದುಡುದಿರಬೇಕು" ಎಂದ ಉಗ್ರಿ.

"ಆಟೊಂತರ ದುಡ್ನ ದುಡಿಯಕ್ಯಾದತ್ಲ? ಅವುಳು ಹಸ ಕಟ್ಟವುಳೆ, ಗಂಡ ಮರಗ್ಯಲಸ ಮಾಡ್ತನೆ. ಜಮೀನಿತ್ತಲ್ಲ ಅದ ಮಾರಿದರಂತೆ."

"ಜಮೀನೇಟಿತ್ತಂತೇ?"

"ಒಂದೂವರ್‍ಯಕರೆ ಇತ್ತಂತೆ. ಅದ ಮಾರಿ ಕೊಡಬೇಕಾದ್ದನ್ಯಲ್ಲಕೊಟ್ಟು ಬೆಂಗಳೂರಲ್ಲಿ ಮದುವೆ ಮಾಡಿಕೊಡ್ತ ಅವುಳೆ."

"ನೋಡವ್ವ. ಇರೊ ಜಮೀನು ಮಾರಿ ಮಗಳ ಮದುವೆ ಮಾಡಿ ಸಾಯುಗಂಟ ಕೂಲಿ ಮಾಡ್ತಿವಿ ಅನ್ನೋರ ಅದ್ಯಾವನು ಉದ್ಧಾರ ಮಾಡಕ್ಯಾದತೂ?"

"ಅಯ್ಯೋ ಮಾವ ನೀನಂಗಂತಿ. ಅವುಳು ಲಗ್ನಪತ್ರುಕೆ ಕೊಡಕ್ಕೆ ಬಂದಾಗ ಅವುಳ ಧಿಮಾಕು ನೋಡಬೇಕಾಗಿತ್ತು ನೀನು. ಜಮೀನು ಹೋಯ್ತಲ್ಲಾ ಅಂತ ಒಂಚೂರು ಯೋಚನೆನೆ ಇರಲಿಲ್ಲ, ರೇಸಮೆಸೀರೆ



ಉಟಗಂಡು ಸರಹಾಯ್ಕಂಡು ಚಪ್ಲಿ ಹಾಯ್ಕಂ... ಗಂಡುನ್ನ ಕರಕಂಡು ಬಂದಿದ್ಳು"

"ಗಂಡ ವಳ್ಳೆ ಹುಡುಗ" ಎಂದ ಸೀರ.

"ಅವುನು ಹೇಳಿದಂಗೆ ಕೇಳ್ತನೆ ಕಣೊ. ಯು... ಇವುಳದೆಯ" ಎಂದ ಉಗ್ರಿ.

"ಅಯ್ಯೋ ಅವುಳಿಗೆ ಬಂದದೆ ಧಿಮಾಕು ಅಂ... ಅಷ್ಟೀಷ್ಟಲ್ಲ ಕಣ ಮಾವ. ವಿಸು ಜುಮ್ಮಿ ಪಂಚಾ... ಮೆಂಬ್ರೇನೆ ಅಂದೋಳು ತಾನೇನು ಕಡಮೆ ಅನ್ನ... ತೋರಿಸಿಗಳಕ್ಕೆ ಅದ್ಯಂತದೊ ಮಿಸಕಿ ತಗಂದಿದ್ದಳಂ... ಟೀವಿ ತಗಂಡಿದ್ದಳಂತೆ, ಬಟ್ಟೆವಗಿಯೊ... ಮಿಸಿನ್ನಿಗೂ ಆರ್ಡು ಕೊಟ್ಟಿದ್ದಳಂತೆ. ಬೀ... ತಗಂಡು ಸೀರೆನ್ಯಲ್ಲ ಅದಕೆ ತುಂಬಿದ್ದಳಂ... ಒಸಿ ಹೇಳ್ಲಿಲ್ಲ".

"ಜಮೀನು ಮಾರಿದ್ರೆ ಅವ್ಯಲ್ಲ ಬತ್... ಕಂಡ್ಯ" ಎಂದ ಕಾಳಮಾವ.

"ಜಮೀನು ಮಡಿಕಂಡಿರೋರತ್ರ ಏನ... ಅಂತ ಮಾಡಿದ್ದೀಯೇ? ಅದೇ ಕೂ... ಮಾಡೋ ಜನಗಳ ಕೈಲಿ ಕಾಸಾದ್ರ... ಅದ್ಕೆ ಯಲ್ಲಾನು ತಂದು ಮಡಿಕ್ಯತ್ತರೆ" ಎಂ... ಉಗ್ರಿ ಹೇಳುತ್ತಿರು ವಾಗ ವಾಟಿಸ್ಸೆ ಕಾಣಿಸಿ...

"ಮದಿವಿಗೆ ಬತ್ತಿಯೇನ್ಲ ವಾಟಿಸ್ಸೆ?"

"ಯಾರ ಮದುವೆನಕ್ಕ?"

"ಸುಶೀಲಿ ಹುಡುಗಿದು ಕಂಡ್ಯ."

"ನಾನೆಲ್ಲೊ ಐಸ್ ಅಭಿ ಮದುವೆ... ಅಂತಿದ್ದೆ ಕಣಕ್ಕ."

"ಐಸಬ್ಬಿ ಅಂದ್ರೆ ಸಾಬರ ಮದುವೆನೆ?"

"ಸಾಬರ ಮದಿವಲ್ಲ ಅಮಿತಾಬಚ್ಚ... ಮಗ ಅಭಿಶೇಕ ವಿಶ್ವಸುಂದರಿ ಐಶ್ವರ್ಯನ ಮದುವೆ ಆಗಿ

'ಮಂಡ್ಯ ರಾಜೀನಾಮೆ' ಎಂಬ ಪ್ರಸಿದ್ಧ ಪ್ರಸಂಗವೂ...

ಅಣಕ

■ ಎಚ್.ಎಲ್. ಕೇಶವಮೂರ್ತಿ

ಈ ಪರಿಯ ನ್ಯಾಯವಾ....

ಕೆಲವು ಸಲ ಈ ಜನಪ್ರತಿನಿಧಿಗಳು ಅನ್ನಿಸಿಕೊಂಡೋರು ಎಷ್ಟು ಚುರುಕಾಗ್ತಾರೆ ಅಂತೀರಿ. ನೆನಪಿಸಿಕೊಂಡರೇ ಆಶ್ಚರ್ಯ ಆಗುತ್ತೆ.

ಯಾವುದೋ ಶಿಕ್ಷಕಿಗೆ ದೈಹಿಕ, ಮಾನಸಿಕ ಕಿರುಕುಳ ನೀಡಿದ ಒಬ್ಬ ಕೀಚಕ. ಜನಪ್ರತಿನಿಧಿಗಳ ಮನಕರಗಿತ್ತು, ಆ ದುರುಳ ಎಸ್‌ಡಿಎಂಸಿ ಅಧ್ಯಕ್ಷ. ಯಾವುದೋ ಕಚ್ಚೆಹರುಕನ ಕೆಲಸ ಅಲ್ಲ ಅದು. ಶಾಸಕರು ಆಗ್ರಹಿಸಿದರು-ಎಸ್‌ಡಿಎಂಸಿ ವಜಾ ಮಾಡಿ!

ಆಶ್ರಯ ಮನೆಗಳ ವಿತರಣೆ ಪಂಚಾಯಿತಿಗೆ ನೀಡಲಾಗಿತ್ತು. ನೋಡಿದರೆ ಅಲ್ಲೂ ಅವ್ಯವಹಾರ! ಬಡವರಿಗೆ ಮನೆ ನೀಡುವಲ್ಲಿಯೂ ಹಣ ತಿಂದರು ಎಂದರೆ... ರೇಗಿದರು ಸತ್ಯಸಂಧ ಜನಪ್ರತಿನಿಧಿಗಳು. 'ಆಶ್ರಯ ಮನೆ ವಿತರಣೆಯನ್ನು ಶಾಸಕರಿಗೆ ನೀಡಿ' ಒಕ್ಕೊರಲಿನಿಂದ ಕೂಗಿದರು.

ರೇಣುಕಾಚಾರ್ಯ ಅನ್ನೋ ಶಾಸಕ ಓರ್ವ ನರ್ಸ್ ಜೊತೆ ಅನುಚಿತವಾಗಿ ವರ್ತಿಸಿದ. ಶಾಸನಸಭೆಯನ್ನೇ ವಿಸರ್ಜಿಸಬೇಕಲ್ಲ, ಕೂಡದು ಅವನ ಮೇಲೆ ಸೂಕ್ತ ಕ್ರಮ ಜರುಗಿಸಿ!

ಬಾಬುಬಾಯಿ ಕಟಾರ ಅನ್ನೋ ಭಾರತೀಯ ಜನತಾ ಪಕ್ಷದ ಸಂಸದ ಮಾನವ ಕಳ್ಳ ಸಾಗಾಣಿಕೆಯಲ್ಲಿ ಸಿಗಾಕಿಕೊಂಡ. ಸಂಸತ್ತನ್ನೇ ವಿಸರ್ಜಿಸಬೇಕೆ... ಕೂಡದು! ಆತನೊಬ್ಬನನ್ನೇ ಸಂಸತ್ತಿನಿಂದ ಹೊರಹಾಕಿ!

ಅಲ್ಲಿ, ಕೆಳಮಟ್ಟದಲ್ಲಿ ಯಾರಾದರೂ ತಪ್ಪು ಮಾಡಿದರೆ ವ್ಯವಸ್ಥೆಯನ್ನೇ ತೆಗೆಯಿರಿ ಅಂತಾರೆ, ಮೇಲುಮಟ್ಟದಲ್ಲಿ ಹೀಗೆ ಮಾಡಿದರೆ ಅವನೊಬ್ಬನ ಮೇಲೆ ಕ್ರಮ ಜರುಗಿಸಿ ಅಂತಾರೆ. ಈ ಪರಿಯ ನ್ಯಾಯವಾ ನಾನೆಲ್ಲೂ ಕಾಣೆ....


ಮೂರ್ಖರಿಂಗೆ ನೂರ್ಕಾಲ..

ಮಳೆ ಹೋಗಿ ಅಟ್ಟ ಸೇರಿತು.

ಉಗಾದಿಯ ಹಿಂದೆ ಮುಂದೆ ಮಳೆ ಆಗಲೇಬೇಕಿತ್ತು, ಆದರೆ ಈ ವರ್ಷ ಆಗಿಲ್ಲ.

ಏನು ಕಾರಣ ಇದಕ್ಕೆ?

ತೊಣ್ಣು ಇರುವ ಮನುಷ್ಯ ಯಾರಾದರೂ ಸತ್ತು ಆತನನ್ನು ಹೂತು ಹಾಕಿರಬಹುದೇ? ಹಾಗಾದರೆ ಆ ಹೆಣವನ್ನು ತೆಗೆದು ಸುಡಬೇಕು. ಆಗಲೇ ವರುಣದೇವ ಕೃಪೆ ತೋರುವುದು. ಎಲ್ಲಾ ಕಡೆ ವಿಚಾರಿಸಿದರು. ಅಂತಹ ಯಾವುದೇ ಘಟನೆ ನಡೆದಿರಲಿಲ್ಲ.



ಹಾಗಾದರೆ ಯಾಕೆ ಮಳೆ ಹುಯ್ಯಲಿಲ್ಲ?

ಅಳೆದರು ಸುರಿದರು, ಹೊಳೆಯಿತು! ಈ ಸಲದ ಉಗಾದಿಯ ಹಬ್ಬದ ಆಚರಣೆಯಲ್ಲೇ ದೋಷ ಇದೆ!

ಉಗಾದಿಯ ದಿನ ಸೂರ್ಯಗ್ರಹಣ. ಅಂದೇ ಹಬ್ಬ ಆಚರಿಸಲಾಗಿತ್ತು, ದೋಷ ಅಲ್ಲಿತ್ತು!

ಹಬ್ಬ ಆಗಿಹೋಗಿದೆ. ಒಬ್ಬಟ್ಟು ಖಾಲಿಯಾಗಿದೆ. ವರ್ಷದ ತೊಡಕೂ ಮುಗಿದುಹೋಗಿದೆ. ತಿಂದದ್ದನ್ನು ಹಿಂದಕ್ಕೆ ಪಡೆಯುವ ಮಾರ್ಗ ಇಲ್ಲ, ಹಾಗಂತ ಸುಮ್ಮನೆ ಇರುವಂತೆಯೂ ಇಲ್ಲ, ಮಳೆ ಬೀಳಬೇಕಲ್ಲ! ಇದಕ್ಕೇನು ಪರಿಹಾರ? ಹೊಳೆಯಿತು. ಊರಿನಲ್ಲೆಲ್ಲ ಸಾರಿಸಿದರು - 'ಮರು ಉಗಾದಿ ಆಚರಣೆ ಮಾಡಬೇಕು.'

ಗ್ರಹಣ ಅನ್ನೋದು ಕೇವಲ ಸೂರ್ಯನಿಗಷ್ಟೇ ಅಲ್ಲ, ಜನರಿಗೂ ಬಡಿದಿತ್ತು!

ಉಳ್ಳವರ ಮನೆಗಳಲ್ಲಿ ಸಡಗರ, ಸಂಭ್ರಮ. ಇಲ್ಲದವರ ಮನೆಯಲ್ಲಿ ಮತ್ತೆ ಹಬ್ಬಕ್ಕೆ ಎಲ್ಲಿಂದ ತರುವುದು ಎಂಬ ಚಿಂತೆ. ಉಳ್ಳವರ ಮಾತನ್ನು ಮೀರುವಂತೆಯೂ ಇಲ್ಲ. ಚಂದ್ರಮಾನ ಉಗಾದಿಯ ಬಳಿಕ ಸೌರಮಾನ ಉಗಾದಿಯೂ ನಡೆಯಿತು!

ಬದ್ದಿತೆ ಮಳೆ?

ಇಲ್ಲ. ಇನ್ನು ಯಾವ ಉಗಾದಿ ಉಳಿದಿದೆಯೋ ಗೊತ್ತಿಲ್ಲ!

ಮೂರ್ಖರಿಂಗೆ ನೂರ್ಕಾಲ ಬುದ್ಧಿಯನ್ನು ಹೇಳಿದರೂ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಅಂತ ಸರ್ವಜ್ಞ ಇಂತಹವನ್ನು ನೋಡಿಯೇ ಹೇಳಿರಬೇಕು.

ಮಂಡ್ಯ ರಾಜೀನಾಮೆ!

ಮಂಡಯ ಅಂದರೆ ಇಂಡಿಯಾ.

ಇಲ್ಲಿ ಇವತ್ತು ನಡೆದದ್ದು ಮುಂದೆ ಇಂಡಿಯಾದಲ್ಲಿ ನಡೆಯುತ್ತೆ.

ನಂಬಿಕೆ ಇಲ್ಲವೆ? ಇದನ್ನು ನೋಡಿ.

ಕಾವೇರಿ ನದಿ ನೀರಿನ ವಿವಾದದ ತೀರ್ಪು ಮಂಡ್ಯದ ಸಂಸದರಿಗೆ ಕೋಪ ಬರಿಸಿತು. ಆ ಸಿಟ್ಟಿನ ಭರದಲ್ಲೇ ರಾಜೀನಾಮೆ ಕೆರೆದು ಬಿಸಾಕಿದರು. ರಾಜೀನಾಮೆ ಪತ್ರ ಕಳುಹಿಸಿದ್ದು ಪಕ್ಷದ ಅಧ್ಯಕ್ಷರಿಗೆ!

ಪ್ರವಾಸೋದ್ಯಮ ಮಂತ್ರಿ ಶ್ರೀರಾಮುಲು ಏನು ಕಡಿಮೆ. ಮಂತ್ರಿ ಪದವಿಗೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ಬಿಸಾಕಿದರು. ಅದನ್ನು ನೀಡಿದ್ದು ಮಾತ್ರ ಥೇಟ್ ಅಂಬರೀಸಣ್ಣನ ತರಹಾನೇ ಪಕ್ಷದ ಅಧ್ಯಕ್ಷರಿಗೆ, ಉಪ ಮುಖ್ಯಮಂತ್ರಿಗಳಿಗೆ.

ಈಗ ನೋಡಿ. ಇದೇ ವರಸೇನ ರೇಣುಕಾಚಾರ್ಯ ತೋರಿದ್ದಾರೆ. ಯಾವುದೋ ನರ್ಸ್ ತನಗೆ ಬಲವಂತ ಮಾಡ್ತಿದ್ದ ಅಂತ ದೂರಿದಳಂತೆ. ಈ ಮರ್ಯಾದಾ ಪುರುಷೋತ್ತಮ ಈ ದೂರು ಕೇಳಿಯೂ ಸುಮ್ಮನಿರಲಾದೀತೆ. ಆಪಾದನೆಯಿಂದ ಮುಕ್ತವಾಗುವವರೆಗೂ ರಾಜೀನಾಮೆ ಬಿಸಾಕ್ತೀನಿ ಅಂದರು. ಹಾಗೇ ಮಾಡಿದರು. ಆದರೆ ಅದನ್ನು ಕಳುಹಿಸಿದ್ದು ಮಾತ್ರ ಪಕ್ಷದ ಅಧ್ಯಕ್ಷರಿಗೆ, ಉಪಮುಖ್ಯಮಂತ್ರಿಗಳಿಗೆ!

ಈಗಲಾದರೂ ನಂಬಿಕೆ ಬಂದಿತೆ?

ಅಲ್ಲ, ಈ ರೀತಿಯ ಅಂಗೀಕಾರವಾಗದ ರಾ... ನಾಮೆ 'ಮಂಡ್ಯ ರಾಜೀನಾಮೆ' ಅಂತ ಪ್ರಸಿ... ಪಡೆಯಬಹುದೇ ಅಂತ. ಹಾಗೇನಾದರೂ ಆದ... ಅಂಬರೀಶಣ್ಣಾರ ಹೆಸರು ಶಾಶ್ವತವಾಗಿ ಉಳಿ... ಹಾಗೆಯೂ ಆಯಿತು, ಮಂಡ್ಯದ ಹೆಸರು ಮಿಂಚ... ಹಾಗೂ ಆಯಿತು ಅಲ್ಲವಾ!

ಹೊಸದಾಗಿ ಸಂಸದ, ಶಾಸಕ ಆದವರಿಗೆ ಸ... ನಡವಳಿಕೆಗಳ ಕುರಿತು ತಿಳಿಸಿಕೊಡಲಾಗುತ್ತಂತೆ. ... ರಾಜೀನಾಮೆಯನ್ನು ಹೇಗೆ ನೀಡಬೇಕು ಅನ್ನುವುದ... ಮನದಟ್ಟುಮಾಡಿದರೆ ಒಳ್ಳೆಯದು ಎಂಬುದು ಕೆಲ... ಅಭಿಪ್ರಾಯ. ಎಲ್ಲರೂ ಹಾಗೇ ನಡೆಯ... ಪ್ರಾರಂಭಿಸಿದರೆ ನಮ್ಮ 'ಮಂಡ್ಯ ರಾಜೀನಾಮೆ' ... ಏನಾಗಬೇಕು ಅಂತ....

ಪ್ರಕಾಶ್ ನಿವೃತ್ತಿ

ಎಂ.ಪಿ. ಪ್ರಕಾಶ್ ಸಕ್ರಿಯ ರಾಜಕೀಯದಿಂದ ದೂ... ಇರುತ್ತಾರಂತೆ.

ಉತ್ತಮ ಆಲೋಚನೆ. ಅವರ ಆರೋಗ್ಯ ... ಸುಧಾರಿಸೀತು.

ಈ ನಿರ್ಧಾರದಿಂದ ಅವರಿಗೇನೋ ಒಳಿತಾ... ಬಹುದು. ಆದರೆ ಜಾತ್ಯತೀತ ಜನತಾದಳ ಅನ... ಒಂದು ಪಕ್ಷ ತುರ್ತು ಚಿಕಿತ್ಸಾ ಘಟಕದಲ್ಲಿದೆಯ... ಅದರ ಗತಿ ಏನಾಗಬಹುದು ಅನ್ನೋ ಚಿ... ಹಲವರಿಗಂತೆ. ಅದರಲ್ಲಿನ ಶಾಸಕರೂ ಎಳ... ಮುಂಡೇವು. ಅದೂ ಇದೂ ಅಂತ ತಪ್ಪು ಮಾಡು... ದನ್ನೇ ನಿಯಮ ಅಂತ ತಿಳಿದುಕೊಂಡಿರುವ ಹಾಗಿ... ಪ್ರಕಾಶು ಹೇಗೋ ಎದುರಾಳಿಗಳ ಬಾಯಿಂದ ಅವ... ಬಿಡಿಸಿಕೊಳ್ಳುತ್ತಿದ್ದರು. ಇನ್ನು ಮುಂದೆ ಯಾರು ಅವ... ಕಾಪಾಡೋರು ಅಂತಿದ್ದಾರಂತೆ. ದೇವೇಗೌಡರ ಎದು... ಪ್ರಕಾಶ್ ನಿವೃತ್ತಿ ಸುದ್ದಿ ಎತ್ತಿದರೆ ಸಿಡಿಮಿಡಿಗೊಳ್ಳುತ್ತಾರ... ಪಾಪ ಆಗಬೇಕಾದ್ದೆ. ಇನ್ನೊಬ್ಬ ಪ್ರಭಾವಿ ಲಿಂಗಾಯ... ನಾಯಕನ್ನ ಹುಡುಕಬೇಕಲ್ಲ ಅನ್ನೋ ಕಷ್ಟ ಅವ...

ತಿರುಪತಿಗೂ ಬಂದು ಬೋಳಿಸಿಗಂಡೋದರಂತೆ."

"ತಲೆ ಮುಡಿ ಕೊಟ್ರೆ?"

"ಇಲ್ಲ ಕಣಕ್ಕ, ತಿರುಪತಿ ಹುಂಡಿಗೆ ಲಕ್ಷಾಂತ್ರಪಾಯಿ ಹಾಕಿ ಹೋದರಂತೆ."

"ಅಲ್ಲಾ ಕಣೊ ವಾಟಿಸ್ಸೆ, ಆ ಅಮಿತಾಬಚ್ಚನ್ ಯಲ್ಲಾನು ಲಾಸು ಮಾಡಿಕಂಡು ಬೀದಿಗೆ ಬೀಳಂಗಾಗಿದ್ದ. ಅದ್ಯಲ್ಲಾನು ಮರತು ತಿರುಪ್ತಿ ಹುಂಡಿಗೆ ಲಕ್ಷಾಂತ್ರಪಾಯಿ ಹಾಕ್ತನೆ ಅಂದ್ರೆ ಇನ್ಯಂಥಾ ಮೂರ್ಖಿದ್ದನವ್ರುನು" ಎಂದ ಉಗ್ರಿ.

"ಮೂರ್ಖತನ ಬಡವರ ಸೊತ್ತು ಅಲ್ಲ, ಶ್ರೀಮಂತ್ರ ಸೊತ್ತು ಅಲ್ಲ, ಅದು ಸಿನುಮಾದವರ ಸೊತ್ತಾಗ್ಯದೆ" ಎಂದ ವಾಟಿಸ್ಸೆ.

"ಅದ್ಯಾಕ್ಲ ಅಂಗಂತೀ?"

"ಊ ಕಣಕ್ಕ, ಐಸುವರ್ಯ ಒಸಿ ದಿನ ಆ ಸಲುಮಾನ್ ಖಾನ್ ಅನ್ನೊ ಸಾಬಿ ಜೊತೆ ತಿರುಗಿದ್ಲು. ಅವನಿಗೂ ಕೈಕೊಟ್ಳು. ಅಮ್ಯಾಲೆ ವಿವೇಕ್ ಓಬೀರಾಯ ಅನ್ನೊನ ಜ್ವತೆ ಸುತ್ತಾಡಿದ್ಲು, ಅವುನಿಗೂ ಸರಿಯಾಗೇ ಕೈಕೊಟ್ಳು."

"ಅಂಗರೆ ಗಾಡಿ ಓಡಿತ್ತು ಅನ್ನು?" ಎಂದು ಸೀರ ಕಕ್ಕ.

"ಅಂಗಲ್ಲ ಚಿಗಪ್ಪ, ಸಿನಿಮಾದಲ್ಲಿ ಅಂತ ಸುದ್ದಿ ಇದ್ರೆ ಅವುರಿಗ್ಯಲ್ಲ ಮಜ. ಅದ್ಕೆ ಅಂತ ಸುದ್ದಿ ಹಬ್ಬಿಸಿಗಂಡು ಕಾಲ ಹಾಕ್ತವೆ. ಈಗ ಅಮಿತಾಬಚ್ಚನ್ ತನ್ನ ಮಗನಿಗೆ ಅವುಳ ಹಿಡುದು ಕಟ್ಯವುನೆ. ಅಲ್ಲೇಟುದಿನಿದ್ದಳೊ ಏನೊ?"

"ಇರ್ತಳೆ ಬುಡೊ, ದಕ್ಷಿಣ ಕನ್ನಡದ ಲ್ಯಕ್ಕಚಾರದ ಜನ ಯಾರ ಕೈಲಾರ ಬುದ್ಧಿ ಹೇಳಿಸಿಗಳಂಗಿದ್ದವೇ" ಎಂದ ಉಗ್ರಿ.

"ಇರ್ಲಿ ಬುಡು. ಇಲ್ಲ ಅಂದ್ರೆ ತಿರಗ ನಮ್ಮ ತಲೆ ಕೆಡ್ತದೆ."

...ದಕ್ಕೆ ಮುಗುಮ್ಮಾಗಿ ಭಾರತೀಯ ಜನತಾಪಕ್ಷದಲ್ಲಿ ...ಜಪೇಯಿ ಆದಹಾಗೆ ಅವರೂ ಆಗ್ತಾರೆ ಅಂತ ಹೇಳಿ, ಅವರ ಮನಸ್ಸಿನಲ್ಲಿ ದಿಗಿಲು ಹುಟ್ಟಿಸಲು ಪ್ರಯತ್ನಿಸುತ್ತಿದ್ದಾರಂತೆ.

ಇಷ್ಟಕ್ಕೆ ಅವರ ಪರದಾಟ ನಿಂತಿಲ್ಲ. ಅಧಿಕಾರಕ್ಕೆ ...ರುವುದಕ್ಕೆ ಮುಂಚೆ ಅವರ ನಿಜವಾದ ಮಗ ...ಮಾರಸ್ವಾಮಿ ನಿಗಮ ಮಂಡಳಿಗೆ ನೇಮಕಾತಿ ...ಡದೆ ಇರುವುದರಿಂದ ಕಾರ್ಯಕರ್ತರು ಅಸಮಾಧಾನ ...ಂಡಿದ್ದಾರೆ ಅನ್ನುವ ನೆಪ ಹೇಳಿ ಬಂಡಾಯದ ...ವುಟ ಹಾರಿಸಿದ್ದರಲ್ಲ, ಆಮೇಲೆ ಏನಾಯಿತು ನೋಡಿ. ...ಗಮ ಮಂಡಳಿಗೆ ನೇಮಕ ಮಾಡಲಿಲ್ಲ, ಮಾತ್ರವಲ್ಲ, ...ಕ್ಷಾತ್ ದೇವೇಗೌಡರೇ ನಿಗಮ ಮಂಡಳಿಯ ಅಧ್ಯಕ್ಷ ...ನಕ್ಕೆ ಪ್ರಯತ್ನಿಸುವವರನ್ನು ಪಕ್ಷದಿಂದ ಹೊರ ...ಕುತ್ತೇವೆ ಎಂದು ಗುಡುಗಿದರು! ನಿಗಮ ಮಂಡಳಿ ...ಳಿಗೆ ಕೈಹಾಕಿದರೆ ಜೇನುಗೂಡಿಗೆ ಕೈಹಾಕಿದಂತೆ ...ನ್ನೋದು ಅನುಭವ ಕಲಿಸಿದ ಪಾಠ. ಎಂ.ಪಿ. ಪ್ರಕಾಶ್ ...ವೃತ್ತಿ ಹೊಂದುತ್ತೀನಿ ಅಂತ ಅಂದ ತಕ್ಷಣ ನಿಗಮ ...ಂಡಳಿಗೆ ನೇಮಕ ಮಾಡ್ತೀವಿ ಅಂತಿದ್ದಾರೆ! ಸಕಲೆಂಟು ...ತಿಯವರ ಬಾಯಿಗೂ ಒಂದಿಷ್ಟು ಹಾಳುಮೂಳು ...ಂತ ಹಂಚಬೇಕಲ್ಲ!

ಪ್ರಕಾಶ್ ನಿವೃತ್ತಿ ಈ ರೀತಿಯ ಕಾಟ ...ಡಬಾರದಿತ್ತು!

ಪಾರದರ್ಶಕ ಆಡಳಿತ!

ಮಳೆ ಬಂದರೆ ಒಂದು ರೀತಿಯ ಕಷ್ಟ. ಬಾರದಿದ್ದರೆ ...ನ್ನೊಂದು ರೀತಿಯ ತೊಂದರೆ. ಮುಖ್ಯಮಂತ್ರಿ ಆದ ...ಷ್ಟಕ್ಕೆ ಸ್ಥಳ ಪರೀಕ್ಷೆಗೆ ಹೋಗಬೇಕು. ಅಲ್ಲೋ ಜನರಿಂದ ...ರೆಂಟು ದೂರು. 'ಚರಂಡಿಯ ವ್ಯವಸ್ಥೆ ಸರಿ ಇಲ್ಲ ...ಳಪೆ ಕಾಮಗಾರೀನೆ ಕಾರಣ' ಇಂತಹವು. ಇದೇನು ...ವರಿಗೆ ತಿಳಿಯದ್ದೇ? ಆದರೆ ಜನರ ಮುಂದೆ ಹೀಗೆ ...ಡುವಂತಿಲ್ಲ, ಕಳಪೆ ಕಾಮಗಾರಿ ಮಾಡಿದ ಕಂಟ್ರಾಕ್ಟರು ...ಮೇಲೆ ಕ್ರಮ ಜರುಗಿಸುವಂತೆ ನಿಂತಲ್ಲಿಯೇ ಆದೇಶ ...ದ್ದಾರೆ. ಅಲ್ಲಿ ಕಳಪೆ ಕಾಮಗಾರಿ ಮಾಡುವುದು ...ುಮ ಅಂತ ಅವರಿಗೆ ಗೊತ್ತಿರಲ್ವೆ. ಅದನ್ನೇ ಬೇಡ ...ದರೆ ಹೇಗೆ? ಪಾಪ ಕಂಟ್ರಾಕ್ಟುದಾರ ಅನ್ನಿಸಿ ...ಂಡೋನು ತಿನ್ನೋರಿಗೆಲ್ಲ ತಿನ್ನಸಬಾರದಾ, ತಾನೂ ...ದ್ದಾರ ಆಗಬಾರದಾ. ಇದೆಲ್ಲ ಮಾನ್ಯ ಮುಖ್ಯಮಂತ್ರಿ ...ಗೆ ತಿಳಿದಿರೋಲ್ಲ ಅಂತ ಅಲ್ಲ, ಶಿಕ್ಷೆ ಆಗಲಿ ಅಂದರೆ ...ಲಿ 'ಅಂತಾನೂ ಅಲ್ಲ, ಜನರ ಮುಂದೆ ಏನೋ ...ದು ಹೇಳಬೇಕು ಹೇಳುತ್ತಾರೆ. ಜನರೂ ಅವರ ...ಸ್ಪಂದನೆಗೆ ಮಗ್ನ ಮಲಗ್ತಾರೆ. ಅನಂತರ... ಯಥಾ ...ತಿ ಕಳಪೆ ಕಾಮಗಾರಿ ನಡೀತಾನೆ ಇರ್ತವೆ... ಮತ್ತೆ ...ಳೆ ಬಿದ್ದರೆ... ಮುಖ್ಯಮಂತ್ರಿ ಭೇಟಿ ಶಿಕ್ಷೆ. ಇದೇ ...ತು... ಏನು ಪಾರದರ್ಶಕ ಆಡಳಿತ, ಏನು ಕಥೆ!

ಲಾಭ-ನಷ್ಟ




ಮರೆಯುವ ಮುನ್ನ



ಪಿ. ಲಂಕೇಶ್ -ನವೆಂಬರ್ 20, 1988

ದಲಿತ ಸಂಘರ್ಷ ಸಮಿತಿಯ ಕೆಲವು ಹುಡುಗರು ಕಾರಣವೇ ಇಲ್ಲದೆ ಸಣ್ಣ ಮಾತಾಡುವವರು. ಇವರು ನಾನು ಬಿ.ಎಂ. ಹನುಮಂತಪ್ಪನ ತರಹದ ಹುಡುಗರೊಂದಿಗೆ ಮಾತಾಡುವುದು, ಅನ್ಯೋನ್ಯವಾಗಿರುವುದೇ ಸಹಿಸುವುದಿಲ್ಲ. ಹನುಮಂತಪ್ಪ ಎಂಥ ಗಂಭೀರ ಹುಡುಗನೆಂದರೆ ಈ ವಿಷಯವನ್ನು ಆತ ನನ್ನೊಂದಿಗೆ ಪ್ರಸ್ತಿಸುವುದೇ ಇಲ್ಲ, ನನಗೆ ಬೇರೆಯವರು ಹೇಳಿದ್ದರು. ವಿವರಗಳಿಗಿಂತ ಹೆಚ್ಚಾಗಿ ಜನರಲ್ಲಿರುವ ಅಸೂಯೆ, ನೀಚತನ ನನ್ನಲ್ಲಿ ವಿಷಾದ ಮೂಡಿಸಿತ್ತು, ಹನುಮಂತಪ್ಪ ಸಿಕ್ಕಾಗ ಹೇಳಿದೆ, "ದಲಿತ ಸಂಘರ್ಷ ಸಮಿತಿ ಒಗ್ಗಟ್ಟಾಗಿ, ಶಕ್ತಿಯುತವಾಗಿ ಇರಬೇಕೆಂಬುದೇ ನಮ್ಮೆಲ್ಲರ ನಿಲುವು. ರೈತಸಂಘ ಕೂಡ. ಇದನ್ನು ರೈತಸಂಘದ ಅನೇಕ ಗೆಳೆಯರಿಗೆ ಹೇಳಿದ್ದೇನೆ. ನಿನಗೂ ಹೇಳುತ್ತಿದ್ದೇನೆ. ನಿನ್ನ ಗೆಳೆಯರಿಂದ ನನಗೆ ವೈಯಕ್ತಿಕವಾಗಿ ಕಿರಿಕಿರಿಯಾದರೂ ಪರವಾಗಿಲ್ಲ, ಅವರು ನಮ್ಮೆಲ್ಲರ ಪ್ರಗತಿರಂಗದಿಂದ ದೂರ ಸರಿದರೂ ಪರವಾಗಿಲ್ಲ, ಸಾರ್ವಜನಿಕ ಜೀವನದಲ್ಲಿ ಹೊಸತು ಏನಾದರೂ ಮಾಡಬೇಕೆನ್ನುವವರಲ್ಲಿ ಸಣ್ಣತನ ಬೆಳೆಯಬಾರದು. ನಾವೆಲ್ಲ ನೆಮ್ಮದಿಯ, ಶ್ರೀಮಂತ, ನೀತಿವಂತ ಕರ್ನಾಟಕ ಕಟ್ಟಬೇಕಾದರೆ ನಾವೆಲ್ಲರೂ ವಿಷದಿಂದ, ಸಂಕುಚಿತ ಮನಸ್ಸಿನಿಂದ ಮುಕ್ತರಾಗಬೇಕು..."

ಇದನ್ನು ಬರೆಯುವ ವೇಳೆಯಲ್ಲಿ ದಲಿತ ಸಂಘರ್ಷ ಸಮಿತಿ ಇಬ್ಭಾಗವಾಗಿರುವುದಾಗಿ ಪತ್ರಿಕೆಗಳು ಖುಷಿಯಿಂದ ವರದಿ ಮಾಡಿವೆ. ಹಲವು ದಲಿತ ಗುಂಪುಗಳಿಗೆ ದಲಿತತ್ವ ಲಾಭದಾಯಕವಾಗಿ ಕಾಣತೊಡಗಿದೆ. ಇದೆಲ್ಲ ಕಂಡು ನನಗೆ ಖುಷಿಯಾಗುತ್ತಿಲ್ಲ, ನೋವಾಗುತ್ತಿದೆ. ಯಾಕೆಂದರೆ ಯಾವುದೇ ಪ್ರಾಮಾಣಿಕ, ಛಲವಂತ ಗುಂಪು ಇಬ್ಭಾಗವಾಗುವುದಿಲ್ಲ. ಈ ಬಗ್ಗೆ ಹನುಮಂತಪ್ಪನ ದಲಿತ ಸಂಘರ್ಷ ಸಮಿತಿ ತಲೆ ಕೆಡಿಸಿಕೊಳ್ಳಬೇಕಾದ್ದೇ ಇಲ್ಲ. ತೆವಲು ಹೆಚ್ಚಾದವರು ಬಿಟ್ಟು ಹೋಗುತ್ತಾರೆ; ತಮ್ಮ ಹೋರಾಟದ ಉದ್ದೇಶದ ಬಗ್ಗೆ ಸ್ಪಷ್ಟವಿರುವವರು ಮುಂದುವರಿಯುತ್ತಾರೆ. ನಾಲ್ಕೇ ನಾಲ್ಕು ಜನ ದಿಟ್ಟ ಹುಡುಗರು ಇಡೀ ಕರ್ನಾಟಕವನ್ನು ಪರಿವರ್ತಿಸಬಲ್ಲರು ಎಂಬುದು ನನ್ನ ದೃಢ ನಂಬಿಕೆ.



ಸಂವೇದನೆಗೆ ಕತ್ತರಿ

ಅಮೆರಿಕನ್ ಪ್ರಾಧ್ಯಾಪಕನೊಬ್ಬ ಈಚೆಗೆ ಕೋಪದಿಂದ ಮಾತಾಡಿದ್ದಾನೆ. ಆತನ ಕೋಪ ಇಲ್ಲಿಗೂ ಅನ್ವಯಿಸುವುದರಿಂದ ಮರೆಯುವ ಮುನ್ನ ಇದನ್ನು ಬರೆಯಬೇಕಾಗಿದೆ. ಆತನ ಕೋಪ ಜನರ ಸ್ಪಂದನ ತನ್ನ ವಿಸ್ತಾರ ಕಳೆದುಕೊಳ್ಳುತ್ತಿರುವ ಬಗ್ಗೆ; ವಿದ್ಯಾರ್ಥಿಗಳು ಅಭಿರುಚಿಯಲ್ಲಿ ಸಂಕುಚಿತರಾಗುತ್ತಿರುವ ಬಗ್ಗೆ. ಅಮೆರಿಕಾದ ಎರಡು ಬಂಡಾಯಗಳು ನಿಮಗೆ ಗೊತ್ತಿರಬಹುದು. ಒಂದು ಮಹಿಳಾ ಹಕ್ಕುಗಳಿಗಾಗಿ, ಇನ್ನೊಂದು ವರ್ಣಭೇದದ ವಿರುದ್ಧ. ಇವೆರಡೂ ಮುಖ್ಯವಾದ ಚಳವಳಿಗಳು ಎನ್ನುವ ಬಗ್ಗೆ ಅನುಮಾನವಿಲ್ಲ. ಇವತ್ತಿಗೂ ಜಗತ್ತಿನ ಹೆಣ್ಣು ದಮನಕ್ಕೊಳಗಾಗಿಯೇ ಇದ್ದಾಳೆ; ಇವತ್ತಿಗೂ ಮನುಷ್ಯ ತನ್ನ ಕಪ್ಪು, ಕಂದು ಬಣ್ಣದಿಂದ ವಿವಿಧ ರೀತಿಯ ತಾರತಮ್ಯಕ್ಕೊಳಗಾಗಿದ್ದಾನೆ. ಆದರೆ ಈ ಎರಡೂ ಬಗೆಯ ಬಂಡಾಯಗಳ ಅತಿರೇಕ ಕೂಡ ಅಪಾಯದ್ದು. 'ಒಥೆಲೋ' ನಾಟಕ ಕಪ್ಪು ಜನರ ವಿರುದ್ಧವಾದ ನಾಟಕ ಎನ್ನುವುದಾದರೆ, ಹ್ಯಾಮ್ಲೆಟ್ ನಾಟಕ ಮಹಿಳೆಯರ ವಿರುದ್ಧ ಅನ್ನುವುದಾದರೆ-ನೀವು ಸಾಹಿತ್ಯಕ್ಕೆ ಸ್ಪಂದಿಸುತ್ತಿಲ್ಲ; ಒಥೆಲೋ ಮತ್ತು ಹ್ಯಾಮ್ಲೆಟ್‌ಗಳನ್ನು ತಪ್ಪು ಕಾರಣಕ್ಕೆ ಟೀಕಿಸುತ್ತಿದ್ದೀರಿ.

ಸಾಹಿತ್ಯ ಕೃತಿಯೊಂದು ಸಫಲಗೊಂಡಾಗ ಅದರ ಕತೆ ಮನುಕುಲದ ಸಣ್ಣತನವನ್ನು ಹೇಳಿದರೂ ಅದರ ಇಡೀ ಅಸ್ತಿತ್ವ ಮನುಕುಲದ ಸಂವೇದನಾ ಸಾಹಸವನ್ನು ತೋರುತ್ತದೆ. ಸಣ್ಣತನ ಸಂವೇದನೆಯಲ್ಲಿ ಕರಗಿಹೋಗುತ್ತದೆ. ಆದ್ದರಿಂದಲೇ ಪುರಂದರದಾಸ, ಪಂಪನ ವಿಕ್ರಮಾರ್ಜುನ, ಜನ್ನನ ಅಪ್ಪಾವಂಕರೆಲ್ಲ ಮನುಷ್ಯತ್ವವನ್ನು ವೈಭವೀಕರಿಸುತ್ತಾರೆ; ಮನುಷ್ಯರಿಗೆಲ್ಲ ಸಮಾನವಾದ ವೇದನೆಯನ್ನು ಎಲ್ಲರೂ ಹಂಚಿಕೊಳ್ಳುವಂತೆ ಮಾಡುತ್ತಾರೆ.

ಆದ್ದರಿಂದಲೇ ಮಕ್ಕಳು ಅಸಫಲ ಬಂಡಾಯ ಸಾಹಿತ್ಯದಿಂದ ಪಡೆದದ್ದಕ್ಕಿಂತ ಹೆಚ್ಚು ಅನುಭವ, ಸ್ಪಂದನವನ್ನು ಸಫಲ ಕಲಾಕೃತಿಯಿಂದ ಪಡೆಯುತ್ತಾರೆ; ಇಬ್ಸನ್‌ನ ನೋರಾಳಿಂದ ಪಡೆದ ದಿಟ್ಟತನಕ್ಕಿಂತ ಹೆಚ್ಚನ್ನು ಚೆಕಾವ್‌ನ 'ಚೆರ್ರಿ ತೋಟದ' ಯಜಮಾನಿ ಅಂದ್ರೀವನ್ನಾಳಿಂದ ಪಡೆಯುತ್ತಾರೆ; ಕುಕವಿಯ ದೇವರ ವಿರುದ್ಧದ ಚೀತ್ಕಾರಕ್ಕಿಂತ ಬಸವಣ್ಣನ 'ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡುವೆನಯ್ಯ' ಎಂಬ ಉದ್ಗರದಿಂದ ಹೆಚ್ಚು ಅನುಭವ ಪಡೆಯುತ್ತಾರೆ.

ಬಂಡಾಯ ಒಂದು ರೀತಿಯ ಏಕಮುಖವಾದದ್ದು; ಶಿಕ್ಷಣ ಬಹುಮುಖವಾಗಿದ್ದಾಗ ಮಾತ್ರ ಈ ಬಂಡಾಯಕ್ಕೆ ಶಕ್ತಿ ಬರುತ್ತದೆ.



ಈ ಆಟದ ಛಂದಸ್ಸು



ನಾವು ಹೋದವಾರ ಕ್ರಿಕೆಟ್ ಆಟದ ಸರಳ ನಿಯಮಗಳ ಬಗ್ಗೆ ಬರೆದದ್ದು ನೀವು ಓದಿರಬಹುದು. ಹೀಗೆ ಬರೆದ ಮೇಲೆ, ಬರೆಯುವುದಕ್ಕೆ ಮುಂಚೆ ಅನೇಕ ಕಾಗದಗಳು ಬಂದವು. ಯಾವುದೇ ಸಂಕೋಚವಿಲ್ಲದೆ 'ಕ್ರಿಕೆಟ್ ವಿವರಿಸಿ' ಎಂದು ಓದುಗರು ಕೇಳಿಕೊಂಡರು.

ಎಲ್ಲ ಮುಖ್ಯ ಆಟಗಳಂತೆಯೇ ಕ್ರಿಕೆಟ್ ವಿಚಿತ್ರ ಛಂದಸ್ಸು ಪಡೆದ ಆಟ. ಒಂದೊಂದು ತಂಡದಲ್ಲಿ ಹನ್ನೊಂದು ಜನ, ಹನ್ನೊಂದು ಜನರಲ್ಲಿ ಪ್ರತಿಯೊಬ್ಬರೂ ವಿಶಿಷ್ಟ ವ್ಯಕ್ತಿತ್ವ ಪಡೆದ, ಹಾಗೆಯೇ ತಂಡದ ಅವಿಭಾಜ್ಯ ಅಂಗವಾದ ಮನುಷ್ಯ. ಈತನಲ್ಲಿಯ ಶಕ್ತಿ ಆಕಸ್ಮಿಕಗಳಿಂದ ಭಗ್ನಗೊಳ್ಳಬಾರದೆಂದು ಈತನಿಗೆ ಪ್ರತಿಯೊಂದು ಮ್ಯಾಚ್‌ನಲ್ಲಿ ಬ್ಯಾಟ್ ಮಾಡುವ ಎರಡು ಅವಕಾಶಗಳಿರುತ್ತವೆ; ಅದಕ್ಕೇ ಒಂದೊಂದು ಟೀಮೂ ಎರಡು ಸಲ ಆಡುತ್ತದೆ. ಈ ಸಲ ಯಾವುದೋ ಕಾರಣಕ್ಕೆ ಔಟ್ ಆದರೂ ಎರಡನೆ ಸಲ ಹಾಗಾಗದಂತೆ ನೋಡಿಕೊಳ್ಳುವ ಅವಕಾಶವಿರುತ್ತದೆ. ಈ ಎರಡು ಸಲದ ಆಟಗಳನ್ನು ಎರಡು ಇನ್ನಿಂಗ್ಸ್ ಅನ್ನುತ್ತಾರೆ. ಐದು ದಿನದ ಮ್ಯಾಚ್‌ನ ವೈಶಿಷ್ಟವೇ ಅದು. ಹುಡುಗನೊಬ್ಬ ತನ್ನೆಲ್ಲ ಸೌಭಾಗ್ಯವನ್ನು ಯೋಚಿಸಿ, ಮಾಡಿ ವ್ಯಕ್ತಪಡಿಸುವ 'ಛಾನ್ಸ್' ಇಲ್ಲಿರುತ್ತದೆ. ಈ ಐದು ದಿನದ ಆಟವನ್ನು ಒಂದು ದಿನದ ಕ್ರಿಕೆಟ್‌ಗೆ ಹೋಲಿಸಿದರೆ, ಒಂದು ದಿನದ್ದು ರಭಸದ, ನಾಟಕೀಯ, ಒರಟು ಹೊಡೆತ. ಇಲ್ಲಿ ಒಂದೊಂದು ತಂಡದ್ದು ಒಂದೇ ಇನ್ನಿಂಗ್ಸ್ (ಒಂದೇ ಆದರೂ 'ಇನ್ನಿಂಗ್' ಅನ್ನಬಾರದು); ಒಂದೊಂದು ತಂಡಕ್ಕೆ (ದಿನದ ಬೆಳಕನ್ನವಲಂಬಿಸಿ) ನವಲತ್ತು, ನಲವತ್ತೈದು ಅಥವಾ ಐವತ್ತು ಓವರ್‌ಗಳು. ಆದಷ್ಟೂ ಬೇಗ ಹೆಚ್ಚು ರನ್ ಮಾಡಬೇಕು; ಸೋಲು ಅಥವಾ ಗೆಲವು ಕಟ್ಟಿಟ್ಟದ್ದು. ರನ್ ಮಾಡುವ ಶೈಲಿ, ಆಟದ ಛಂದಸ್ಸು, ವರ್ಣನೆ ಮುಖ್ಯವಲ್ಲ. ಗೆಲುವು ಮುಖ್ಯ.

ಕ್ರಿಕೆಟ್‌ನಲ್ಲಿ ಬ್ಯಾಟ್ಸ್‌ಮನ್ ನಾಯಕ; ಬೌಲರ್ ಖಳನಾಯಕ. ಬ್ಯಾಟ್ಸ್‌ಮನ್ ಹೆಚ್ಚು ರನ್ ಮಾಡಲು ಹೋರಾಡುವವ; ಆತ ಮಾಡದಂತೆ ಅಡ್ಡಿಪಡಿಸಿ ಔಟಾಗಿರುವ ಖಳನಾಯಕ ಬೌಲರ್. ಕರ್ನಾಟಕ ಬಹಳ ಜನ ಖಳನಾಯಕರನ್ನು ರೂಪಿಸಿತು. ಆದರೆ ನಿಮಗೆ ಹೆಚ್ಚು ರನ್ ಬೇಕೋ, ನಿಮ್ಮ ಎದುರಾಳಿ ಕಡಿಮೆ ರನ್ ಮಾಡುವಂತಾಗಬೇಕೋ ಎಂಬುದರ ಮೇಲೆ ಈ 'ಖಳತ್ವ'ನಿಂತಿರುತ್ತದೆ. ನಮಗೆ ಆಗದ ಬ್ಯಾಟ್ಸ್‌ಮನ್‌ಗಳಿಗೆ ಚೆಳ್ಳೆಹಣ್ಣು ತಿನ್ನಿಸಿದ್ದರಿಂದ ನಮ್ಮ ಖಳನಾಯಕರೇ ಶ್ರೇಷ್ಠ ನಾಯಕರು. ಅಷ್ಟಕ್ಕೂ ಮನುಷ್ಯನನ್ನು ಚೆನ್ನಾಗಿ ಬಲ್ಲವರು ಜನರನ್ನ ನಾಯಕ, ಖಳ ಎಂದು ವಿಂಗಡಿಸುವುದಿಲ್ಲ, ಅಲ್ಲವೇ? ಶತ್ರುಘ್ನಸಿನ್ಹಾ ತರಹ.

ರವಿಚಂದ್ರನ್‌ಗೆ ಹೊಕ್ಕಳ ಮೇಲೆ ಪ್ರೀತಿ ಏಕೆ?

ಕಣ್ಣಾ ಮುಚ್ಚಾಲೆ

ರವೀಂದ್ರನಾಥ ಶಿ. ಯಡಹಳ್ಳಿ, ಹುನಗುಂದ
ಮೋಸ 'ವಂಚನೆ' ದ್ರೋಹಗಳೆಂಬ ಆಯುಧ ಹಿಡಿದವರಿಗೆ ಏನೆಂದು ಕರೆಯಬೇಕು?
● **ದ್ರೋಹಿ. ವಂಚಕ. ಮೋಸಗಾರ.**

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಲೈಂಗಿಕ ಶಿಕ್ಷಣ ಜಾರಿಗೆ ತಂದರೆ, ಮಧ್ಯದಲ್ಲೇ ಶಾಲೆ (ಶಿಕ್ಷಣ) ತೊರೆಯುವವರ ಸಂಖ್ಯೆ ಕಡಿಮೆಯಾಗುತ್ತದೆಯಲ್ಲವೇ?
● **ಜಾಸ್ತಿಯೂ ಆಗಬಹುದು.**

ತುರಗಲ್ಲ ಉಮೇಶ, ರಾಮದುರ್ಗ
ಮಣ್ಣಿನ ಮಗನ ಕೊನೆ ಆಸೆ?
● **ನಿಖಿಲ್‌ನನ್ನು ಶಾಸಕನಾಗಿ ನೋಡುವಾಸೆ.**

ಕಾಳೇಹುಂಡಿ ಶಿವಕುಮಾರ್, ಮೈಸೂರು
ಶಿಲ್ಪಾಳ ಪುರಾಣ ಹನುಮಂತನ ಬಾಲದಂತೆ ಬೆಳೆಯುತ್ತಿದೆಯಲ್ಲಾ?
● **ಅದಕ್ಕೆ ಲಂಕೆ ಸುಡುವ ಮುನ್ನ ನೋಟೀಸ್ ಕೊಟ್ಟಿರುವುದು.**

ಆ.ರಾ. ಮಂಜುನಾಥ, ಗೆದರೆ
ಸೊಳ್ಳೆಗಳಿಗೂ ಸಂಗೀತಕ್ಕೂ ಇರೋ ವ್ಯತ್ಯಾಸ?
● **ಸೊಳ್ಳೆಗಳದ್ದು ಒಂದೇ ರಕ್ತರಾಗ.**

ಅಬ್ದುಲ್ ರಜಾಕ್, ದೇವದುರ್ಗ
ಫಾರಿನ್‌ನವರು ಹೆಚ್ಚಿನ ಸಮಯ ತುಂಟಾಟದಲ್ಲೇ ಕಳೀತಾರಂತೆ?
● **ತುಂಟಾಟ ಅತಿಯಾದರೆ ಡೈವೋರ್ಸ್ ಉಂಟು.**

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ದಕ್ಷಿಣ ಆಫ್ರಿಕನರ ಏಕದಿನ ಕ್ರಿಕೆಟ್ ಸಮವಸ್ತ್ರದಲ್ಲಿ 'ಕಮಲ'ದ ಹೂ ಇದೆಯಲ್ಲ!?
● **ಅದು ಕಣಗಲ ಹೂ.**

ಕೆ.ಎಸ್. ತಪಸ್ವಿನಿ, ಗುಲ್ಬರ್ಗಾ
ಲಂಕೇಶ್, ತೇಜಸ್ವಿ, ಡಿ.ಆರ್., ನಂಜುಂಡಸ್ವಾಮಿ ಬದುಕಿದ್ದರೆ ಈಗ ಈ ಭೂಲೋಕದಲ್ಲಿ ಏನೇನು ಮಾಡುತ್ತಿದ್ದರು?
● **ಬಗೆಹರಿಯದಂತಹ ಜಗಳವಾಡುತ್ತಿದ್ದರು.**

ಎಚ್.ಎಂ. ಹೇಮಂತ್, ಬೆಂಗಳೂರು
ಮುಖ್ಯಮಂತ್ರಿ ಕುಮಾರಸ್ವಾಮಿ "ರಾಜ್ಯದಲ್ಲಿ ಲೈಂಗಿಕ ಶಿಕ್ಷಣ ಜಾರಿಯಿಲ್ಲ" ಎಂದಿದ್ದಾರೆ ಏಕೆ?
● **ರಾಧಿಕಾಳ ಮನೆಯಲ್ಲಾದ ಜ್ಞಾನೋದಯ.**

ಎಸ್.ಜಿ. ರಾಜಶೇಖರ ರೆಡ್ಡಿ, ಗೌರಿಬಿದನೂರು
ಬಿಜೆಪಿಯವರಿಗೆ ಸರ್ಕಾರ ನಡೆಸ್ರಿ ಅಂದ್ರೆ ಯಾತ್ರೆಗೆ ಹೋಗ್ತಿದಾರೆ, ಏನ್ ಮಾಡುವುದು?
● **ಯಾತ್ರೆಯಿಂದಲೇ ಯಾಚನೆ ಮಾಡಿದವರ ಮೂಲ ಕಸುಬೇ ಅದು.**

ಪಿ.ಎನ್. ಶ್ರೀವತ್ಸ, ಬೆಂಗಳೂರು
ದೇವೇಗೌಡ್ರ ಮಕ್ಕಳು ಮುಂದೆ ಬಂದ ಹಾಗೆ ಮುಂದೊಂದು ದಿನ ಎಂ.ಪಿ. ಪ್ರಕಾಶರ ಮಗನೂ....?!
● **"ಸಾಕಾತ್ರಿ, ನಾ ಮನಿಗೋಕ್ತಿನಿ" ಅಂದರಂತೆ ರವಿ.**

ಡಿ.ಎಲ್. ಶ್ವೇತ, ಹರಪನಹಳ್ಳಿ
ನಾರಾಯಣಮೂರ್ತಿಯವರು ವಿದೇಶಿ ವಾದ, ಎಸ್.ಎಲ್. ಭೈರಪ್ಪನವರದು?
● **ಚೆಡ್ಡಿ ವಠಾರದ ವಾದ.**

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ರಾಧಿಕಾ ಮನೆ ವಾಸ್ತವ್ಯಕ್ಕೆ ಬೇಗನೆ ಹೋಗುವ ಸಿ.ಎಂ. ಗ್ರಾಮಗಳ ವಾಸ್ತವ್ಯಕ್ಕೆ ತಡವಾಗಿ ಹೋಗುವುದೇಕೆ?
● **ಅಲ್ಲಿ ರಾಧಿಕಾ ಇಲ್ಲವೆಂದು ಗೊತ್ತಿರುವುದರಿಂದ.**

ಬಹುಮಾನಿತ ಪ್ರಶ್ನೆ

ಟಿ.ಯು. ಕುಮಾರ, ರಾಮದುರ್ಗ
ನಮ್ಮ ರವಿಚಂದ್ರನ್‌ಗೆ ಹೊಕ್ಕಳ ಮೇಲೆ ಪ್ರೀತಿ ಏಕೆ?
● **ಅದಕ್ಕೇ ತಲೆಗೂದಲು ಕಾಲಿಯಾದದ್ದು.**

ಮಂಚಾಲಿ ಗುರುರಾಜ, ಬಳ್ಳಾರಿ
ಹಣೆಬರಹ ಬರೆಯುವವನು ಬ್ರಹ್ಮನಾದರೆ, ಅಳಿಸುವವನು ಯಾರು?
● **ಕೆಲವರ ಪ್ರಕಾರ ರಸ್ತೆ ವಾಹನಗಳಂತೆ.**

ಕುವೆಂಪುನಗರ, ಮಂಡ್ಯ
ಪತ್ರಿಕೋದ್ಯಮದಲ್ಲಿ ಗೌರಿಗೆ ನಿಜವಾದ ಸವಾಲು ಯಾವುದು?
● **ನಿಜ ಹೇಳಿದ್ದಕ್ಕೆ ನಕ್ಸಲ್ ಎಂದವರ ಕಣ್ತೆರೆಸುವುದು.**

ಗುರುರಾಜ ಬ. ಕನ್ನೂರ, ಧಾರವಾಡ
ಶಿಲ್ಪಾ ಮುತ್ತು ಸ್ವೀಕರಿಸಿದ್ದರಲ್ಲಿ ತಪ್ಪೇನಿದೆ ಎಂದು ಸಮರ್ಥಿಸಿಕೊಂಡಿದ್ದಾಳಲ್ಲ?
● **ನಾಳೆ ಇನ್ನೊಂದನ್ನೂ ಹಾಗೆಯೇ ಸ್ವೀಕರಿಸುವ ಆಸೆಯಿಂದ.**

ವಾರದ ಪ್ರಶ್ನೆ:
ನಿವೃತ್ತಿ ಘೋಷಿಸಿರುವ ಪ್ರಕಾಶ್‌ಗೆ ಸೂಕ್ತವಾಗುವ ಪಾತ್ರ ಯಾವುದು?

ವಾರದ ಪ್ರಶ್ನೆಗೆ ಉತ್ತರಿಸಲು ಮತ್ತೆ ಹಿಂದಿನಂತೆ ಹತ್ತು ದಿನಗಳ ಅವಧಿಯನ್ನು ನೀಡುತ್ತಿದ್ದೇವೆ. ಆದ್ದರಿಂದ ಹೋದ ವಾರದ ಪ್ರಶ್ನೆಯನ್ನೇ ಮತ್ತೆ ಪ್ರಕಟಿಸುತ್ತಿದ್ದೇವೆ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಹೊಗಳಿಕೆ ತೆಗಳಿಕೆ





ಬಸವಣ್ಣ ಮಾದಿಗನೆ?


ಒಂದು ಅನಿಸಿಕೆ

"ಆನು ದೇವಾ ಹೊರಗಣವನು"... ಕೃತಿಯ ಪರಿಚಯವನ್ನು 'ಲಂಕೇಶ್'ನಲ್ಲಿ ಓದಿದ ಮೇಲೆ ಪ್ರಶ್ನೆಗಳ, ಆಲೋಚನೆಗಳ ಸುರುಳಿ ಮನಸ್ಸಿನಲ್ಲಿ ತಂತಾನೆ ಬಿಚ್ಚಿಕೊಳ್ಳತೊಡಗಿತು. ಪ್ರಶ್ನೆ, ಬಸವಣ್ಣಾ ಮಾದಿಗನಿದ್ದನೋ ಇಲ್ಲವೋ ಎಂಬುದಲ್ಲ, ಯಾಕೆಂದರೆ ಆ ಪ್ರಶ್ನೆ ಸಂಶೋಧನೆಯ ಕ್ಷೇತ್ರಕ್ಕೆ ಸೇರಿದ್ದು, ಉತ್ತರವನ್ನು ಸಂಶೋಧಕನೇ ಕಂಡು ಹೇಳಬೇಕು. ಆದರೆ ಡಾ. ಬಂಜಗೆರೆ ಜಯಪ್ರಕಾಶರ ಸಂಶೋಧನೆಯ 'ಅನುಮಾನಿತ ಸತ್ಯ'ವನ್ನು 'ಚಾರಿತ್ರಿಕ ಸತ್ಯ'ವೆಂದು ಒಪ್ಪಿಕೊಂಡ ನಂತರ ಏಳುವ ಪ್ರಶ್ನೆಗಳು ಬೇರೆ ರೀತಿಯಾಗಿವೆ.

ಮೊದಲನೆಯದಾಗಿ ಬಸವಣ್ಣ ಮಾದಿಗನಾಗಿ ಹುಟ್ಟಿಯೂ ಮೇಲ್ಜಾತಿಯ ಸ್ತ್ರೀಯರನ್ನು ಮದುವೆಯಾಗಿ ಗೃಹಸ್ಥ ಜೀವನವನ್ನು ನಡೆಸಲು ಸಾಮಾಜಿಕವಾಗಿ ಹೇಗೆ ಸಾಧ್ಯವಾಯಿತು? ಬಸವಣ್ಣನ ಮೊದಲನೆ ಹೆಂಡತಿ ಗಂಗಾಂಬಿಕೆ, ಎರಡನೆ ಹೆಂಡತಿ ನೀಲಾಂಬಿಕೆ ಇಬ್ಬರೂ ಮೇಲ್ಜಾತಿಗೆ ಸೇರಿದವರು, ಬಹುಶಃ ಜೈನ ಕ್ಷತ್ರಿಯ ಕುಲಗಳಿಗೆ ಸೇರಿದವರಾಗಿದ್ದರು. ಅಲ್ಲದೆ ಮೇಲ್ವರ್ಗದ ಕುಟುಂಬದವರೂ ಹೌದು. ಗಂಗಾಂಬಿಕೆ ಭಂಡಾರಿ ಬಲದೇವನ ಮಗಳಾಗಿದ್ದರೆ, ನೀಲಾಂಬಿಕೆ ಸ್ವತಃ ಬಿಜ್ಜಳ ರಾಯನ ಸೋದರ ಸಂಬಂಧಿ. ಹಾಗಿದ್ದಲ್ಲಿ ಹರಳಯ್ಯ ಮಧುವರಸರ ಮಕ್ಕಳ ಮದುವೆಯಿಂದ ಹುಟ್ಟಿದಂತಹ ಘರ್ಷಣೆ ಗಂಗಾಂಬಿಕೆ, ನೀಲಾಂಬಿಕೆಯರ ಮದುವೆಗಳ ಸಂದರ್ಭದಲ್ಲಿ ಹುಟ್ಟದಿರುವುದೇ ಸೋಜಿಗವೆನಿಸುತ್ತದೆ. ಅಲ್ಲದೆ ಮಾದಿಗ ಬಸವಣ್ಣ ಒಂದು ಸಾಮ್ರಾಜ್ಯದ ಭಂಡಾರಿ-ದಣ್‌ನಾಯಕನಂತಹ ಉನ್ನತ ಅಧಿಕಾರ ಸ್ಥಾನಕ್ಕೇರಲು ಮನುವಾದಿಗಳ ದಮನಕಾರಿ ವ್ಯವಸ್ಥೆಯಲ್ಲಿ ಹೇಗೆ ಸಾಧ್ಯವಾಯಿತು?

84 ಪುಟಗಳ "ಆನು ದೇವಾ ಹೊರಗಣವನು".... ಕೃತಿಯನ್ನು ಸಮಗ್ರವಾಗಿ ಓದಿದ ಬಳಿಕ ಈ ಪ್ರಶ್ನೆಗಳಿಗೆ ಡಾ. ಬಂಜಗೆರೆ ಜಯಪ್ರಕಾಶರ ಉತ್ತರ ಬಹುಶಃ ಹೀಗಿದೆ ಎಂದು ಅನಿಸುತ್ತದೆ - ಬಸವಣ್ಣ ಮೂಲತಃ ಮಾದಿಗ ಜಾತಿಯ ಸ್ತ್ರೀಯ ಉದರದಲ್ಲಿ ಜನಿಸಿದ್ದರೂ ಕೂಡ ಶೈವ ಬ್ರಾಹ್ಮಣ ಮಾದಿರಾಜನ ಕರಸಂಜಾತ ಪುತ್ರನಾಗಿದ್ದ (ಪುಟ 50). ಕೆಲವು ಶೈವಾಗಮ ಶಾಸ್ತ್ರಗಳನ್ನಾಧರಿಸಿದ ಕೆಲವು 'ಶೈವ ಪಂಥಗಳು' 'ಕರಸಂಜಾತ' 'ಸಿಸುಮಗ'ದಂಥ ಸಂಪ್ರದಾಯಗಳನ್ನು ಒಪ್ಪಿಕೊಂಡಿದ್ದವು. ಅಲ್ಲದೆ ಆ ಕಾಲದಲ್ಲಿ ಜಾತಿಯನ್ನು ಮೀರುವಂತಹ ಕಪಾಲವ್ರತಗಳು ಚಾಲ್ತಿಯಲ್ಲಿದ್ದು ಗುರು ಒಬ್ಬನಿಂದ ದೀಕ್ಷೆ ಪಡೆದವ ತನ್ನ ಮೂಲಜಾತಿಯ ಹಂಗಿಲ್ಲದೆ 'ವಿಪ್ರ'ನಂತೆ ಪರಿಗಣಿಸಲ್ಪಡಬಹುದವನಾಗಿದ್ದ (ಪುಟ 63). ಗುರುಮಠದಲ್ಲಿ ಸಿಸುಮಗನಾಗಿ ಬೆಳೆದು ಕಪ್ಪಡಿ ಸಂಗಯ್ಯನಿಂದ ದೀಕ್ಷೆ ಪಡೆದ ಬಸವಣ್ಣ ಈ ಬಗೆಯಲ್ಲಿ ಜಾತಿಮುಕ್ತನಾದ ಸಾಧ್ಯತೆಗಳು ಹೆಚ್ಚು" ಹಾಗಿದ್ದರೆ 12ನೇ ಶತಮಾನದಲ್ಲಿ ಜಾತಿ ಮುಕ್ತನಾಗುವುದು ಸುಲಭ ಸಾಧ್ಯವಿತ್ತೆಂದು ಭಾವಿಸಬಹುದೇ?


ಆದರೆ "ಕುಲಾರ್ಣವ"ಗಳಂಥ ತಂತ್ರಶಾಸ್ತ್ರ ಪ್ರಮಾಣಕ್ಕೆ ಹಾಗೂ ಕಪಾಲಿಕ ಪರಂಪರೆಗಳಿಗೆ ಹೆಚ್ಚೆಂದರೆ ಶೈವ ಸಮುದಾಯದ ಒಪ್ಪಿಗೆ ಸಿಗಬಹುದಿತ್ತೇನೋ. ಇಡೀ ಸಾಮಾಜಿಕ ವ್ಯವಸ್ಥೆ ವೈದಿಕ ವರ್ಣ ವ್ಯವಸ್ಥೆಯ ಪ್ರತಿಪಾದಕರಾದ ಮನುವಾದಿಗಳ ಹಿಡಿತದಲ್ಲಿಯೇ ಇತ್ತೆಂಬುದನ್ನು ಡಾ. ಜಯಪ್ರಕಾಶರೇ (ಚತುರ್ವರ್ಗ ಚಿಂತಾಮಣಿ, ಪ್ರಾಯಶ್ಚಿತ ಕಾಂಡ, ಹೇಮಾದ್ರಿ. ಮೂಲಕ) ಉಲ್ಲೇಖಿಸುತ್ತಾರೆ (ಪುಟ. 45) ಅಂದಿನ ಕಾಲದ ರಾಜಶಕ್ತಿ ಕೂಡ ಅಸ್ಪೃಶ್ಯನೊಬ್ಬ ಸವರ್ಣೀಯ ವಧುವನ್ನು ಮದುವೆಯಾಗಿದ್ದಾಗ ಮರಣ ದಂಡನೆಯನ್ನು ವಿಧಿಸಿದ್ದು ಹರಳಯ್ಯ ಮಧುವರಸರ ಪ್ರಕರಣದಲ್ಲಿ ಸ್ಪಷ್ಟವಾಗಿದೆ.



ಡಾ. ಬಂಜಗೆರೆ ಜಯಪ್ರಕಾಶರವರ 'ಅನುಮಾನಿತ ಸತ್ಯ' ಒಂದು ವೇಳೆ ಚಾರಿತ್ರಿಕ ಸತ್ಯವಾಗಿದ್ದರೆ 12ನೇ ಶತಮಾನದ ಕರ್ನಾಟಕದ ಸಾಮಾಜಿಕ ವ್ಯವಸ್ಥೆ ನಾವೆಲ್ಲ ಅಂದುಕೊಂಡಿದ್ದಂತೆ, ದಲಿತರನ್ನು ತುಳಿಯುತ್ತಿದ್ದ ಅಮಾನವೀಯ ವ್ಯವಸ್ಥೆ ಆಗಿರಲಿಲ್ಲವೆಂದಾಯಿತು. ಹೇಗೆಂದರೆ ಮಾದಿಗ ಜಾತಿಯಲ್ಲಿ ಜನಿಸಿದ ಬಸವಣ್ಣ ಬಿಜ್ಜಳನ ಭಂಡಾರದಲ್ಲಿ ಅಧಿಕಾರಿಯಾದ, ಅಸ್ಪೃಶ್ಯತೆಯಿಂದ ಯಾವ ಅಡಚಣೆಯೂ ಆಗಲಿಲ್ಲ, ಬಲದೇವ ಮಂತ್ರಿಯ ಮಗಳನ್ನು ಮದುವೆಯಾದ, ಯಾವ ವಿರೋಧವೂ ಬರಲಿಲ್ಲ, ದಂಡನಾಯಕ ಹುದ್ದೆಗೇರಿದ. ಬಿಜ್ಜಳನ ಸೋದರ ಸಂಬಂಧಿ ನೀಲಾಂಬಿಕೆಯನ್ನು ಮದುವೆಯಾದ, ಯಾವ ವಿರೋಧವೂ ಬರಲಿಲ್ಲ, ಹರಳಯ್ಯನ ಮಗನೊಂದಿಗೆ ಮಧುವರಸನ ಮಗಳ ಮದುವೆಯಾಯಿತು. ಸಾಮಾಜಿಕ ಕ್ರಾಂತಿಯನ್ನು ಹತ್ತಿಕ್ಕಲು ಭೀಕರ ರಕ್ತಪಾತವಾಯಿತು. ಈ ಘಟನಾವಳಿಗಳಲ್ಲಿ ಏನೋ ವಿರೋಧಾಭಾಸವೆನಿಸುತ್ತದೆ ಅಲ್ಲವೆ?

-ವ್ಯಾಸ ಎಲ್. ದೇಶಪಾಂಡೆ, ಕಾರವಾರ

ಗೋವಾಗೆ ಲಾಭ, ನಮಗ್ಯಾಕೆ ನಷ್ಟ?




ಸಾಂಸ್ಕೃತಿಕ ವಲಯದಲ್ಲಿ ಮನಸ್ತಾಪಗಳು ಸಹಜ. ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಪುಸ್ತಕಗಳನ್ನು ಓದಲಾಗಿಲ್ಲ, ಆದರೆ ಅವರ ಬರಹ, ವಿಚಾರ, ಅಭಿರುಚಿ, ಪ್ರತಿಭೆ, ಬದುಕು, ಸಾಹಿತ್ಯಕ್ಕೆ ಅವರ ಕೊಡುಗೆ ಮುಂತಾದವುಗಳ ಬಗ್ಗೆ 'ಲಂಕೇಶ್' ಮೂಲಕ ಸಾಕಷ್ಟು ತಿಳಿದಿರುವೆ. ಏಪ್ರಿಲ್ 18 ರ ಸಂಚಿಕೆಯಲ್ಲಿ ಚಂದ್ರೇಗೌಡರು ಅವರೊಂದಿಗೆ ಕಳೆದ ಕ್ಷಣಗಳನ್ನು ಓದಿ ನಗು ತರಿಸಿದವು.

ಬದುಕಿದ್ದಾಗ ದೇಹದ ಯಾವುದೇ ಭಾಗ ಸ್ವಲ್ಪ ಸುಟ್ಟರೂ ನೋವಾಗುವ ನರಪ್ರಾಣಿಯು ಉಸಿರುಹೋದ ತಕ್ಷಣ ಬೆಂಕಿಯಲ್ಲಿ ಸುಡುವ ಕ್ರಿಯೆ ಹಲವು ಭಾವನಾತ್ಮಕ ಜೀವಿಗಳಿಗೆ ನೋವಿನಲ್ಲಿ ನೋವಿನ ವಿಷಯ. ಬದಲಾಗಿ ಗೌಡರ ಅನಿಸಿಕೆಯಂತೆ ತೇಜಸ್ವಿಯವರನ್ನು ಭೂದೇವಿಯ ಮಡಿಲಿಗೆ ಅರ್ಪಿಸಿದ್ದರೆ ಪರಿಸರ ಪ್ರೇಮಿ, ರೈತನ ಮಗನ ಬದುಕು ಸಾರ್ಥಕವಾಗುತ್ತಿತ್ತಲ್ಲವೇ?

ತೇಜಸ್ವಿಯವರ ಅನುವಾದ ಪುಸ್ತಕ 'ಮಹಾಪಲಾಯನ' ಓದಿದ್ದು ನನಗೆ ಹಸಿರಾಗಿದೆ. ಈಗ 'ಲಂಕೇಶ್'ನಲ್ಲಿ ತೇಜಸ್ವಿಯವರ 'ಪಲಾಯನ' ಓದಿ ದುಃಖವಾಯಿತು.

-ಡಿ.ಎಲ್. ಮಂಜು. ರ್ಯಾಣಹಳ್ಳಿ

ಈ ವಾರದ ಸಂಚಿಕೆಯಲ್ಲಿ ಇನ್ನಿ ನಾಣಿಗೆ ಪೊಲೀಸ್ ಶರಣು ಎಂಬ ವರದಿ ಓದಿದೆ.



ರಾಷ್ಟ್ರಗೀತೆ ಹಾಡುವುದೇ ವಿದೇಶಿಯರ ಮುಂದೆ ಅವಮಾನ ಎಂಬ ತನ್ನ ಕುತಂತ್ರಿ ಬುದ್ಧಿ ಪ್ರದರ್ಶಿಸಿರುವ ನಾರಾಯಣಮೂರ್ತಿ ಒಬ್ಬ ಉದ್ಯಮಿ. ರಾಷ್ಟ್ರಗೀತೆಯನ್ನು ಅಲ್ಲಗಳೆಯುವ ಇಂಥ ನಾಲಾಯಕನಿಗೆ ಲಾತಾ ಕೊಡಬೇಕಾದ ಖಾಕಿ ಚತುರರು ನಾರಾಯಣಮೂರ್ತಿಯತ್ತ ನಾಲಿಗೆ ಚಾಚಿ ಪೊಲೀಸ್ ಇಲಾಖೆಗೆ ಕಳಂಕ ತಂದಿರುವುದು ನಾಡಿನ ದುರಂತ.

-ರಮಜಾನ ಕೆ. ಕೊರ್ತಿ. ಬದಾಮಿ

"ಮಂಗಳೂರು ನಗರ ಪಾಲಿಕೆಯ ಐಲುಪೈಲು" ಎಲ್ಲೆಡೆ ಪ್ರಸಿದ್ಧ. ಇಡೀ ಕರ್ನಾಟಕದಲ್ಲೇ ಇದು ಅತಿ ಭ್ರಷ್ಟ ನಗರಪಾಲಿಕೆಯಾಗಿರುವುದರಿಂದ ಇದಕ್ಕೆ ಹೆಸರು ಎಂಸಿಸಿ ಎಂದರೆ ಮಂಗಳೂರು ಸಿಟಿ ಕಾರ್ಪೊರೇಷನ್ ಆಗಿರದೇ ``Most Corrupt Corporation'' ಎಂದಾಗಿದೆ. ಇದು ಅವರ ತಪ್ಪಲ್ಲವೆನ್ನಿ. ಒಬ್ಬ ಅಭ್ಯರ್ಥಿ ನೀತಿ-ನಿಯತ್ತಿಲ್ಲದ ನಿರ್ಲಜ್ಜ, ಬಕಾಸುರ, ಕಮೀಷನ್ ಏಜಂಟ್ ಎಂದು ಗೊತ್ತಿದ್ದೂ ಕೇವಲ ಅವನ ಜಾತಿ ಅಥವಾ ಪಕ್ಷ ನೋಡಿ ಆರಿಸಿ ಕಳುಹಿಸಿರುವ ಇಲ್ಲಿಯ ಬುದ್ಧಿವಂತ ಜನತೆಯದೇ ಮೂಲ ತಪ್ಪು. ಈ ನಗರದ ತೇಪೆ ಹಾಕಿದ ರಸ್ತೆಗಳು ದ್ವಿಚಕ್ರ ವಾಹನ ಚಾಲಕರಿಗೆ ಯಮಸದೃಶ್ಯವಾಗಿ ಹಳ್ಳಿ ರಸ್ತೆಗಳಿಗಿಂತಲೂ ಹೆಚ್ಚು ಕೆಟ್ಟದಾಗಿದ್ದರೂ ಜನ ತೆಪ್ಪಗಿದ್ದಾರೆ ಮಾತ್ರವಲ್ಲ ಮುಂದಿನ ಚುನಾವಣೆಯಲ್ಲಿ ಇದೇ ಭ್ರಷ್ಟರನ್ನು ಮತ್ತೆ ಗೆಲ್ಲಿಸುವುದು ಖಂಡಿತ.

ಪ್ರಕಾಶ್ ಪಿಂಟೊ ಹೇಳಿರುವಂತೆ ನಾಗಾರ್ಜುನ ಎಂಬ 'ಹಾರು-ಭಸ್ಮಾಸುರನನ್ನು' ಇಲ್ಲಿ ಸ್ಥಾಪಿಸಲು ಎಲ್ಲಾ ಪಕ್ಷಗಳು ಟೊಂಕ ಕಟ್ಟಿ ನಿಂತಿರುವಾಗ ಸಾಮಾನ್ಯ ಮೀನುಗಾರರು ಕೃಷಿಕರು ಎಷ್ಟೆಂದು ಹೋರಾಡಬಲ್ಲರು. ಸ್ಥಳೀಯರಿಗೆ ಇಲ್ಲಿ ಕೆಲಸ ಸಿಗದಿದ್ದರೆ ಏನಂತೆ ಎಂಆರ್‌ಪಿಎಲ್‌ನಲ್ಲಿ ಆದಂತೆ ಪರಿಸರವಾದಿಗಳನ್ನು ಖುಷಿಯಾಗಿಟ್ಟಿರಲು ಹಲವಾರು ಹೊರ ಗುತ್ತಿಗೆ ಕಾಂಟ್ರಾಕ್ಟಗಳು ರೆಡಿಯಾಗಿವೆ.

ಇನ್ನೊಂದು ಮುಖ್ಯ ವಿಷಯ- ನಾಗಾರ್ಜುನದಿಂದ ಉತ್ಪಾದಿತ ವಿದ್ಯುತ್ ಕೇರಳ ಮತ್ತು ಗೋವಾಕ್ಕೆ ರವಾನಿಸಲಾಗುವುದಂತೆ. ಈಗ ಗೋವಾದಲ್ಲಿ ಯಾವುದೇ ದೊಡ್ಡ ವಿದ್ಯುತ್ ಉತ್ಪಾದಕ ಘಟಕಗಳಿಲ್ಲ, ಹಾಗಾಗಿ ಅದು ವಿದ್ಯುತ್‌ಗಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಮೇಲೆ ಅವಲಂಬಿತವಾಗಿದೆ. ಆದುದರಿಂದ ಗೋವೆಯಲ್ಲಿ ನಾಗಾರ್ಜುನ ಸ್ಥಾಪನೆಯಾದರೆ ವಿದ್ಯುತ್ ಕ್ಷೇತ್ರದಲ್ಲಿ ಗೋವಾ ಸಹಾ ಸ್ವಾವಲಂಬಿ ಹಾಗೂ ಕೈಗಾದಿಂದ ಗೋವಾಕ್ಕೆ ಹೋಗುವ ವಿದ್ಯುತ್ ನಮಗೆ ಉಳಿದು ನಮ್ಮ ವಿದ್ಯುತ್ ಕೊರತೆ ಅಷ್ಟರಮಟ್ಟಿಗೆ ನೀಗುತ್ತದೆ.

ಇದರಿಂದ ಗೋವಾದ ಪರಿಸರ ಹಾಗೂ ಪ್ರವಾಸೋದ್ಯಮಕ್ಕೆ ಧಕ್ಕೆಯಾಗುತ್ತದೆ ಎಂಬ ಹೆದರಿಕೆಯೇ ಹಾಗಾದರೆ ನಾಗಾರ್ಜುನ, ತದಡಿಯಿಂದ ಗೋವಾಕ್ಕೆ ವಿದ್ಯುತ್ ಪೂರೈಸಲೋಸ್ಕರ ಕರ್ನಾಟಕದ ಪರಿಸರ ಹಾಗೂ ಪ್ರವಾಸೋದ್ಯಮ ಏಕೆ ಬಲಿಯಾಗಬೇಕು?

-ಪ್ರವೀಣ್ ಎಸ್. ಶೆಟ್ಟಿ
ಮಂಗಳೂರು


"ಏಲಾ ಇವ್ನಾ.... ವೀರಪ್ಪನ್‌ಗೇ ಇವ್ನು ಹೊಡೆದ್ಬಿಟ್ಟು ಬಂದ್ನಾ...?" ಅಂತಾ ನನಗೆ ನಾಗಪ್ಪನನ್ನು ನೋಡಿದಾಗ ಅನ್ನಿಸಿತು. ನಾಗಪ್ಪ ಅಳುತ್ತಾ ಕೈಕಟ್ಟಿಕೊಂಡು ತಲೆ ಬಗ್ಗಿಸಿಕೊಂಡು ನಿಂತಿದ್ದ. ನಮ್ಮನ್ನು ನೋಡಲು ನಾಚುತ್ತಿದ್ದನೋ, ಹೆದರುತ್ತಿದ್ದನೋ ಗೊತ್ತಾಗಲಿಲ್ಲ. ಅಂತೂ ಮೊದಲ ಒಂದೆರಡು ನಿಮಿಷ ಆತ ಏನೂ ಮಾತನಾಡಲೇ ಇಲ್ಲ. ಆಗ ನಾನೇ ಆತನ ಹೆಗಲ ಮೇಲೆ ಕೈಹಾಕಿ ಪಕ್ಕಕ್ಕೆ ಕರೆದುಕೊಂಡು ಹೋಗಿ ಸಾವಧಾನದಿಂದ ಮಾತನಾಡಿಸಿದೆ.

ಈ ಸಂದರ್ಭದಲ್ಲಿ ಆತ ಕಾಡಿನಲ್ಲಿ ನಡೆದ ಎಲ್ಲ ವಿಷಯಗಳನ್ನೂ ಎಳೆಎಳೆಯಾಗಿ ತೆರೆದಿಟ್ಟ. ನಾನು, ರಾಘು, ಪುನೀತ್, ಅಮ್ಮ ಹಾಗೂ ಕುಟುಂಬದ ಇನ್ನಿತರ ಸದಸ್ಯರು ಆತನ ಸುತ್ತ ಕುಳಿತಿದ್ದೆವು. ಆತ ಕತೆ ಕೇಳುತ್ತಿದ್ದಾಗ ಕೆಲವರು ಒಂದೆರಡು ಹನಿ ಕಣ್ಣೀರು ಸುರಿಸಿದರು. ಮತ್ತೆ ಕೆಲವರು ಭಯಗೊಂಡರು. ನಾನೂ ಅಷ್ಟೆ, ಕಾಡಿನಲ್ಲಿ ಅಪ್ಪಾಜಿಯ ಸ್ಥಿತಿಗತಿಯನ್ನು ನೆನೆಸಿಕೊಂಡು ಭಯಭೀತನಾದೆ. ಇದಕ್ಕಿಂತ ಮುಖ್ಯವಾದ ವಿಷಯವೆಂದರೆ ಅಪ್ಪಾಜಿ ಅಪಹರಿಸಲ್ಪಟ್ಟ ನಂತರ ನಮಗೆ ಇದೇ ಮೊದಲ ಬಾರಿ ಅಧಿಕೃತವಾಗಿ ಅವರ ಯೋಗಕ್ಷೇಮದ ಫಸ್ಟ್ ಹ್ಯಾಂಡ್ ರಿಪೋರ್ಟ್ ಸಿಕ್ಕಿದ್ದು. ಅಲ್ಲಿಯವರೆಗೂ ನಾವು ನಕ್ಕೀರನ್ ಗೋಪಾಲ್ ಹೇಳಿದ್ದನ್ನೇ ನಂಬಿಕೊಂಡು ಬದುಕಿದ್ದೆವು.

ನಾಗಪ್ಪ ಕಾಡಿನಲ್ಲಿ ನಡೆದದ್ದನ್ನೆಲ್ಲ ಹೇಳಿದ ನಂತರ ನಾನು ಮತ್ತು ರಾಘು ಹೊರನಡೆದೆವು. ಅಪ್ಪಾಜಿಯನ್ನು ಬಿಡುಗಡೆ ಮಾಡಿಸುವ ನಮ್ಮ ಕಾರ್ಯತಂತ್ರವನ್ನು ಕೂಡಲೇ ಬದಲಾಯಿಸಬೇಕೆಂದು ತೀರ್ಮಾನಿಸಿದೆವು. ಯಾಕೆಂದರೆ ನಾಗಪ್ಪ ಓಡಿಬಂದಿದ್ದರಿಂದ ವೀರಪ್ಪನ್ ಘನತೆಗೆ ಧಕ್ಕೆಯಾಗಿತ್ತು. ಈ ಸಿಟ್ಟಿನಲ್ಲಿ ಆತ ಯಾವುದೇ ಆಘಾತಕಾರಿ ಕೃತ್ಯಕ್ಕೂ ಕೈಹಾಕಬಹುದು ಎಂದು ನಾವು ಊಹಿಸಿದೆವು.

ನಾಗಪ್ಪ ಮಾಡಿದ್ದು ಸರಿ ಅಥವಾ ತಪ್ಪು ಎಂದು ಹೇಳುವ ಸ್ಥಿತಿಯಲ್ಲಿ ನಾವಿರಲಿಲ್ಲ. **He was so desperate.** ಎಲ್ಲ ಮನುಷ್ಯರ ತಾಳ್ಮೆಗೂ ಒಂದು ಮಿತಿಯಿರುತ್ತೆ. ಅದನ್ನು ನಿಭಾಯಿಸಲು ಸಾಧ್ಯವಾಗದವರು ಈ ರೀತಿ ಮಾಡುತ್ತಾರೆ. ನಾಗಪ್ಪನಿಗೆ ಆದದ್ದು ಅದೇ. "ಅವನು ನಮಗೆ ಪ್ರಾಬ್ಲಮ್ ಕೊಡುತ್ತಿರಲಿಲ್ಲ. ಆದರೆ ಸಿಕ್ಕಾಪಟ್ಟೆ ನಡೆಸುತ್ತಿದ್ದ. ಅಷ್ಟೇ ಅಲ್ಲ, ಆಗಾಗ್ಗೆ ನಾವು ಉಳಿದುಕೊಂಡಿದ್ದ ಸ್ಥಳವನ್ನು ಬದಲಾಯಿಸುತ್ತಿದ್ದ. ಅದರಿಂದ ನನಗೆ ಕೊನೆಕೊನೆಗೆ ಇರಿಟೇಟ್ ಆಗಲು ಶುರುವಾಯಿತು. ಇದಕ್ಕೊಂದು ಗತಿ ಕಾಣಿಸಲೇಬೇಕು ಎಂದು ನನ್ನ ಮನಸ್ಸಿನೊಳಗಿನ ಮನಸ್ಸು ಹೇಳುತ್ತಿತ್ತು. ನಂಗೆ ಕೋಪ ತಡೆಯೊಕ್ಕೆ ಆಗ್ಲೇ ಇಲ್ಲ. ಕೊನೆಗೆ ಆ ಕ್ಷಣ ಬಂತು. ನಾನು ವೀರಪ್ಪನ್‌ನನ್ನು ಮುಗಿಸಿ ಅಣ್ಣಾವ್ರನ್ನ ಬಚಾವ್ ಮಾಡ್ಬೇಕು ಅಂತ ನಿರ್ಧರಿಸಿ ಆತನ ಮೇಲೆ ಎರಗಿದೆ...." ಹೀಗೆ ನಾಗಪ್ಪ ನಡೆದದ್ದನ್ನು ನಮಗೆ ವಿವರವಾಗಿ ತಿಳಿಸಿದ. **But all said and done** ಆತ ತನ್ನ ಕಾರ್ಯತಂತ್ರದಲ್ಲಿ ಗೆದ್ದುಬಿಟ್ಟಿದ್ರೆ ಓಕೆ; ಆದರೆ ಸೋತಿದ್ದರೆ ಎಲ್ಲರಿಗೂ ತುಂಬಾ ಕಷ್ಟವಾಗುತ್ತಿತ್ತಲ್ವಾ..... ಎಂದು ನಾನು ಮನಸ್ಸಿನಲ್ಲೇ ಲೆಕ್ಕ ಹಾಕಿದೆ. ಆದರೆ ಅಂದು ಯಾವುದಕ್ಕೂ ಹೆಚ್ಚಿನ ಸಮಯಾವಕಾಶ ಇರಲೇ ಇಲ್ಲ. ನಾವು ಮುಂದಿನ ಕ್ರಮ ಕೈಗೊಳ್ಳಲು ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣ ಮತ್ತು ಕರುಣಾನಿಧಿಯವರನ್ನು ಭೇಟಿಯಾಗಲು ರೆಡಿಯಾದೆವು.

ಇಂತಹ ಸಂದರ್ಭದಲ್ಲಿ ನಾವು ಎಂತೆಂತಹ ಗಾಳಿ ಸುದ್ದಿಗಳನ್ನು ಎದುರಿಸಬೇಕಾಯಿತು ನೋಡಿ. ಅಣ್ಣಾವ್ರ ಮಕ್ಕಳು ನಾಗಪ್ಪನನ್ನು ಕೋಣೆಯಲ್ಲಿ ಬಂಧಿಸಿ ಚೆನ್ನಾಗಿ ಹೊಡೆದ್ರಂತೆ ಎಂಬ ಸುದ್ದಿ ಅದ್ಹೇಗೆ ಹುಟ್ಟಿತೋ ಗೊತ್ತಿಲ್ಲ. ನಾಗಪ್ಪನನ್ನು ಹೊಡೆದ್ರೆ ನಮ್ಗೆ ಅಣ್ಣಾವ್ರು ಸಿಕ್ತಿದ್ರಾ...? ಅಥವಾ ನಾಗಪ್ಪನನ್ನು ಹೊಡೆದು ನಾವೇನು ಪುರುಷಾರ್ಥ ಸಾಧಿಸಿದಂತಾಗುತ್ತಿತ್ತು? ಇದೆಲ್ಲಾ ಹೇಳುವ, ಮಾತನಾಡುವ ಮನಸ್ಥಿತಿಯಲ್ಲಿ ನಾನಿರಲಿಲ್ಲ. ವಾಸ್ತವವಾಗಿ ನಾಗಪ್ಪನಿಗೆ ಯಾವುದೇ ತೊಂದರೆಯಾಗಬಾರದೆಂಬ ಕಾರಣಕ್ಕೆ, ಆತನಿಗೆ ರಕ್ಷಣೆಯನ್ನು ನೀಡಿ ಎಂದು ಪೊಲೀಸರಲ್ಲಿ ವಿನಂತಿಸಿದ್ದೆ ನಾನು. ಯಾಕೆಂದರೆ ಆ ಸಂದರ್ಭದಲ್ಲಿ ನಾವು ಸ್ವಲ್ಪ ಜಾಗೃತೆ ವಹಿಸಿಕೊಳ್ಳದೇ ಇದ್ದಲ್ಲಿ ಇದು ಇನ್ನೂ ಬೇರೆ ಬೇರೆ ತಿರುವುಗಳನ್ನು ಪಡೆದು ಅಪ್ಪಾಜಿಯ ಬಿಡುಗಡೆಗೆ ಇನ್ನಷ್ಟು ಕಂಟಕಪ್ರಾಯವಾಗುತ್ತಿತ್ತು ಎಂಬುದು ನಮ್ಮ ಆಲೋಚನೆಯಾಗಿತ್ತು.



ಇದಾದ ಹಲವೇ ದಿನಗಳಲ್ಲಿ ನಮಗೆ ಇನ್ನೊಂದು ದೊಡ್ಡ ಶಾಕಿಂಗ್ ನ್ಯೂಸ್ ಬಂತು. ಗೋವಿಂದು ಮಾಮ ಕೂಡಾ ಬಂದ್ಬಿಟ್ರು.... ಎಂಬ ಸುದ್ದಿ ಎಲ್ಲೆಡೆಯಿಂದ ಕೇಳಿಬರಲಾರಂಭಿಸಿತು. ನಾವು ಕೂಡಲೇ ಪೊಲೀಸರನ್ನು ಸಂಪರ್ಕಿಸಿದಾಗ ಅವರು ಆ ಸುದ್ದಿಯನ್ನು ದೃಢಪಡಿಸಿದರು.

ಗೋವಿಂದು ಮಾಮ ಕೂಡ ನಾಗಪ್ಪನ ಥರ ಎಲ್ಲವನ್ನೂ ಬಿಡಿಸಿ ಬಿಡಿಸಿ ಹೇಳಿದರು. ನಾಗಪ್ಪ ಮತ್ತು ಗೋವಿಂದು ಮಾಮ ವಾಪಾಸು ಬಂದಿದ್ದರಿಂದ ಈಗ ನಾಗೇಶ್ ಮತ್ತು ಅಪ್ಪಾಜಿ ಇಬ್ಬರೇ ಕಾಡಲ್ಲಿ ಉಳಿದುಕೊಂಡಂತಾಯಿತು. ಆಗ ಅಪ್ಪಾಜಿ "ನಾಗೇಶ್‌ನನ್ನೂ ಕಳಿಸ್ಬಿಡು. ನನ್ನನ್ನೊಬ್ಬನನ್ನು ಮಾತ್ರ ಇಟ್ಕೊಂಡು ಏನ್ಬೇಕಾದ್ರೂ ಮಾಡು" ಎಂದು ಅಪ್ಪಾಜಿ ವೀರಪ್ಪನ್‌ನನ್ನು ವಿನಂತಿಸಿಕೊಂಡರಂತೆ. ಈ ಮಾತನ್ನು ಗೋವಿಂದು ಮಾಮ ಗದ್ಗದಿತ ಕಂಠದಿಂದ ನಮ್ಮ ಮುಂದೆ ಹೇಳಿದಾಗ ನನ್ನ ಅಮ್ಮನ ಕಣ್ಣೀರ ಕೋಡಿ ಹರಿಯಲಾರಂಭಿಸಿತು.

ಬಂದ ರಾತ್ರಿ ಎರಡು ಗಂಟೆಯ ತನಕ ಏನೇನೋ ಕಲ್ಪಿಸಿಕೊಂಡು ಆಲೋಚಿಸುತ್ತಿದ್ದೆ. ಅದೆಷ್ಟು ಹೊತ್ತಿಗೆ ನಾನು ನಿದ್ದೆ ಮಾಡಿದೆ ಎಂಬುದು ನನಗೇ ಗೊತ್ತಿಲ್ಲ. ಬೆಳಗಿನ ಜಾವ ಯಾರೋ ಎಬ್ಬಿಸಿದಾಗ ಮತ್ತೆ ಏನಾದರೂ ಕೆಟ್ಟ ಸುದ್ದಿ ಬಂತೋ ಎಂಬ ಭಯದಿಂದಲೇ ಹಾಸಿಗೆಯಿಂದ ಎದ್ದೆ. ಆದರೆ ಅಂದಿನಿಂದ ಅಪ್ಪಾಜಿಯ ಬಿಡುಗಡೆ ಕಾರ್ಯಕ್ಕೆ ಇನ್ನಷ್ಟು ತೀವ್ರವಾಗಿ ಎಲ್ಲಾ ಕಡೆಯಿಂದಲೂ ಒತ್ತಡ ಹೇರಬೇಕೆಂಬುದು ನನ್ನ ಮತ್ತು ರಾಘುವಿನ ಬಲವಾದ ನಂಬಿಕೆಯಾಗಿತ್ತು. ನಾವಾಗ ಏನೇನು ಮಾಡಿದೆವೋ? ಎಲ್ಲೆಲ್ಲಿಗೆ ಹೋದೆವೋ? ಇದೆಲ್ಲವೂ ನನಗೀಗ ಕನಸಿನಲ್ಲಿ ನಡೆದ ರೀತಿಯಲ್ಲಿ ಭಾಸವಾಗುತ್ತಿದೆ. ಆ ಡೀಟೇಲ್ಸ್‌ಗಳೆಲ್ಲ ಈಗ ಬೇಡವೆನಿಸುತ್ತಿದೆ.

ಹೀಗೆ ಅಪ್ಪಾಜಿಯ ಬರುವಿಕೆಗಾಗಿ ಕಾಯುತ್ತಾ ಕುಳಿತಿದ್ದ ನಮಗೆ ಕೊನೆಗೊಂದು ದಿನ ಸಿಹಿ ಸುದ್ದಿ ಬಂತು. ಈ ಸುದ್ದಿಯನ್ನು ಆರಂಭದಲ್ಲಿ ನಾನು ನಂಬಲೇ ಇಲ್ಲ. ಅದೇನೆಂದು ನಿಮಗೇ ಗೊತ್ತಲ್ವಾ? ಮೂರ್ನಾಲ್ಕು ಜನ ಬೆಂಗಳೂರಿನಿಂದ ಅಪ್ಪಾಜಿಯನ್ನು ಮಾತನಾಡಿಸಲು ಕಾಡಿಗೆ ಹೋಗುವುದೆಂದು ಕನ್‌ಫರ್ಮ್ ಆಯಿತು. ಅವರು ಹೋಗಿದ್ದು ಮಾತ್ರವಲ್ಲ ಅಲ್ಲಿ ಅಪ್ಪಾಜಿಯೊಂದಿಗೆ ಮಾತನಾಡಿ ವಾಪಾಸು ಬಂದಾಗಲಂತೂ ನನಗಾದ ಸಂತೋಷ ಅಷ್ಟಿಷ್ಟಲ್ಲ. ಅವೊತ್ತು ಮಾತ್ರ ಈ ಕಿಡ್ನ್ಯಾಪ್ ಪ್ರಕರಣ ಆದ ನಂತರ ಮೊದಲ ಬಾರಿಗೆ ನಾನು ಅತ್ಯಂತ ಸಮಾಧಾನಚಿತ್ತದಿಂದ ಮಲಗಲು ಸಾಧ್ಯವಾಯಿತು. ಅಪ್ಪಾಜಿ ಖಂಡಿತಾ ವಾಪಸ್ಸು ಬರುತ್ತಾರೆಂದು ನನಗನ್ನಿಸಿದ್ದು ಅದೇ ಮೊದಲಬಾರಿ.

ಇದಾದ ನಂತರ ಅಪ್ಪಾಜಿ ಇವತ್ತು ಬರ್ತಾರಾ? ನಾಳೆ ಬರ್ತಾರಾ? ಎಂಬ ಟೆನ್ಷನ್ ಶುರುವಾಯಿತು. ಆ ಕ್ಷಣ ಆ ದಿನಗಳನ್ನು ನೆನೆಸಿಕೊಂಡರೆ ಈಗ ನನ್ನ ಮೈ ಜುಂ ಎನ್ನಿಸುತ್ತದೆ. ಯಾಕೆಂದರೆ ಅಪ್ಪಾಜಿ ಬರುವುದು ಗ್ಯಾರಂಟಿ ಎಂಬ ಸಂತೋಷ ನಮಗೆ. ಆದರೆ ಅದನ್ನು ಹೊರಜಗತ್ತಿಗೆ ಹೇಳುವ ಧೈರ್ಯ ನಮಗಿರಲಿಲ್ಲ, ಯಾಕೆಂದರೆ ಪ್ರತೀ ಕ್ಷಣ, ಪ್ರತೀ ನಿಮಿಷವೂ ವೀರಪ್ಪನ್‌ನ ಮನಸ್ಸು ಮತ್ತು ತಂತ್ರಗಳು ಬದಲಾಗುತ್ತಾ ಹೋಗುತ್ತಿದ್ದುದರಿಂದ ನಾವು ಯಾವುದನ್ನೂ ನಂಬುವ ಸ್ಥಿತಿಯಲ್ಲಿರಲಿಲ್ಲ.

ಕೊನೆಗೊಂದುದಿನ, ನಾನು ನಿರೀಕ್ಷಿಸುತ್ತಿದ್ದ ಆ ದಿನ... ಆ ಕ್ಷಣ ಬಂದೇಬಿಟ್ಟಿತು. ಆ ಕಡೆ ಎಲ್ಲೋ ಒಂದು ಸ್ಪಾಟ್‌ನಲ್ಲಿ ಅಪ್ಪಾಜಿ ಬಂದ್ಬಿಡ್ತಾರೆ ಎಂಬ ಸುದ್ದಿ ಕಾಡಿನಿಂದ ನಮಗೆ ರವಾನೆಯಾಯ್ತು. ಈ ಸುದ್ದಿ ಕೇಳಿದ ತಕ್ಷಣ ನಾನು ಇದ್ದ ಬಟ್ಟೆಯಲ್ಲೇ ನಮ್ಮ ಕುಟುಂಬದ ಸದಸ್ಯರ ಜೊತೆ ಕೊಯಮತ್ತೂರಿಗೆ ಪ್ರಯಾಣ ಮಾಡಿದೆ. **We all went to Coimbathore. But that day we did not receive any information.** ಮತ್ತೆ ಎಲ್ಲರೂ ಬೇಸರದಿಂದ ಅಲ್ಲೇ ಮಲಗಿದೆವು.

ಹಾಗೆ ಮಲಗಿದರೂ ಯಾರಿಗೂ ನಿದ್ರಾದೇವಿ ಒಲಿದಿರಲಿಲ್ಲ. ಯಾಕೆ ಹೀಗಾಗುತ್ತಿದೆ? ಈ ಬಾರಿಯೂ ವೀರಪ್ಪನ್ ನಮಗೆ ಮೋಸ ಮಾಡಿದನೇ? ಎಂದು ಅಂದುಕೊಳ್ಳುವಷ್ಟರಲ್ಲೇ ನನ್ನ ಜೀವನದ ಅತ್ಯಂತ ರೋಮಾಂಚಕಾರಿ ಕ್ಷಣವನ್ನು ಅನುಭವಿಸಿದೆ. ಯಾರೋ ಬಂದು "ಅಪ್ಪಾಜಿ ಬಿಡುಗಡೆಯಾಗಿದ್ದಾರೆ. ಅಲ್ಲೆಲ್ಲೋ ಅವರು ಮಲಗಿದ್ದಾರೆ. ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ" ಎಂದದ್ದೇ ತಡ ನಾನು ಜೋರಾಗಿ ಕಿರುಚಿಕೊಂಡೆ. ಅದೇನು ಕಿರುಚಿಕೊಂಡೆನೋ ನನಗಂತೂ ಗೊತ್ತಿಲ್ಲ. ಆ ಸುದ್ದಿ ಕೇಳಿದ ನಂತರ ನಾವ್ಯಾರೂ ಮಲಗಲೇ ಇಲ್ಲ. ಎಲ್ಲರ ಮುಖದಲ್ಲಿ ಒಂದು ಅದ್ಭುತವಾದ ಸಂತೋಷ, ನೆಮ್ಮದಿ. ಬಹುಶಃ ನಮ್ಮೆಲ್ಲರ ಜೀವನದ ಅತಿ ಸಂತೋಷದ ಕ್ಷಣ ಅದು... ಆ ದಿನ... ಆ ಕ್ಷಣ ಯಾವುದನ್ನೂ ನಾನು ಸಾಯುವ ತನಕ ಮರೆಯಲು ಸಾಧ್ಯವೇ ಇಲ್ಲ. ಅಪ್ಪಾಜಿ ಬಿಡುಗಡೆಯಾಗಿದ್ದಾರೆ ಎಂಬ ಸುದ್ದಿ ಕೇಳಿದಾಕ್ಷಣ ನನ್ನ ನೆಚ್ಚಿನ ದೇವರಿಗೆಲ್ಲಾ ಅಲ್ಲಿಂದಲೇ ಕೋಟಿ ಕೋಟಿ ಪ್ರಣಾಮಗಳನ್ನು ಸಲ್ಲಿಸಿದೆ. ಹಾಗೂ ಕರ್ನಾಟಕದಾದ್ಯಂತ ರಾಜ್ ಅಭಿಮಾನಿಗಳು ಅಪ್ಪಾಜಿಯ ಬಿಡುಗಡೆಗಾಗಿ ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳನ್ನು ಏರ್ಪಡಿಸಿ, ಅನ್ನ ಸಂತರ್ಪಣೆಗಳನ್ನು ಏರ್ಪಡಿಸುವುದರ ಮೂಲಕ ದೇವರಲ್ಲಿ ಮೊರೆಯಿಟ್ಟಿದ್ದರು.

ಮರುದಿನ ಬೆಳಿಗ್ಗೆ ಆ ಅಮೃತಘಳಿಗೆ ಕೂಡಿಬಂತು. ನಮ್ಮನ್ನು ಯಾವುದೋ ಒಂದು ಸ್ಥಳಕ್ಕೆ ರವಾನಿಸಿದರು. ಅಲ್ಲಿ ನಾವೆಲ್ಲಾ ಕಾದುನಿಲ್ಲಬೇಕು ಎಂಬ ಆದೇಶ ಬಂದಿತ್ತು. ಅಷ್ಟರಲ್ಲೇ ಬೆಂಗಳೂರಿನಿಂದ ಅಮ್ಮ ಮತ್ತು ಮುಖ್ಯಮಂತ್ರಿಗಳ ಸಮೇತ ಇತರ ಅಧಿಕಾರಿಗಳು ಹೆಲಿಕಾಪ್ಟರ್‌ನಲ್ಲಿ ಬಂದಿಳಿದಿದ್ದರು. ಎಲ್ಲೆಡೆ ಹಬ್ಬದ ವಾತಾವರಣ ಮೇಳೈಸುತ್ತಿತ್ತು. ಆದರೂ ಎಲ್ಲರ ಕಣ್ಣಲ್ಲಿ ಆತಂಕವೂ ಕೂಡ ಮಡುಗಟ್ಟಿತ್ತು. ಆ ಕಡೆಯಿಂದ ಅಪ್ಪಾಜಿ ಬರುತ್ತಿದ್ದ ದೃಶ್ಯ ನೋಡಿ ನಾವೆಲ್ಲಾ ಬಿಕ್ಕಿಬಿಕ್ಕಿ ಅಳಲು ಶುರುಮಾಡಿದೆವು. ಅತ್ತ ಕಡೆಯಿಂದ ಅಪ್ಪಾಜಿ ಕೂಡಾ ಕಣ್ಣಲ್ಲಿ ನೀರು ಹಾಕಿಕೊಂಡು ಬಂದರು. ಪ್ರತಿಯೊಬ್ಬರನ್ನೂ ಪ್ರೀತಿಯಿಂದ ಆತ್ಮೀಯವಾಗಿ ಆಲಂಗಿಸಿದರು. ಆ ಅನುಭವಗಳನ್ನೆಲ್ಲಾ ನಾನು ಅಕ್ಷರರೂಪದಲ್ಲಿ ನಿಮಗೆ ಹೇಳಲು ಸಾಧ್ಯವಿಲ್ಲ. ನನಗೇ ಅಲ್ಲ, ಯಾವ ದೊಡ್ಡ ಕವಿಗೂ ಅದು ಸಾಧ್ಯವಿಲ್ಲ. ನಾವು ಅನುಭವಿಸಿದ ಯಾತನೆ, ಸುಖ, ದುಃಖ ಅದೆಲ್ಲಾ ನಮ್ಮ ನಮ್ಮ ಹೃದಯಗಳಿಗಷ್ಟೇ ಗೊತ್ತು.

ಅಪ್ಪಾಜಿ ಬಂದನಂತರ ಯಾಕೋ ಅವರು **stranger** ಥರ ಕಾಣಿಸುತ್ತಿದ್ದರು. ಅವರ ವರ್ತನೆಯಲ್ಲೂ ನನಗೆ ಒಂದು ವಿಚಿತ್ರತೆ ಕಾಣಿಸಲು ಶುರುವಾಯಿತು. ಇದನ್ನೆಲ್ಲ ಕಂಡು ನನ್ನ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳು ಉದ್ಭವಿಸಲಾರಂಭಿಸಿದವು. ಅಪ್ಪಾಜಿಯ ಆಲಿಂಗನದಿಂದ ನಮಗಾದ ಸಂತೋಷ ಅದ್ಭುತ. ಆದರೆ ಕಾಡಿನಿಂದ ಬಂದ ನಂತರ ಅವರಾಡುತ್ತಿದ್ದ ಮಾತುಗಳು ಮಾತ್ರ ನಮ್ಮನ್ನು ಗೊಂದಲಕ್ಕೀಡು ಮಾಡಿತ್ತು. ಯಾಕೆ ಗೊಂದಲವಾಗುತ್ತಿತ್ತು ಗೊತ್ತೇ?

(ಮುಂದುವರೆಯುವುದು)

ಅಪ್ಪಾಜಿ ಬಂದನಂತರ ಯಾಕೋ ಅವರು ಅಪರಿಚಿತರಂತೆ ವರ್ತಿಸುತ್ತಿದ್ದರು. ಇದನ್ನೆಲ್ಲ ಕಂಡು ನನ್ನ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳು ಉದ್ಭವಿಸಲಾರಂಭಿಸಿದವು. ಅಪ್ಪಾಜಿಯ ಆಲಿಂಗನದಿಂದ ನಮಗಾದ ಸಂತೋಷ ಅದ್ಭುತ. ಆದರೆ ಕಾಡಿನಿಂದ ಬಂದ ನಂತರ ಅವರಾಡುತ್ತಿದ್ದ ಮಾತುಗಳು ಮಾತ್ರ ನಮ್ಮನ್ನು ಗೊಂದಲಕ್ಕೀಡು ಮಾಡಿತ್ತು. ಒಟ್ಟಾರೆ ಅವರ ವ್ಯಕ್ತಿತ್ವ ಮತ್ತು ವರ್ತನೆಯಲ್ಲಿ ವಿಚಿತ್ರವಾದ ಬದಲಾವಣೆಯೊಂದು ಎದ್ದುಕಾಣುತ್ತಿತ್ತು.



ಬಿಡುಗಡೆಗೊಂಡ ಅಪ್ಪಾಜಿಯಲ್ಲಿ ವಿಚಿತ್ರ ಬದಲಾವಣೆ

R.B.P. LANKESH, Kannada Weekly Price Rs. 10/- 9-5-2007 RNI No. KARKAN2005/14648 Regd.No.KA/BG(S)/2036/2005-

ಎದೆ ತುಂಬಿ ಗುಡುಗಿದ ಎಸ್.ಪಿ.ಬಿ

ಎಸ್.ಪಿ. ಬಾಲಸುಬ್ರಮಣ್ಯಂ ಅವರನ್ನು ಗಾಂಧಿನಗರದವರು 'ಗಾಂಧಿಬಾಬಾ' ಎಂದೇ ಕರೆಯುತ್ತಾರೆ. ಯಾಕೆಂದರೆ ಅವರು ಕಳೆದ ನಲವತ್ತು ವರ್ಷಗಳಲ್ಲಿ ಯಾರನ್ನೂ ಬೈದಿದ್ದಾಗಲಿ, ಹೀಯಾಳಿಸಿದ್ದಾಗಲಿ, ವಿವಾದದಲ್ಲಿ ಸಿಲುಕಿದ್ದಾಗಲಿ ಇಲ್ಲವೇ ಇಲ್ಲ. ಆದರೆ ಇಂತಹ 'ಗಾಂಧಿಬಾಬಾ' ಇದೇ ಮೊದಲ ಬಾರಿಗೆ ಮೊನ್ನೆ 'ಹೆತ್ತರೆ ಹೆಣ್ಣೇ ಹೆರಬೇಕು' ಎಂಬ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಪರಭಾಷಾ ಗಾಯಕರ ವಿರುದ್ಧ ಗುಡುಗಿದ್ದಾರೆ.



"ಪರಭಾಷೆಯವರು ಕನ್ನಡ ಹಾಡನ್ನು ಹಾಡುವ ಮೊದಲು ಹಾಡಿನ ಸಾಹಿತ್ಯ ಮತ್ತು ಭಾಷೆಯ ಸೊಗಡನ್ನು ಅರಿತು ಹಾಡಬೇಕು. ಕನ್ನಡ ಗೊತ್ತಿಲ್ಲದವರು ಕನ್ನಡ ಹಾಡುಗಳನ್ನು ಹಾಡಬಾರದು" ಎಂದು ಎಸ್ ಪಿ ಯವರು ಕರ್ನಾಟಕದ ರಾಯಭಾರಿಯಂತೆ ಆರ್ಭಟಿಸಿದ್ದಾರೆ.

ಇದಕ್ಕೆ ಕಾರಣವೇನಿರಬಹುದು? ಎಲ್ಲರಿಗೂ ಗೊತ್ತಿರುವಂತೆ ಇತ್ತೀಚೆಗೆ ಕುನಾಲ್ ಗಾಂಜಾವಾಲಾ, ಸೋನು ನಿಗಮ್, ಉದಿತ್ ನಾರಾಯಣ್, ಶಂಕರ್ ಮಹಾದೇವನ್, ಹರಿಹರನ್ ಮೊದಲಾದ ಪರಭಾಷೆಯವರು ಕರ್ನಾಟಕದಲ್ಲಿ ದಿನದಿಂದ ದಿನಕ್ಕೆ ಜನಪ್ರಿಯರಾಗುತ್ತಿರುವುದೇ ಕಾರಣವಿರಬಹುದೇ? ಇದಕ್ಕಿಂತ ಮುಖ್ಯವಾಗಿ ಎಸ್ಪಿ ಹಿಂದಿಯಲ್ಲಿ ಹಾಡಲು ಹೋದಾಗ ಇವರ ಧ್ವನಿ ಮತ್ತು ಹಿಂದಿಯ ಉಚ್ಚಾರಣೆ ಸರಿಯಿಲ್ಲ ಎಂದು ಅಲ್ಲಿಯವರು ಅಪಸ್ವರ ಎತ್ತಿದ್ದನ್ನು ಅವರಿನ್ನೂ ಮರೆತಿರಲಾರರು. 'ಏಕ್ ದುಜೆ ಕೇ ಲಿಯೆ' ಚಿತ್ರಕ್ಕೆ ಹಾಡಿದ ನಂತರ ಈ 'ಮದರಾಸಿ ಧ್ವನಿ'ಯನ್ನು ಹಿಂದಿಯವರು ವ್ಯವಸ್ಥಿತವಾಗಿ ದೂರ ಇಟ್ಟಿದ್ದರು. ಆಗ ಆದ ಅವಮಾನಕ್ಕೆ ಈಗ ಎಸ್ಪಿ ಈ ರೀತಿ ಸೇಡು ತೀರಿಸಿಕೊಳ್ಳುತ್ತಿದ್ದಾರೆಯೇ?

ಎಷ್ಟೇ ಆದರೂ, 'ಎದೆತುಂಬಿ ಹಾಡುವೆನು' ಕಾರ್ಯಕ್ರಮದ ನಂತರ ಎಸ್ಪಿ ಕರ್ನಾಟಕದ ಸಾಂಸ್ಕೃತಿಕ ರಂಗದ ಒಂದು ಭಾಗವಾಗಿಬಿಟ್ಟಿದ್ದಾರೆ ತಾನೆ?

ಧಾರಾವಾಹಿಗೆ ರಕ್ಷಿತಾ?



ಮದುವೆಯಾದ ನಂತರ ಕ್ರೇಜಿ ಹೀರೋಯಿನ್ ರಕ್ಷಿತಾ ಏನು ಮಾಡುತ್ತಿದ್ದಾಳೆ ಎಂಬ ಪ್ರಶ್ನೆ ಅವಳ ಅಭಿಮಾನಿಗಳನ್ನು ಕಾಡಿದ್ದರೆ ಅಚ್ಚರಿಯಿಲ್ಲ. ಆದರೆ ಅವರ ನಿರೀಕ್ಷೆಯಂತೆ ಆಕೆ ಪತಿ ಪ್ರೇಮ್ ನಿರ್ದೇಶನದ 'ಪ್ರೀತಿ ಯಾಕೆ...' ಸಿನಿಮಾದ ಚಿತ್ರೀಕರಣದಲ್ಲಾಗಲೀ ಅಥವಾ ಮಧುಚಂದ್ರದಲ್ಲಾಗಲೀ ಬ್ಯುಸಿಯಾಗಿಲ್ಲ.

ಬದಲಾಗಿ ಆಕೆ ಝೀ ಟಿವಿ ಚಾನೆಲ್‌ಗೆ ಒಂದು ಮೆಗಾ ಧಾರಾವಾಹಿಯನ್ನು ತಯಾರಿಸುವ ಸಿದ್ಧತೆಯಲ್ಲಿದ್ದಾಳೆ. ಅದರಲ್ಲಿ ಆಕೆ ನಟಿಸುತ್ತಾಳೋ, ಸ್ವತಃ ನಿರ್ದೇಶಿಸುತ್ತಾಳೋ ಎಂಬುದು ಇನ್ನೂ ಗೊತ್ತಾಗಿಲ್ಲ, ಸದ್ಯಕ್ಕೆ ಆಕೆ ಅದರ ನಿರ್ಮಾಪಕಿಯಂತೂ ಹೌದು.

ಕ್ರೇಜಿ ಹೀರೋಯಿನ್‌ಳ ಸೆಕೆಂಡ್ ಇನ್ನಿಂಗ್ಸ್ ಹೇಗಿರುತ್ತದೆ ಎಂದು ಊಹಿಸಬಹುದಷ್ಟೇ.

ಮತ್ತೊಂದು ಸುತ್ತಿನ ಪ್ರಶಸ್ತಿಗಳು

ಉದಯ ಟಿವಿ ಪ್ರಶಸ್ತಿ ಮತ್ತು ಹಲೋ ಗಾಂಧಿನಗರ ಪ್ರಶಸ್ತಿಗಳ ನಂತರ ಈಗ ಈ ಟೀವಿಯವರ ಸರದಿ. ಮೇ 6 ರಂದು ನಡೆಯಲಿರುವ ಈ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಸಿನಿಮಾದವರೇ ಪ್ರಶಸ್ತಿಗಳನ್ನು ನೀಡಲಿದ್ದಾರಂತೆ. ಅರಮನೆ ಮೈದಾನದಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ಹಾಡು, ಕುಣಿತ, ಸಂಗೀತ ಎಲ್ಲವೂ ಇದ್ದು ವಿಜೃಂಭಣೆಯಿಂದ ತುಂಬಿರುತ್ತದೆ ಎಂದು ನಂಬಲಾಗಿದೆ. ಒಂದೆಡೆ ಸರಕಾರವು ನೀಡುವ ಪ್ರಶಸ್ತಿ ಸಮಾರಂಭಗಳ ತಮ್ಮ ಎಂದಿನ ನೀರಸ ಶೈಲಿಯಲ್ಲಿ ನಡೆಯುತ್ತಿರುವಾಗ, ಖಾಸಗಿ ಮಾಧ್ಯಮಗಳು ನೀಡುತ್ತಿರುವ ಪ್ರಶಸ್ತಿ ಸಮಾರಂಭಗಳು ವರ್ಣರಂಜಿತವಾಗಿರುವುದು ಸಂತೋಷದ ಸಂಗತಿ.

ರೇಖಾಳ ಸೆಕೆಂಡ್ ಇನ್ನಿಂಗ್ಸ್!

ರೇಖಾ ಎಂಬ ಬಳುಕುವ ಬಳ್ಳಿ ಕನ್ನಡದಲ್ಲಿ ಮತ್ತೆ ಚಾಲ್ತಿಗೆ ಬರುತ್ತಿದ್ದಾಳೆ. ಈಕೆ 'ಚಿತ್ರ' ಎಂಬ ಸಿನಿಮಾದ ಮೂಲಕ ಕನ್ನಡ ಚಿತ್ರರಂಗದಲ್ಲಿ ಎಂಟ್ರಿ ಪಡೆದವಳು. ಆ ನಂತರ 'ತುಂಟಾಟ' ಮತ್ತು 'ಕಿಚ್ಚ' ದಲ್ಲೂ ನಟಿಸಿ ಸೈ ಅನಿಸಿಕೊಂಡಿದ್ದಳು. ಇದೆಲ್ಲದರ ಮಧ್ಯೆ ತೆಲುಗಿಗೂ ಹಾರಿ ಹೋಗಿ ಅಲ್ಲೂ ಒಂದೆರಡು ಹಿಟ್ ಸಿನಿಮಾಗಳಲ್ಲಿ ನಟಿಸಿಬಂದಳು.

ಆದರೆ ಅದಾದನಂತರ ಏನಾಯಿತೋ ಏನೋ? ಈಕೆಗೆ ಕನ್ನಡದಲ್ಲಾಗಲೀ, ತೆಲುಗಿನಲ್ಲಾಗಲೀ ಲೆಕ್ಕಕ್ಕೇ ಇಲ್ಲದಂತಾದಳು. ಆಗ ಬಾಲಿವುಡ್ಡಿಗೆ ಹೋದ ರೇಖಾಳಿಗೆ ಅಲ್ಲೂ ಏನೂ ಸಿಗಲಿಲ್ಲ. ಆಗ ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದ ಆಕೆಯ ಕೆರಿಯರ್ ಮುಗಿದೇ ಹೋಯಿತು ಎಂದು ಎಲ್ಲರೂ ಅಂದಾಜಿಸುತ್ತಿದ್ದಾಗ ರೇಖಾ ಕನ್ನಡ ಚಿತ್ರರಂಗಕ್ಕೆ ಮತ್ತೆ ರಿಎಂಟ್ರಿ ಪಡೆದಿದ್ದಾಳೆ.

ಇದರಲ್ಲಿ ಕನ್ನಡ ಚಿತ್ರರಂಗದವರ ಮೂಢನಂಬಿಕೆಯ ಪಾಲೂ ಇದೆ. ಅವರ ಪ್ರಕಾರ ರೇಖಾ ನಟಿಸಿದ ಚಿತ್ರಗಳೆಲ್ಲ ಹಿಟ್ ಆಗಿರುವುದರಿಂದ ಆಕೆ ಲಕ್ಕಿ ಗರ್ಲ್ ಅಂತೆ! (ಇದೇ ಮಾತನ್ನು ಕೆಲವು ತಿಂಗಳ ಹಿಂದೆ ಗಾಂಧಿನಗರ ರಮ್ಯಳ ಬಗ್ಗೆ ಹೇಳುತ್ತಿತ್ತು!) ಇದಕ್ಕೆ ತಕ್ಕಂತೆ ಆಕೆಯ ಎರಡನೆ ಇನ್ನಿಂಗ್ಸ್ ಅನ್ನು ಪ್ರಾರಂಭಿಸಿದ 'ಚೆಲ್ಲಾಟ' ಕೂಡ ಹಿಟ್ ಆಗಿರುವುದು ಕೂಡ ಗಾಂಧಿನಗರದವರಿಗೆ ಮತ್ತಷ್ಟು ಉತ್ತೇಜನ ನೀಡಿದೆ.

ಇದೆಲ್ಲದರಿಂದಾಗಿ ಈಗ ರೇಖ ಮಾತೆ ಕಾಮಿಡಿ ಟೈಮ್ ಗಣೇಶ್ ಜೊತೆ ಮತ್ತೊಂದು ಸಿನಿಮಾದಲ್ಲಿ ನಟಿಸುತ್ತಿದ್ದಾಳಲ್ಲದೆ, ಯುವ ನಟ ಪ್ರೇಂ ಜೊತೆಗೂ ಇನ್ನೊಂದು ಚಿತ್ರಕ್ಕೆ ಬುಕ್ ಆಗಿದ್ದಾಳೆ. ಇದರ ಜೊತೆ ಕೂಡ್ಲು ರಾಮಕೃಷ್ಣ ನಿರ್ದೇಶನದ 'ತಮಾಷೆಗಾಗಿ' ಚಿತ್ರ ಇನ್ನೇನು ಸದ್ಯದಲ್ಲೇ ಬಿಡುಗಡೆಯಾಗಲಿದೆ. ಕಳೆದ ವರ್ಷ ರಮ್ಯಾ, ರಕ್ಷಿತಾ ಆರ್ಭಟಿಸಿ ಗಾಂಧಿನಗರದಲ್ಲಿ ಮೆರೆದಿದ್ದರೆ ಈ ಬಾರಿ ರೇಖಾ ಮೌನವಾಗಿ ನಂ. 1 ಸ್ಥಾನಕ್ಕೆ ಲಗ್ಗೆಯಿಟ್ಟಿದ್ದಾಳೆ.

ವಿಚಿತ್ರವೆಂದರೆ ಈಕೆಯ ನಂತರ ಸಿನಿಮಾರಂಗವನ್ನು ಪ್ರವೇಶಿಸಿದ ರಮ್ಯ ಈಗ ಹಿರಿಯ ನಟರೊಂದಿಗೆ ನಟಿಸಲು ಸೂಕ್ತ ಎಂಬ ನಂಬಿಕೆ ಹೆಚ್ಚಾಗುತ್ತಿರುವಾಗಲೇ, ರಮ್ಯಳಿಗಿಂತ ಮುನ್ನ ಎಂಟ್ರಿ ಮಾಡಿದ ರೇಖಾ ಇವತ್ತಿನ ಯುವ ನಾಯಕ ನಟರೊಂದಿಗೆ ಆರಾಮವಾಗಿ ನಟಿಸುತ್ತಿರುವುದು!



ಬೇಸಿಗೆಯಲ್ಲಿ 'ಬುದ್ಧಿಜೀವಿಗಳ' ಆರ್ಭಟ


ಏಪ್ರಿಲ್ ತಿಂಗಳ ರಣಬಿಸಿಲು ಆರಂಭವಾಯಿತೆಂದರೆ ಗಾಂಧಿನಗರದ ಒಂದು ವರ್ಗದ ಚಿತ್ರ ನಿರ್ಮಾಪಕರಲ್ಲೂ ಒಂದು ರೀತಿಯ ಹಬೆ ಏರುತ್ತದೆ. ಯಾವುದೇ ಆಡಂಬರವಿಲ್ಲದೇ, ಸುದ್ದಿ ಮಾಡದೇ ಸಿನಿಮಾ ತಯಾರಿಸುವ ಕಲಾತ್ಮಕ ಚಿತ್ರಗಳ ನಿರ್ಮಾಪಕರು ಏಪ್ರಿಲ್ ತಿಂಗಳಲ್ಲಿ ತಮ್ಮ 'ಕಲಾಕೃತಿಗಳನ್ನು' ಪತ್ರಕರ್ತರಿಗೆ ಪ್ರದರ್ಶಿಸುವ ಉತ್ಸಾಹದಲ್ಲಿ ಮುಳುಗುತ್ತಾರೆ. ಅಷ್ಟಕ್ಕೆ ಸುಮ್ಮನಾಗದೇ, ತಮ್ಮ ಚಿತ್ರಗಳನ್ನು ಕುರಿತಂತೆ ಸಂವಾದಗಳನ್ನು ಏರ್ಪಡಿಸುತ್ತಾರೆ. ಅದಕ್ಕೆ ತಕ್ಕಂತೆ, ವಿವಿಧ ಬಳಗಗಳಿಗೆ ಸೇರಿರುವ ಬುದ್ಧಿಜೀವಿಗಳು ತಮಗೆ ಬೇಕಾದವರನ್ನು ಯದ್ವಾತದ್ವಾ ಹೊಗಳುತ್ತಾರೆ.




ಇದಕ್ಕೆ ತಕ್ಕಂತೆ ಮೊನ್ನೆ 'ಮಸಣದ ಮಕ್ಕಳು' ಎಂಬ ಚಿತ್ರದ ಪ್ರದರ್ಶನ ಏರ್ಪಾಡಾಗಿತ್ತು, ಅದಾದನಂತರ ಬರಗೂರು ರಾಮಚಂದ್ರಪ್ಪರವರು ನಿರ್ದೇಶಿಸಿರುವ 'ಜನಪದ' ಚಿತ್ರ ಪ್ರದರ್ಶನವಿತ್ತು, ಮುಂದಿನ ವಾರ ಲಿಂಗದೇವರು ನಿರ್ದೇಶನದ 'ಕಾಡ ಬೆಳದಿಂಗಳು' ಚಿತ್ರದ ಪ್ರದರ್ಶನವಿದೆ. ಇದೆಲ್ಲದರ ಮಧ್ಯೆ ಬಿ.ಆರ್. ಕೇಶವ ನಿರ್ದೇಶನದ 'ಚೈತ್ರ' ಚಿತ್ರದ ಪ್ರದರ್ಶನವೂ ಬಂದುಹೋಯಿತು. ವಾರ್ತಾ ಇಲಾಖೆಯ ಅಧಿಕಾರಿ ಶಿವರುದ್ರಯ್ಯ ಕೂಡಾ ತನ್ನ 'ದಾಟು' ಚಿತ್ರವನ್ನು ನಿರ್ಮಿಸಿ ಪ್ರೀಮಿಯರ್ ಶೋ ನಡೆಸಲು ಓಡಾಡುತ್ತಿದ್ದಾರೆ. ಇನ್ನೊಂದೆರಡು ವಾರದಲ್ಲಿ ಸಂವಾದ ಕಾರ್ಯಕ್ರಮಗಳ ಸುರಿಮಳೆಯೇ ನಡೆಯಲಿದೆ.

ಅಂದಹಾಗೆ, ಕಲಾತ್ಮಕ ಚಿತ್ರಗಳ ಈ ಎಲ್ಲ ಪ್ರಕ್ರಿಯೆಗಳ ಗುರಿ ಪ್ರಶಸ್ತಿ ಆಯ್ಕೆ ಸಮಿತಿ ಚಿತ್ರಗಳನ್ನು ನೋಡುವ ಮೊದಲು ಅದರ ಮೇಲೆ ಪ್ರಭಾವ ಬೀರುವುದೇ ಆಗಿರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ, ಅಲ್ಲವೇ?!

ಅಪ್ಪನಿಗೊಂದು ಕಾಲ ಮಗನಿಗೊಂದು ಕಾಲ?





ದೇವರಾಜ್ ಈಗ ಒಂದು ವಿಚಿತ್ರ ಸಂಕಟವನ್ನು ಎದುರಿಸುತ್ತಿದ್ದಾರೆ. 'ಪ್ರಚಂಡ ರಾವಣ' ಚಿತ್ರವನ್ನು ಮೊನ್ನೆಯಷ್ಟೇ ಮುಗಿಸಿರುವ ದೇವರಾಜ್‌ಗೆ ತಮ್ಮ ಈ ಚಿತ್ರದ ಬಿಡುಗಡೆ ಸಮಯದಲ್ಲೇ ಅವರ ಮಗ ಪ್ರಜ್ವಲ್ ನಟಿಸಿರುವ 'ಗಂಗೆ ಬಾರೇ ತುಂಗೆ ಬಾರೇ' ಮತ್ತು 'ಗೆಳೆಯ' ಚಿತ್ರ ಪ್ರತಿಸ್ಪರ್ಧಿಯಾಗಿ ಬಿಡುಗಡೆಯಾಗಬಹುದೆಂಬ ಆತಂಕ ಕಾಡುತ್ತಿದೆ.

ಈ ಹಿಂದೆ ರಾಜ್‌ಕುಮಾರ್ ಮತ್ತು ಶಿವರಾಜ್‌ಕುಮಾರ್ ಈ ರೀತಿ ಜುಗಲ್‌ಬಂಧಿಯಲ್ಲಿ ಸಿಲುಕಿದ್ದರು. ಈಗ ಆದೇ ತರಹದ ಬಿಕ್ಕಟ್ಟಿನಲ್ಲಿ ದೇವರಾಜ್ ಸಿಕ್ಕಿಹಾಕಿಕೊಂಡಿದ್ದಾರೆ. ತಂದೆ, ಮಗನ ನಡುವೆ ಯಾರು ಗೆಲ್ಲುತ್ತಾರೆ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44